
# “ಶ್ರೀಮಾತೆಯವರ ಸಂಕೇತ ಕುರಿತು ವಿಶೇಷ ಸಂಚಿಕೆ”

ಅಖಿಲ ಭಾರತ ಪತ್ರಿಕೆ
ಫೆಬ್ರವರಿ – 2014



*Keep only my soul to adore eternally*
*And meet Thee in each form*
*and soul of Thee.*

- Sri Aurobindo

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

**ಬೆಲೆ : 15/–**

## ಪರಿವಿಡಿ

### "ಶ್ರೀಮಾತೆಯವರ ಸಂಕೇತ ಕುರಿತು ವಿಶೇಷ ಸಂಚಿಕೆ"

**ಅನು : ಡಾ. ಕೆ.ಎಸ್. ಆಮೂರ**
ಸಂಕೇತವೆಂದರೇನು? 3
ಶ್ರೀಮಾತೆಯವರ ಸಂಕೇತ 4

**ಅನು : ದಿ. ನಾರಾಯಣ ಸಂಗಮ**
ಪರಮೋಚ್ಚ ಶ್ರೀಮಾತೆ, ದೈವೀ ಮಹಾಶಕ್ತಿ 5
ಶ್ರೀಮಾತೆಯ ನಾಲ್ಕು ಶ್ರೇಷ್ಠ ಮುಖಗಳು 10
ಮಹೇಶ್ವರಿ 11
ಮಹಾಕಾಳಿ 13
ಮಹಾಲಕ್ಷ್ಮಿ 15
ಮಹಾಸರಸ್ವತಿ 18
ಶ್ರೀಮಾತೆಯ ಇನ್ನಿತರ ಶ್ರೇಷ್ಠ ವ್ಯಕ್ತಿವಿಶಿಷ್ಟತೆಗಳು 21
ನೀವು ಹೊಂದಿರಬೇಕಾದ ಮೂರು ವಿಷಯಗಳು 22
ಅತಿಮಾನಸ ಬದಲಾವಣೆ 26
(ಮೂಲ ಅನುವಾದವನ್ನು ಪರಿಷ್ಕರಿಸಲಾಗಿದೆ)

**ಅನು : ಡಾ. ಕೆ.ಎಸ್. ಆಮೂರ**
ಹನ್ನೆರಡು ಗುಣಲಕ್ಷಣಗಳು 26
ನಿಷ್ಕಾಪಟ್ಯ 28
ವಿನಮ್ರತೆ 30
ಕೃತಜ್ಞತೆ 32
ಪಟ್ಟುಹಿಡಿಯುವಿಕೆ 34
ಅಭೀಪ್ಸೆ 36
ಸ್ವೀಕೃತಿ 39
ಪ್ರಗತಿ 41
ಧೈರ್ಯ 42
ಒಳ್ಳೆಯತನ 44
ಔದಾರ್ಯ 46
ಸಮಚಿತ್ತತೆ 48
ಶಾಂತಿ 50
**ವಾರ್ತಾಪತ್ರ** 52

## ಸಂಕೇತವೆಂದರೇನು?

ನಾನು ತಿಳಿದುಕೊಂಡ ಹಾಗೆ ಸಂಕೇತ ಒಂದು ಸ್ತರದ ಮೇಲಿನ ರೂಪ, ಅದು ಇನ್ನೊಂದು ಸ್ತರದ ಸತ್ಯವನ್ನು ಪ್ರತಿನಿಧಿಸುತ್ತದೆ. ಉದಾಹರಣೆಗೆ ನಿಶಾನೆ ಒಂದು ದೇಶದ ಸಂಕೇತ. ಆದರೆ ಸಾಮಾನ್ಯವಾಗಿ ಎಲ್ಲ ರೂಪಗಳು ಸಂಕೇತಗಳಾಗಿರುತ್ತವೆ. ನಮ್ಮ ಈ ದೇಹ ನಮ್ಮ ನಿಜವಾದ ಸತ್ತೆಯ ಸಂಕೇತವಾಗಿರುತ್ತದೆ. ಮತ್ತು ಪ್ರತಿಯೊಂದು ಯಾವುದೋ ಉಚ್ಚತರ ನೈಜತೆಯ ಒಂದು ಸಂಕೇತವಾಗಿರುತ್ತದೆ. ಹಾಗಿದ್ದಾಗ್ಯೂ ಭಿನ್ನ ಬಗೆಯ ಸಂಕೇತಗಳಿರುತ್ತವೆ.

1. ವೈದಿಕ ಋಷಿಗಳು ತಮ್ಮ ಸುತ್ತುಮುತ್ತಲಿರುವ ವಸ್ತುಗಳಿಂದ ರೂಪಿಸಿದ ಸಾಂಪ್ರದಾಯಿಕ ಸಂಕೇತಗಳಿವೆ. ಆಕಳು ಪ್ರಕಾಶವನ್ನು ಪ್ರತಿನಿಧಿಸುತ್ತಿತ್ತು, ಏಕೆಂದರೆ 'ಗೋ' ಶಬ್ದದ ಅರ್ಥ 'ಕಿರಣ' ಮತ್ತು 'ಆಕಳು' ಎಂದಾಗಿತ್ತು. ಏಕೆಂದರೆ ಆಕಳು ಅವರ ಬಹು ಮೌಲ್ಯವುಳ್ಳ ಆಸ್ತಿಯಾಗಿತ್ತು, ದರೋಡೆಕೋರರು ಅದನ್ನು ಕಳುವು ಮಾಡಿಕೊಂಡು ಹೋಗುವ ಮತ್ತು ಮರೆಮಾಚಿಡುವ ಅಪಾಯವಿರುತ್ತಿತ್ತು. ಆದರೆ ಒಮ್ಮೆ ಸೃಷ್ಟಿಯಾದ ಇಂತಹ ಸಂಕೇತ ಜೀವಂತವಾಗಿರುತ್ತದೆ.

2. ಜೀವನದ ಸಂಕೇತಗಳೆಂದು ಕರೆಯಬಹುದಾದವುಗಳನ್ನು ಕೃತ್ರಿಮವಾಗಿ ಆಯ್ದುಕೊಳ್ಳಲಾಗಿರುವುದಿಲ್ಲ ಇಲ್ಲವೆ ಅವು ಪ್ರಜ್ಞೆಯಿಂದ ಉದ್ದೇಶ–ಪೂರ್ವಕವಾಗಿ ಮಾನಸಿಕ ವಿವರಣೆಗೆ ಒಳಗಾಗಿರುವುದಿಲ್ಲ, ಆದರೆ ದೈನಂದಿನ ಜೀವನದಿಂದ ಸ್ವಾಭಾವಿಕವಾಗಿ ಹುಟ್ಟಿ ಬರುತ್ತವೆ, ನಮ್ಮ ಸಾಮಾನ್ಯ ಜೀವನದ ಪಥದ ಪರಿಸ್ಥಿತಿಯನ್ನು ನಿರ್ಮಿಸುವ ಪರಿಸರದಿಂದ ಬೆಳೆಯುತ್ತವೆ. ಸ್ತರದ ಮೇಲೊಂದು ಸ್ತರವಿರುವ, ಶಿಖರದ ಮೇಲೊಂದು ಶಿಖರವಿರುವ ಪರ್ವತ ಪ್ರಾಚೀನ ಕಾಲದ ಜನರಿಗೆ ಯೋಗ–ಮಾರ್ಗದ ಸಂಕೇತವಾಗಿತ್ತು.

3. ತಮ್ಮದೇ ಅಂತರ್ನಿಹಿತ ಸೂಕ್ತತೆ ಹಾಗೂ ಸಾಮರ್ಥ್ಯ ಇರುವ ಸಂಕೇತಗಳಿರುತ್ತವೆ. ಆಕಾಶ ಇಲ್ಲವೆ ಆಕಾಶದ್ರವ್ಯ(ether)ವಿರುವ ಸ್ಥಳಾವಕಾಶ(space) ಅನಂತದ, ಎಲ್ಲವನ್ನೂ ಆವರಿಸುವ ಸನಾತನ ಬ್ರಹ್ಮನ್‌ದ ಸಂಕೇತವಾಗಿರುತ್ತದೆ. ಯಾವುದೇ ರಾಷ್ಟ್ರೀಯತೆಯಲ್ಲಿ ಅದು ಅಂತಹ ಅರ್ಥವನ್ನೇ ಕೊಡುತ್ತದೆ. ಹಾಗೆಯೇ ಸೂರ್ಯ ವಿಶ್ವಂಭರವಾಗಿ ಅತಿಮಾನಸ ದೈವೀ ಪ್ರಕಾಶ, ದೈವೀ ಆಧ್ಯಾತ್ಮ ಜ್ಞಾನದ ಸಂಕೇತವಾಗಿದ್ದಾನೆ.



4. ಸಂಖ್ಯೆಗಳು, ಅಕ್ಷರಗಳು ಮಾನಸಿಕ ಸಂಕೇತಗಳ ಉದಾಹರಣೆಗಳಾಗಿವೆ. ಒಮ್ಮೆ ಅವುಗಳನ್ನು ಸ್ವೀಕಾರ ಮಾಡಿದ ನಂತರ ಅವು ಕೂಡ ಕ್ರಿಯಾಶೀಲವಾಗುತ್ತವೆ ಮತ್ತು ಉಪಯುಕ್ತವಾಗಬಹುದು. ಹೀಗೆ ಜ್ಯಾಮಿತಿಯ ಆಕೃತಿಗಳಿಗೆ ವಿಶ್ವಂಭರವಾಗಿ ವಿವರಣೆ ದೊರಕಿದೆ.

**(23/954)** **– ಶ್ರೀ ಅರವಿಂದರು**

*

## ಶ್ರೀಮಾತೆಯವರ ಸಂಕೇತ



ಕೇಂದ್ರದಲ್ಲಿರುವ ವರ್ತುಲ ಪರಮೋಚ್ಚ ಮಹಾಶಕ್ತಿ ಸ್ವರೂಪಿಣಿಯಾದ ಶ್ರೀಮಾತೆಯವರನ್ನು ಪ್ರತಿನಿಧಿಸುತ್ತದೆ.

ನಾಲ್ಕು ಪಕಳೆಗಳು ಶ್ರೀಮಾತೆಯವರ ನಾಲ್ಕು ಮುಖಗಳು – ಮತ್ತು ಹನ್ನೆರಡು ಪಕಳೆಗಳು ಅವರ ಹನ್ನೆರಡು ಗುಣಲಕ್ಷಣಗಳು.

*

ಅದು ಪರಮೋಚ್ಚ ಪ್ರಜ್ಞೆಯ ಶ್ವೇತ ಕಮಲದ ಸಾಂಕೇತಿಕ ಸ್ಥೂಲ ಕಲ್ಪನೆ, ಕೇಂದ್ರದಲ್ಲಿರುವ ಮಹಾಶಕ್ತಿಯೊಂದಿಗೆ (ವಿಶ್ವಂಭರ ಸೃಷ್ಟಿಯೆಂದು ತಳೆದ ಶ್ರೀಮಾತೆಯ ರೂಪ) ನಾಲ್ಕು ಮುಖಗಳು ಮತ್ತು ಹನ್ನೆರಡು ಗುಣಲಕ್ಷಣಗಳು.

*

ಕೇಂದ್ರ ಕಮಲ ದೈವೀಪ್ರಜ್ಞೆಯನ್ನು ಪ್ರತಿನಿಧಿಸುತ್ತದೆ.

ನಾಲ್ಕು ಪಕಳೆಗಳು ಶ್ರೀಮಾತೆಯ ನಾಲ್ಕು ಸಾಮರ್ಥ್ಯಗಳನ್ನು ಪ್ರತಿನಿಧಿಸುತ್ತವೆ.

ಹನ್ನೆರಡು ಪಕಳೆಗಳು ಶ್ರೀಮಾತೆಯವರ ಕಾರ್ಯಕ್ಕಾಗಿ ಪ್ರಕಟಗೊಂಡ ಹನ್ನೆರಡು ಸಾಮರ್ಥ್ಯಗಳನ್ನು ಪ್ರತಿನಿಧಿಸುತ್ತವೆ.

**(13/64–65)** **– ಶ್ರೀಮಾತೆ**

*

**ಏಪ್ರಿಲ್ 15, 1934:**

ಸಾರಭೂತವಾಗಿ (ಸರ್ವ ಸಾಧಾರಣ ತತ್ವದಲ್ಲಿ) ಆ ಹನ್ನೆರಡು ಸಾಮರ್ಥ್ಯಗಳು ಸಂಪೂರ್ಣ ಪ್ರಕಟಣೆಗಾಗಿ ಇರುವ ಕಂಪನಗಳು. ಈ ಹನ್ನೆರಡು ಸಾಮರ್ಥ್ಯಗಳು ಮೊದಲಿನಿಂದಲೂ ಶ್ರೀಮಾತೆಯವರ ಶಿರದ ಮೇಲೆ ಇರುವುದು ಕಂಡುಬರುತ್ತಿತ್ತು. ಹೀಗೆ, ನಿಜವಾಗಿ, ಸೂರ್ಯನ ಹನ್ನೆರಡು ಕಿರಣಗಳಿವೆ, ಏಳಲ್ಲ, ಹನ್ನೆರಡು ಗ್ರಹಗಳಿವೆ ಇತ್ಯಾದಿ.

**(32/598)** **– ಶ್ರೀ ಅರವಿಂದರು**

*

## ಪರಮೋಚ್ಚ ಶ್ರೀಮಾತೆ, ದೈವೀ ಮಹಾಶಕ್ತಿ
### (ಪರಮೋಚ್ಚನ ದೈವೀಪ್ರಜ್ಞೆ ಮತ್ತು ದೈವೀಶಕ್ತಿ)

ಶ್ರೀಮಾತೆಯ ನಾಲ್ಕು ದೈವೀ ಸಾಮರ್ಥ್ಯಗಳು ಅವಳ ನಾಲ್ಕು ಮಹೋನ್ನತ ದೈವೀ ವ್ಯಕ್ತಿವಿಶಿಷ್ಟತೆಗಳಾಗಿವೆ. ಅವು ಅವಳ ದೈವತ್ವದಿಂದ ಮೂರ್ತಗೊಂಡ ರೂಪಗಳು. ಈ ರೂಪಗಳ ಮೂಲಕ ಅವಳು ಜೀವಿಗಳ ಮೇಲೆ ಕಾರ್ಯಕೈಕೊಳ್ಳುತ್ತಾಳೆ, ಜಗತ್ತುಗಳಲ್ಲಿರುವ ತನ್ನ ಸೃಷ್ಟಿಗಳನ್ನು ಕ್ರಮಬದ್ಧ–ಗೊಳಿಸುತ್ತಾಳೆ ಮತ್ತು ಸಾಮರಸ್ಯಕ್ಕೊಳಪಡಿಸುತ್ತಾಳೆ, ತನ್ನ ಸಹಸ್ರಾರು ಶಕ್ತಿಗಳ ಕಾರ್ಯಗತಿಗಳಿಗೆ ಮಾರ್ಗದರ್ಶನ ಮಾಡುತ್ತಾಳೆ. ಏಕೆಂದರೆ ಶ್ರೀಮಾತೆ ಏಕೈಕಳಾಗಿದ್ದರೂ ನಮ್ಮೆದುರು ಭಿನ್ನ ಮುಖ ಧರಿಸಿ ಬರುತ್ತಾಳೆ, ಅವಳ ಸಾಮರ್ಥ್ಯಗಳು ಹಾಗೂ ವ್ಯಕ್ತಿವಿಶಿಷ್ಟತೆಗಳು ಅನೇಕವಾಗಿವೆ, ವಿಶ್ವದಲ್ಲಿ ಅವಳ ಕಾರ್ಯಕೈಕೊಳ್ಳಲು ಆಕೆಯ ಅಂಶ ವಿಶೇಷದಿಂದ ಹೊರಹೊಮ್ಮಿದ ವ್ಯಕ್ತಿಗಳು ಹಾಗೂ ವಿಭೂತಿಗಳು ಅನೇಕರಿದ್ದಾರೆ. ನಾವು ಶ್ರೀಮಾತೆಯೆಂದು ಆರಾಧಿಸುವ ಆ ದೈವೀ ಏಕೈಕಳಾದವಳು ದೈವೀಪ್ರಜ್ಞೆಯ ಶಕ್ತಿ ಸರ್ವಸ್ವವಾಗಿದ್ದಾಳೆ. ಆ ದೈವೀಶಕ್ತಿಯೇ ಅಸ್ತಿತ್ವದ ಮೇಲೆ ಅಧಿಕಾರ ನಡೆಸುತ್ತದೆ. ಶ್ರೀಮಾತೆ ಏಕೈಕಳಾದರೂ ಬಹುಮುಖವುಳ್ಳವಳು, ಹಾಗಾಗಿ ಅವಳ ಚಲನೆಯನ್ನು ತಿಳಿದುಕೊಳ್ಳುವುದು ಅತ್ಯಂತ ತೀವ್ರಗತಿಯ ಮನಸ್ಸಿಗೂ, ಮುಕ್ತ ಹಾಗೂ ವಿಶಾಲವಾದ ಬುದ್ಧಿಮತ್ತೆಗೂ ಅಸಾಧ್ಯವಾದದ್ದು. ಶ್ರೀಮಾತೆ ಪರಮೋಚ್ಚನ ಪ್ರಜ್ಞೆ ಹಾಗೂ ಶಕ್ತಿಯಾಗಿದ್ದಾಳೆ ಮತ್ತು ತಾನು ಸೃಷ್ಟಿಸಿರುವುದೆಲ್ಲದರ ಮೇಲ್ಗಡೆ ಬಹಳ ದೂರದಲ್ಲಿದ್ದಾಳೆ, ಆದರೆ ಅವಳ ರೀತಿಗಳ ಒಂದಿಷ್ಟನ್ನು ಅವಳ ಮೂರ್ತರೂಪಗಳ ಮೂಲಕ ನೋಡಬಹುದು



ಹಾಗೂ ಭಾವನೆಗೆ ತಂದುಕೊಳ್ಳಬಹುದು, ಗ್ರಹಿಸುವುದಕ್ಕೆ ಹೆಚ್ಚು ಸುಲಭವಾಗ–ಬಹುದು, ಏಕೆಂದರೆ ಆ ದೇವತಾ ರೂಪಗಳು ಸುನಿರ್ದಿಷ್ಟವಾದವುಗಳು, ಮನೋಧರ್ಮದಲ್ಲಿ ಹಾಗೂ ಕ್ರಿಯೆಯಲ್ಲಿ ಸೀಮಿತವಾದವುಗಳು, ತಾನು ಸೃಷ್ಟಿಸಿದ ಜೀವಿಗಳಿಗೆ ಆ ರೂಪಗಳಲ್ಲಿ ಪ್ರಕಟವಾಗಲು ಶ್ರೀಮಾತೆ ಒಪ್ಪಿಕೊಂಡಿದ್ದಾಳೆ.

ಶ್ರೀಮಾತೆಯ ಇರುವಿಕೆಯಲ್ಲಿ ಮೂರು ಬಗೆಗಳಿವೆ. ನೀವು ದೈವೀ ಪ್ರಜ್ಞಾ–ಶಕ್ತಿಯೊಡನೆ ಏಕತೆಯ ಸ್ಪರ್ಶದಲ್ಲಿ ಬಂದಾಗ, ಆ ಮೂರು ಬಗೆಗಳ ಬಗ್ಗೆ ಅರಿವುಳ್ಳವರಾಗುವಿರಿ. ಆ ದೈವೀ ಪ್ರಜ್ಞಾ–ಶಕ್ತಿಯೇ ನಮ್ಮನ್ನು, ವಿಶ್ವವನ್ನು ಮೇಲಕ್ಕೆತ್ತಿ ಹಿಡಿಯುತ್ತದೆ. ವಿಶ್ವಾತೀತ, ಮೂಲ ಪರಮೋಚ್ಚ ಶಕ್ತಿಯಾಗಿ ಅವಳು ಲೋಕಗಳ ಮೇಲ್ಗಡೆ ಇರುತ್ತಾಳೆ ಮತ್ತು ಸೃಷ್ಟಿಯನ್ನು ಪರಮೋಚ್ಚನ ಎಂದಿಗೂ ಪ್ರಕಟವಾಗದ ರಹಸ್ಯದೊಡನೆ ಜೋಡಿಸುತ್ತಾಳೆ. ವಿಶ್ವಂಭರಳಾದ ವಿಶ್ವವ್ಯಾಪಿ ಮಹಾಶಕ್ತಿಯಾದ ಅವಳು ಈ ಎಲ್ಲ ಸತ್ತೆಗಳನ್ನು ಸೃಷ್ಟಿಸುತ್ತಾಳೆ ಮತ್ತು ಈ ಎಲ್ಲ ಲಕ್ಷಾನುಗಟ್ಟಲೆ ವಿಧಾನಗಳನ್ನು ಹಾಗೂ ಶಕ್ತಿಗಳನ್ನು ಒಳಗೊಂಡಿರುತ್ತಾಳೆ, ಅವುಗಳಲ್ಲಿ ಪ್ರವೇಶಿಸುತ್ತಾಳೆ, ಅವುಗಳಿಗೆ ಆಧಾರ ನೀಡುತ್ತಾಳೆ ಮತ್ತು ಅವುಗಳನ್ನು ನಿರ್ದೇಶಿಸುತ್ತಾಳೆ. ಈ ಎರಡೂ ವಿಶಾಲ ರೀತಿಯ ಅಸ್ತಿತ್ವಗಳ ಸಾಮರ್ಥ್ಯವನ್ನು ಮೈವೆತ್ತು ನಮಗೆ ಅವು ಜೀವಂತವಾಗಿರುವಂತೆ, ಹತ್ತಿರವಾಗಿರುವಂತೆ ಮಾಡುತ್ತಾಳೆ ಹಾಗೂ ಮಾನವ ವ್ಯಕ್ತಿವಿಶಿಷ್ಟತೆ ಮತ್ತು ದೈವೀ ಪ್ರಕೃತಿ ಇವುಗಳ ನಡುವೆ ಮಧ್ಯಸ್ಥಿಕೆ ವಹಿಸುತ್ತಾಳೆ.

ಅನನ್ಯಳಾದ ಮೂಲ ವಿಶ್ವಾತೀತ ದೈವೀಶಕ್ತಿ ಶ್ರೀಮಾತೆ ಎಲ್ಲ ಜಗತ್ತುಗಳ ಮೇಲಿದ್ದುಕೊಂಡಿದ್ದಾಳೆ ಮತ್ತು ತನ್ನ ಸನಾತನ ಪ್ರಜ್ಞೆಯಲ್ಲಿ ಪರಮೋಚ್ಚ ಭಗವಂತನನ್ನು ಧಾರಣ ಮಾಡಿದ್ದಾಳೆ. ಏಕಾಕಿಯಾಗಿ, ಸರ್ವತಂತ್ರ ಸ್ವತಂತ್ರ ದೈವೀ ಸಾಮರ್ಥ್ಯಕ್ಕೆ ಮತ್ತು ಅನಿರ್ವಚನೀಯ ದೈವೀ ಸಾಮರ್ಥ್ಯಕ್ಕೆ ಆಶ್ರಯ ನೀಡಿದ್ದಾಳೆ. ಪ್ರಕಟಿಸಬೇಕಾಗಿರುವ ದೈವೀ ಸತ್ಯಗಳನ್ನು ಒಳಗೊಳ್ಳುತ್ತ ಇಲ್ಲವೆ ಅವುಗಳಿಗೆ ಕರೆ ಕೊಡುತ್ತ ಅವುಗಳನ್ನು ದೈವೀ ರಹಸ್ಯದಿಂದ ಕೆಳಗಿಳಿಸಿ ತರುತ್ತಾಳೆ, ಆ ರಹಸ್ಯದಲ್ಲಿ ಆ ಸತ್ಯಗಳು ಅವಳ ಅನಂತ ಪ್ರಜ್ಞೆಯ ಪ್ರಕಾಶದಲ್ಲಿ ಅಡಗಿಕೊಂಡಿರುವಂತಹ–ವಾಗಿರುತ್ತವೆ. ಆ ಸತ್ಯಗಳಿಗೆ ಅವಳು ತನ್ನ ಸರ್ವ ಸಾಮರ್ಥ್ಯದಿಂದ ಒಂದೊಂದು ರೂಪವನ್ನು, ಅಪಾರ ಪ್ರಾಣಶಕ್ತಿಯನ್ನು, ವಿಶ್ವದಲ್ಲಿ ಒಂದೊಂದು ದೇಹವನ್ನು ಕೊಡುತ್ತಾಳೆ. ಪರಮೋಚ್ಚನು ಅವಳಲ್ಲಿ ಎಲ್ಲ ಕಾಲದಲ್ಲಿ ಸನಾತನ ಸಚ್ಚಿದಾನಂದನೆಂದು ಪ್ರಕಟನಾಗಿದ್ದಾನೆ. ಜಗತ್ತುಗಳಲ್ಲಿ, ದೈವೀ ಸ್ತರಗಳಲ್ಲಿ,

ದೇವರುಗಳಲ್ಲಿ ಹಾಗೂ ಅವರ ಚೈತನ್ಯಗಳಲ್ಲಿ ಅವಳ ಮೂಲಕ ಅವನು ಈಶ್ವರ–ಶಕ್ತಿ ಎಂಬ ಏಕ ಮತ್ತು ದ್ವಿವಿಧ ಪ್ರಜ್ಞೆಯೆಂದು ಮತ್ತು ಪುರುಷ–ಪ್ರಕೃತಿಯ ತತ್ವವೆಂದು ಪ್ರಕಟನಾಗಿದ್ದಾನೆ. ಮತ್ತು ಆಕೆಯಿಂದಾಗಿಯೇ ತಿಳಿದುಬಂದ ಹಾಗೂ ತಿಳಿದು ಬಂದಿರದ ಜಗತ್ತುಗಳಲ್ಲಿ ಆಕಾರ ತಳೆದಿದ್ದಾನೆ. ಎಲ್ಲವೂ ಅವಳು ಪರಮೋಚ್ಚನೊಡನೆ ನಡೆಸಿರುವ ಲೀಲೆ. ಎಲ್ಲವೂ ಅವಳಿಂದಾದ ಸನಾತನನ ರಹಸ್ಯಗಳ, ಅನಂತನ ಪವಾಡಗಳ ಪ್ರಕಟಣೆ. ಎಲ್ಲವೂ ಅವಳೇ ಆಗಿದ್ದಾಳೆ, ಏಕೆಂದರೆ ಎಲ್ಲರೂ ದೈವೀ ಪ್ರಜ್ಞಾ–ಶಕ್ತಿಯ ಅಂಶ ಹಾಗೂ ಭಾಗಗಳಾಗಿದ್ದಾರೆ. ಅವಳು ನಿರ್ಧರಿಸಿದುದರ ಹಾಗೂ ಅದಕ್ಕೆ ಪರಮೋಚ್ಚನು ಅನುಮತಿ ನೀಡಿದುದರ ಹೊರತಾಗಿ ಇಲ್ಲಿ ಅಥವಾ ಬೇರೆಡೆಯಲ್ಲಿ ಇನ್ನೇನೂ ಇರಲಾರದು. ಪರಮೋಚ್ಚನಿಂದ ಚಾಲನೆಗೊಳಗಾಗಿ ಅವಳು ಗ್ರಹಿಸಿದುದರ ಮತ್ತು ತನ್ನ ಸೃಷ್ಟಿಸುವ ಆನಂದದಲ್ಲಿ ಬೀಜರೂಪದಲ್ಲಿ ಎರಕ ನೀಡಿದುದರ ಹೊರತಾಗಿ ಬೇರೇನೂ ಆಕಾರ ತಳೆಯಲಾರದು.

ವಿಶ್ವಂಭರ ಮಾತೆಯಾದ ಮಹಾಶಕ್ತಿ ಪರಮೋಚ್ಚನಿಂದ ಬಂದದ್ದನ್ನೆಲ್ಲ ತನ್ನ ವಿಶ್ವಾತೀತ ಪ್ರಜ್ಞೆಯ ಮೂಲಕ ಕಾರ್ಯಗತಗೊಳಿಸುತ್ತಾಳೆ ಮತ್ತು ತಾನು ರಚಿಸಿದ ಜಗತ್ತುಗಳಲ್ಲಿ ಪ್ರವೇಶಿಸುತ್ತಾಳೆ, ಅವಳ ಸಾನ್ನಿಧ್ಯ ದೈವೀ ಮನೋಧರ್ಮದಿಂದ ಎಲ್ಲವನ್ನೂ ಪೋಷಿಸುವ ದೈವೀಶಕ್ತಿ ಹಾಗೂ ಆನಂದಗಳಿಂದ ಅವುಗಳನ್ನು ತುಂಬಿಕೊಳ್ಳುತ್ತದೆ ಮತ್ತು ಅವುಗಳಿಗೆ ಆಧಾರ ನೀಡುತ್ತದೆ, ಈ ಶಕ್ತಿ, ಆನಂದಗಳಿಲ್ಲದೆ ಆ ಜಗತ್ತುಗಳು ಅಸ್ತಿತ್ವದಲ್ಲಿರಲಾರವು. ನಾವು ಪ್ರಕೃತಿ ಎಂದು ಕರೆಯುವುದು ಅತ್ಯಂತ ಬಾಹ್ಯದಲ್ಲಿರುವ ಅವಳ ಕಾರ್ಯನಿರ್ವಾಹಕ ಮುಖ. ಅವಳು ತನ್ನ ವಿಧಾನಗಳ ಹಾಗೂ ಶಕ್ತಿಗಳ ಸಾಮರಸ್ಯವನ್ನು ಯೋಗ್ಯ ಹಾಗೂ ಕ್ರಮಬದ್ಧ ರೀತಿಯಲ್ಲಿ ವ್ಯವಸ್ಥೆಗೆ ಒಳಪಡಿಸುತ್ತಾಳೆ, ಪ್ರಕೃತಿಯ ಕಾರ್ಯಾಚರಣೆಗಳಿಗೆ ಪ್ರಚೋದನೆ ನೀಡುತ್ತಾಳೆ, ಕಾಣಬಹುದಾದ ಇಲ್ಲವೆ ಅನುಭವಕ್ಕೆ ತಂದುಕೊಳ್ಳಬಹುದಾದ ಇಲ್ಲವೆ ಜೀವನದ ಚಲನೆಯಲ್ಲಿ ಇರಿಸಬಹುದಾದ ಎಲ್ಲದರಲ್ಲಿ ರಹಸ್ಯವಾಗಿ ಇಲ್ಲವೆ ಪ್ರಕಟವಾಗಿ ಚಲಿಸುತ್ತಾಳೆ. ಜಗತ್ತುಗಳಲ್ಲಿ ಪ್ರತಿಯೊಂದು ಆ ಜಗತ್ತುಗಳ ಹಾಗೂ ವಿಶ್ವದ ಮಹಾಶಕ್ತಿಯ ಒಂದು ಲೀಲೆಯಲ್ಲದೆ ಬೇರೇನಲ್ಲ. ಅವಳು ಅಲ್ಲಿ ವಿಶ್ವವ್ಯಾಪಿ ದಿವ್ಯಾತ್ಮ ಹಾಗೂ ವಿಶ್ವಾತೀತ ಮಾತೆಯ ದೈವೀ ವ್ಯಕ್ತಿವಿಶಿಷ್ಟತೆಯುಳ್ಳವಳಾಗಿ ಇರುತ್ತಾಳೆ. ಪ್ರತಿಯೊಂದೂ ತನ್ನ ದರ್ಶನದಲ್ಲಿ ಕಂಡುಕೊಂಡ ಏನೋ ಒಂದು, ಅದನ್ನು ಅವಳು ತನ್ನ



ಸೌಂದರ್ಯಭರಿತ ಹೃದಯದಲ್ಲಿ, ಸಾಮರ್ಥ್ಯದಲ್ಲಿ ಕೂಡಿಟ್ಟುಕೊಂಡಿರುತ್ತಾಳೆ, ತನ್ನ ಆನಂದದಲ್ಲಿ ಸೃಷ್ಟಿಸಿರುತ್ತಾಳೆ.

ಆದರೆ ಆಕೆಯ ಸೃಷ್ಟಿಯ ಸ್ತರಗಳು ಅನೇಕವಾಗಿವೆ, ಹಂತಗಳು ಬಹಳಷ್ಟಿವೆ. ಈ ಪ್ರಕಟಣೆಯ ಶಿಖರದಲ್ಲಿ ನಾವು ಭಾಗಿಯಾಗಿದ್ದೇವೆ. ಅಲ್ಲಿ ಅನಂತ ಅಸ್ತಿತ್ವದ, ಪ್ರಜ್ಞೆಯ, ಶಕ್ತಿಯ ಹಾಗೂ ದಿವ್ಯಾನಂದದ ಜಗತ್ತುಗಳಿವೆ. ಅವುಗಳ ಮೇಲ್ಗಡೆ ಶ್ರೀಮಾತೆ ಪರದೆ ಸರಿಸಿ ಹೊರಬಂದು ಸನಾತನ ದೈವೀ ಸಾಮರ್ಥ್ಯವಾಗಿ ನಿಂತಿದ್ದಾಳೆ. ಅಲ್ಲಿ ಎಲ್ಲ ಸತ್ತೆಗಳು ವರ್ಣನಾತೀತ ಸಂಪೂರ್ಣತೆ ಮತ್ತು ಬದಲಾಗದ ಏಕತೆಯಲ್ಲಿ ಜೀವಿಸುತ್ತವೆ, ಏಕೆಂದರೆ ಅವುಗಳನ್ನು ಅವಳು ತನ್ನ ತೋಳುಗಳಲ್ಲಿ, ಎಲ್ಲ ಕಾಲಕ್ಕೂ, ಸುರಕ್ಷಿತವಾಗಿ ಕೊಂಡೊಯ್ಯುತ್ತಾಳೆ. ನಮಗೆ ಸಮೀಪವಾಗಿರುವಲ್ಲಿ ಪರಿಪೂರ್ಣ ಅತಿಮಾನಸ ಸೃಷ್ಟಿಯಿದೆ. ಅದರಲ್ಲಿ ಶ್ರೀಮಾತೆ ಅತಿಮಾನಸ ಮಹಾಶಕ್ತಿಯಾಗಿದ್ದಾಳೆ, ಅವಳು ದೈವೀ ಸರ್ವಜ್ಞ ಸಂಕಲ್ಪ ಮತ್ತು ಸರ್ವಸಾಮರ್ಥ್ಯವಿರುವ ದೈವೀಜ್ಞಾನ ಸ್ವರೂಪಳಾಗಿದ್ದಾಳೆ. ಆ ಮಹಾಶಕ್ತಿ ತನ್ನ ಕಾರ್ಯದಲ್ಲಿ ವಿಫಲಗಳಾಗದೆ ಇರುವುದು, ಸ್ವಯಂಪ್ರೇರಣೆಯಿಂದ ಪ್ರತಿಯೊಂದು ಪ್ರಕ್ರಿಯೆಯಲ್ಲಿ ಪರಿಪೂರ್ಣಳಾಗಿರುವುದು ಯಾವಾಗಲೂ ತೋರಿಬರುತ್ತದೆ. ಅಲ್ಲಿ ಎಲ್ಲ ಚಲನೆಗಳು ಸತ್ಯದ ಹೆಜ್ಜೆಗಳಾಗಿರುತ್ತವೆ, ಎಲ್ಲ ಸತ್ತೆಗಳು ದೈವೀ ಪ್ರಕಾಶದ ಆತ್ಮಗಳು, ಸಾಮರ್ಥ್ಯಗಳು ಹಾಗೂ ದೇಹಗಳಾಗಿರುತ್ತವೆ. ಅಲ್ಲಿ ಎಲ್ಲ ಅನುಭವಗಳು ಗಾಢವಾದ, ಪರಿಪೂರ್ಣ ಆನಂದದ ತೆರೆಗಳು, ಪ್ರವಾಹಗಳು ಹಾಗೂ ಸಮುದ್ರಗಳಾಗಿರುತ್ತವೆ. ನಾವು ಜೀವಿಸುವ ಇಲ್ಲಿಯವುಗಳು ಅವಿದ್ಯೆಯ ಜಗತ್ತುಗಳಾಗಿವೆ, ಅವು ಪ್ರಜ್ಞೆಯಲ್ಲಿ ಮೂಲದಿಂದ ಪ್ರತ್ಯೇಕಗೊಂಡ ಅವಿದ್ಯೆಯ, ಮನಸ್ಸು ಪ್ರಾಣ ದೇಹಗಳಿರುವ ಜಗತ್ತುಗಳಾಗಿವೆ, ಅವುಗಳಲ್ಲಿ ಈ ಪೃಥ್ವಿ ಪ್ರಮುಖವಾದ ಕೇಂದ್ರ ಮತ್ತು ಅದರ ಉತ್ಕ್ರಾಂತಿ ನಿರ್ಧಾರಕ ಪ್ರಕ್ರಿಯೆ. ಅದರಲ್ಲಿ ಎಲ್ಲ ಮಬ್ಬುತನ, ಹೋರಾಟ ಮತ್ತು ಅಪರಿಪೂರ್ಣತೆಗಳಿದ್ದಾಗಲೂ ಕೂಡ ವಿಶ್ವಂಭರ ಶ್ರೀಮಾತೆ ಅದನ್ನು ಎತ್ತಿ ಹಿಡಿಯುತ್ತಾಳೆ ಮತ್ತು ಅದು ತನ್ನ ರಹಸ್ಯ ಗುರಿಯತ್ತ ಸಾಗಲು ಅದಕ್ಕೆ ಮಾರ್ಗದರ್ಶನ ಮಾಡುತ್ತಾಳೆ.

ಮೂರು ಲೋಕಗಳ ಮಹಾಶಕ್ತಿಯೆಂದಾಗಿ ಶ್ರೀಮಾತೆ ಪೃಥ್ವಿ ಮತ್ತು ಪೃಥ್ವಿಯ ಮೇಲೆ ಕೆಳಗಿಳಿಸಿ ತರಬೇಕಾದ ಅತಿಮಾನಸ ಪ್ರಕಾಶ, ದೈವೀ ಸತ್ಯದ ಜೀವನ, ದೈವೀ ಸೃಷ್ಟಿ ಇದೆಲ್ಲ ಇರುವ ಲೋಕ ಇವುಗಳಿಗೆ ಮಧ್ಯವರ್ತಿಯಾದ ಸ್ತರದಲ್ಲಿ ನಿಂತಿರುತ್ತಾಳೆ. ಮೇಲಕ್ಕೇರಿ ಹೋಗಲು ಮತ್ತು ಕೆಳಗಿಳಿದು ಬರಲು ಇರುವ

ಪ್ರಜ್ಞೆಯ ಸ್ತರಗಳ ಶ್ರೇಣಿ ವ್ಯವಸ್ಥೆ ಎರಡು ಬಗೆಯ ಏಣಿಗಳಿದ್ದ ಹಾಗಿದೆ. ಕೆಳಗಿಳಿದು ಬಂದ ಪ್ರಜ್ಞೆ ಅಚೇತನದಲ್ಲಿ ಅಡಗಿ ಹೋಗುತ್ತದೆ. ಅದೇ ಮತ್ತೆ ಪ್ರಾಣ, ಜೀವ, ಮನಸ್ಸುಗಳ ಅರಳಿಕೊಳ್ಳುವಿಕೆಯ ಮೂಲಕ ಮೇಲಕ್ಕೇರಿ ಹೋಗಿ ಅನಂತ ದಿವ್ಯಾತ್ಮನನ್ನು ತಲುಪುತ್ತದೆ. ತಾನು ಕಂಡುಕೊಂಡುದುದರ ಹಾಗೂ ಭಾವನೆಗೆ ತಂದುಕೊಂಡುದುದರ ಮೂಲಕ ಮತ್ತು ತನ್ನಿಂದ ಸುರಿದುಹೋದುದರ ಮೂಲಕ ಆ ಮಹಾಶಕ್ತಿ ಈ ವಿಶ್ವದಲ್ಲಿ ಹಾಗೂ ಪೃಥ್ವಿಯ ಮೇಲಿನ ಉತ್ಕ್ರಾಂತಿಯಲ್ಲಿ ಇರಬೇಕಾದುದನ್ನು ನಿರ್ಧರಿಸುತ್ತ ದೇವತೆಗಳಿರುವ ಸ್ತರದ ಮೇಲ್ಗಡೆ ನಿಂತಿರುತ್ತಾಳೆ, ತನ್ನ ಎಲ್ಲ ದೈವೀ ಸಾಮರ್ಥ್ಯಗಳನ್ನು ಹಾಗೂ ದೈವೀ ವ್ಯಕ್ತಿವಿಶಿಷ್ಟತೆಗಳನ್ನು ತನ್ನ ಮುಂದೆ ಆಕೆ ಇರಿಸಿಕೊಂಡಿರುತ್ತಾಳೆ. ಇವುಗಳಿಂದ ಉದ್ಭವಿಸಿದವುಗಳನ್ನು ಈ ನಿಮ್ನತರ ಲೋಕಗಳಲ್ಲಿ ಮಧ್ಯೆ ಪ್ರವೇಶಿಸಲು, ಆಳಿಕೆ ನಡೆಸಲು, ಅವುಗಳ ಚಕ್ರಗತಿಗಳನ್ನು ಮುನ್ನಡೆಸಲು, ತಿರುಗಿಸಲು, ಆ ಶಕ್ತಿಗಳ ಇಡಿಯಾದ ಹಾಗೂ ವ್ಯಕ್ತಿವಿಶಿಷ್ಟವಾದ ಧಾರೆಗಳನ್ನು ನಿರ್ದೇಶಿಸಲು ಕೆಳಗೆ ಕಳಿಸಿಕೊಡುತ್ತಾಳೆ. ಹಾಗೆ ಉದ್ಭವವಾದವುಗಳಲ್ಲಿರುವ ಮಹಾಶಕ್ತಿಯನ್ನು ಬೇರೆ, ಬೇರೆ ಹೆಸರುಗಳಿಂದ ಜನರು ಯುಗ–ಯುಗಾಂತರಗಳಲ್ಲಿ ಪೂಜಿಸುತ್ತ ಬಂದಿದ್ದಾರೆ. ಆದರೆ ಹಾಗೆಯೇ ಈ ದೈವೀ ಸಾಮರ್ಥ್ಯಗಳು ಹಾಗೂ ಅವುಗಳಿಂದ ಉದ್ಭವವಾದವುಗಳ ಮೂಲಕ ತನ್ನ ವಿಭೂತಿಗಳನ್ನು ತಯಾರು ಮಾಡುತ್ತಾಳೆ ಮತ್ತು ಅವುಗಳಿಗೆ ಆಕಾರ ನೀಡುತ್ತಾಳೆ. ಈ ವಿಧಾನ ಅವಳು ಈಶ್ವರನ ವಿಭೂತಿಗಳ ಮನಸ್ಸುಗಳನ್ನು ಹಾಗೂ ದೇಹಗಳನ್ನು ತಯಾರು ಮಾಡುವ ರೀತಿಯದೇ ಆಗಿರುತ್ತದೆ. ಅದರಿಂದಾಗಿ ಭೌತಿಕ ಜಗತ್ತಿನಲ್ಲಿ ಮತ್ತು ಮಾನವ ಮನಸ್ಸಿನ ವೇಷಾಂತರ(disguise)ದಲ್ಲಿ ಅವಳು ತನ್ನ ಸಾಮರ್ಥ್ಯ, ಗುಣಮಟ್ಟ ಮತ್ತು ಸಾನ್ನಿಧ್ಯ ಇವುಗಳ ಸ್ವಲ್ಪ ಮಟ್ಟಿಗಿನ ಕಿರಣವನ್ನು ಪ್ರಕಟಿಸುವಂತಾಗುತ್ತದೆ. ಪೃಥ್ವಿಯ ಮೇಲಿನ ಲೀಲೆಯ ದೃಶ್ಯಗಳೆಲ್ಲ ವ್ಯವಸ್ಥೆಗೊಳಪಡಿಸಿದ, ಸಂಯೋಜಿಸಿದ ಒಂದು ನಾಟಕವನ್ನಾಗಿಸಿವೆ, ಅದರಲ್ಲಿ ಅವಳ ಸಹಾಯಕ್ಕಾಗಿ ವಿಶ್ವವ್ಯಾಪಿ ದೇವರುಗಳಿದ್ದಾರೆ, ಅವಳೇ ಸ್ವತಃ ಪರದೆಯ ಹಿಂದಿರುವ ಅಭಿನೇತ್ರಿಯಾಗಿದ್ದಾಳೆ.

ಶ್ರೀಮಾತೆ ಮೇಲ್ಗಡೆಗಿದ್ದುಕೊಂಡು ಎಲ್ಲದರ ಮೇಲೆ ಆಳಿಕೆ ನಡೆಸುವುದಿಲ್ಲ, ಆದರೆ ಕಡಿಮೆ ದರ್ಜೆಯುಳ್ಳ ಮೂರು ವಿಧದ ವಿಶ್ವದಲ್ಲಿ ಕೆಳಗಿಳಿದು ಬರುತ್ತಾಳೆ. ಅವೈಯಕ್ತಿಕವಾಗಿ ಇಲ್ಲಿರುವ ಎಲ್ಲ ವಸ್ತು–ವಿಷಯಗಳು, ಅವಿದ್ಯೆಯ ಚಲನೆಗಳೂ ಕೂಡ, ಪರದೆಯ ಹಿಂದಿರುವ ಸಾಮರ್ಥ್ಯ ರೂಪದಲ್ಲಿ, ಅವಳೇ ಆಗಿದ್ದಾಳೆ. ಕುಂದಿದ ದ್ರವ್ಯದಲ್ಲಿ ಅವಳ ಸೃಷ್ಟಿಗಳು, ಅವಳ ಪ್ರಕೃತಿ–ದೇಹ, ಪ್ರಕೃತಿ–ಶಕ್ತಿ ಇವೆಲ್ಲ ಅಸ್ತಿತ್ವದಲ್ಲಿರಲು ಕಾರಣವೆಂದರೆ ಪರಮೋಚ್ಚನ ರಹಸ್ಯ ಆಜ್ಞೆಯಿಂದ ಪ್ರೇರಿತಳಾಗಿ, ಅನಂತದ ಸಾಧ್ಯತೆಗಳಲ್ಲಿದ್ದ ಏನೋ ಒಂದನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವಳು ಶ್ರೇಷ್ಠ ಯಜ್ಞಾಹುತಿಯಾಗಲು ಒಪ್ಪಿಕೊಂಡಿದ್ದಾಳೆ, ಅವಿದ್ಯೆಯ ಆತ್ಮ ಮತ್ತು ರೂಪಗಳ ಮುಖವಾಡವನ್ನು ಧರಿಸಿಕೊಂಡಿದ್ದಾಳೆ. ವ್ಯಕ್ತಿಗತವಾಗಿಯೂ ಕೂಡ ಈ ಗಾಢಾಂಧಕಾರದಲ್ಲಿ ಇಳಿದು ಅದನ್ನು ದೈವೀ ಪ್ರಕಾಶದತ್ತ ಕೊಂಡೊಯ್ಯಲು, ಮಿಥ್ಯೆ ದೋಷಗಳಲ್ಲಿಳಿದು ಅವುಗಳನ್ನು ದೈವೀ ಸತ್ಯವನ್ನಾಗಿ ಪರಿವರ್ತಿಸಲು, ಮೃತ್ಯುವಿನಲ್ಲಿಳಿದು ಅದನ್ನು ದೇವ ಸದೃಶ ಜೀವನವನ್ನಾಗಿಸುವ ತಿರುವುಕೊಡಲು, ನೋವು ಹಾಗೂ ಹಟಮಾರಿ ದುಃಖಗಳಿರುವ ಈ ಜಗತ್ತಿನಲ್ಲಿ ಅವು ಪರಿವರ್ತನೆಗೊಳಗಾಗುವ ಅವಳ ಘನತೆವೆತ್ತ ದಿವ್ಯಾನಂದದ ಅತ್ಯಂತ ಸಂತಸದಲ್ಲಿ ಕೊನೆಗೊಳ್ಳುವಂತೆ ಮಾಡಲು ಅವಳು ದೊಡ್ಡ ಮನಸ್ಸು ಮಾಡಿದ್ದಾಳೆ. ಅವಳು ತನ್ನ ಮಕ್ಕಳಿಗಾಗಿರುವ ಆಳವಾದ ಹಾಗೂ ಶ್ರೇಷ್ಠ ಪ್ರೇಮದಿಂದಾಗಿ ತನ್ನ ಮೇಲೆ ಮಬ್ಬಾದ ನಿಲುವಂಗಿಯದನ್ನು ಧರಿಸಲು, ಪೀಡಾಕಾರಕ ಪ್ರಭಾವವಿರುವ ಗಾಢಾಂಧಕಾರದ ಸಾಮರ್ಥ್ಯಗಳು ಹಾಗೂ ಮಿಥ್ಯೆ ಇವುಗಳ ಆಕ್ರಮಣವನ್ನು ಸಹಿಸಿಕೊಳ್ಳಲು, ಮೃತ್ಯುವೇ ಆಗಿರುವ ಜನ್ಮ ತಳೆದು ಅದರ ಮೂಲಕ ಹಾಯ್ದು ಹೋಗಲು ಒಪ್ಪಿಕೊಂಡಿದ್ದಾಳೆ; ಸೃಷ್ಟಿಯ ತೀವ್ರ ಯಾತನೆಯನ್ನು, ದುಃಖಗಳನ್ನು, ಮತ್ತು ವೇದನೆಗಳನ್ನು ತನ್ನ ಮೇಲೆ ತೆಗೆದುಕೊಂಡಿದ್ದಾಳೆ, ಏಕೆಂದರೆ ಈ ರೀತಿಯಲ್ಲಿ ಮಾತ್ರ ಅವುಗಳನ್ನು ದೈವೀ ಪ್ರಕಾಶ, ಸತ್ಯ, ಸಂತೋಷ ಮತ್ತು ಶಾಶ್ವತ ಜೀವನ ಇವುಗಳತ್ತ ಎತ್ತಬಹುದು ಎಂದು ತೋರಿಬಂದಿತು. ಇದು ಶ್ರೇಷ್ಠ ಆಹುತಿಯಾಗಿದ್ದು ಇದನ್ನು ಕೆಲವೊಮ್ಮೆ ಪುರುಷನ ಆಹುತಿ ಎಂದು ಕರೆಯಲಾಗುತ್ತದೆ, ಆದರೆ ಅದು ಆಳವಾದ ರೀತಿಯಲ್ಲಾದ ಪ್ರಕೃತಿಯ ಆಹುತಿ, ದೈವೀ ಮಾತೆ ಯಜ್ಞಕ್ಕೆ ಅರ್ಪಿಸಿದ ಆಹುತಿಯಾಗಿದೆ.



*

## ಶ್ರೀಮಾತೆಯ ನಾಲ್ಕು ಶ್ರೇಷ್ಠ ಮುಖಗಳು

ಶ್ರೀಮಾತೆಯ ನಾಲ್ಕು ಶ್ರೇಷ್ಠ ಮುಖಗಳು, ನೇತೃತ್ವ ವಹಿಸುವ ಅವಳ ನಾಲ್ಕು ದೈವೀ ಸಾಮರ್ಥ್ಯಗಳು ಮತ್ತು ದೈವೀ ವ್ಯಕ್ತಿವಿಶಿಷ್ಟತೆಗಳು ವಿಶ್ವಕ್ಕೆ ಮಾರ್ಗದರ್ಶನ ನೀಡುವ ಕಾರ್ಯದಲ್ಲಿ ಹಾಗೂ ಪೃಥ್ವಿಯ ಮೇಲಿನ ಲೀಲೆಯೊಡನೆ

ವ್ಯವಹರಿಸುವುದರಲ್ಲಿ ಮುಂಚೂಣಿಯಲ್ಲಿ ನಿಂತುಕೊಂಡಿವೆ. ಅವಳ ವ್ಯಕ್ತಿವಿಶಿಷ್ಟತೆ–ಗಳಲ್ಲಿ ಒಂದು ಅಚಲ ವೈಶಾಲ್ಯವುಳ್ಳದ್ದು, ಎಲ್ಲವನ್ನೂ ಗ್ರಹಿಸುವ ವಿವೇಕ ಮತ್ತು ಪ್ರಶಾಂತ ಅನುಕಂಪ, ಅಕ್ಷಯ ಕರುಣೆ, ಸಾರ್ವಭೌಮ ಮತ್ತು ಅತಿಶಯಿಸುವ ಗಾಂಭೀರ್ಯ ಹಾಗೂ ಎಲ್ಲವನ್ನೂ ಆಳುವ ಶ್ರೇಷ್ಠತೆ ಇವುಗಳನ್ನೆಲ್ಲ ಹೊಂದಿರುವಂತಹದು. ಅವಳ ಇನ್ನೊಂದು ವ್ಯಕ್ತಿವಿಶಿಷ್ಟತೆ ಭವ್ಯ ಬಲದ ಸಾಮರ್ಥ್ಯವನ್ನು, ಎದುರಿಸಲಾಗದ ಭಾವೋನ್ಮತ್ತತೆಯನ್ನು, ರಭಸದ ತೀವ್ರತೆಯನ್ನು ಜಗತ್ತನ್ನೇ ಅಲುಗಾಡಿಸುವ ಶಕ್ತಿಯನ್ನು ಹೊಂದಿದೆ. ಅವಳ ಮೂರನೆಯ ವ್ಯಕ್ತಿವಿಶಿಷ್ಟತೆ ಉಲ್ಲಾಸಭರಿತ, ಮಧುರ ಹಾಗೂ ಅದ್ಭುತವಾದದ್ದು, ಇದೆಲ್ಲದರೊಂದಿಗೆ ಸೌಂದರ್ಯದ ಆಳವಾದ ರಹಸ್ಯ, ಸಾಮರಸ್ಯ ಹಾಗೂ ಲಯಬದ್ಧತೆ, ಜಟಿಲವಾದ ಹಾಗೂ ಸೂಕ್ಷ್ಮ ಶ್ರೀಮಂತಿಕೆ, ಒತ್ತಾಯ ತರುವ ಆಕರ್ಷಣೆ ಮತ್ತು ಮನಸೆಳೆಯುವ ಮೋಹಕತೆ ಇವೆಲ್ಲ ಜೊತೆಗೂಡಿರುತ್ತವೆ. ನಾಲ್ಕನೆಯ ವ್ಯಕ್ತಿವಿಶಿಷ್ಟತೆ ನಿಕಟ ಜ್ಞಾನಕ್ಕಾಗಿ ಮತ್ತು ಕಾಳಜಿಪೂರ್ವಕ ದೋಷರಹಿತ ಕಾರ್ಯಕ್ಕಾಗಿ, ಎಲ್ಲ ವಸ್ತು–ವಿಷಯಗಳಲ್ಲಿ ಅಚಂಚಲ, ನಿಖರವಾದ ಪರಿಪೂರ್ಣತೆಗಾಗಿ ತೆರಪಿಲ್ಲದ ಹಾಗೂ ಗಾಢವಾದ ಕ್ಷಮತೆಯೊಂದಿಗೆ ಸಜ್ಜಾಗಿದೆ. ವಿವೇಕ, ಬಲ, ಸಾಮರಸ್ಯ ಹಾಗೂ ಪರಿಪೂರ್ಣತೆ ಇವು ಆ ವ್ಯಕ್ತಿವಿಶಿಷ್ಟತೆಗಳ ಅನೇಕ ಗುಣಲಕ್ಷಣಗಳು ಮತ್ತು ಇವುಗಳೇ ಜಗತ್ತಿನಲ್ಲಿ ಈ ಸಾಮರ್ಥ್ಯಗಳನ್ನು ತಮ್ಮೊಡನೆ ತರುತ್ತವೆ, ಮಾನವರ ಮಾರುವೇಷದಲ್ಲಿ ತಮ್ಮ ವಿಭೂತಿಗಳನ್ನು ಪ್ರಕಟಿಸುತ್ತವೆ; ಶ್ರೀಮಾತೆಯವರ ನೇರ ಹಾಗೂ ಜೀವಂತ ಪ್ರಭಾವಕ್ಕೆ ತಮ್ಮ ಪಾರ್ಥಿವ ಸ್ವಭಾವವನ್ನು ತೆರೆದಿರಿಸಿ ಇಟ್ಟುಕೊಳ್ಳಬಲ್ಲವರಲ್ಲಿ ಆ ಪ್ರಕಟಣೆಗಳನ್ನು ಸ್ಥಾಪಿಸುತ್ತವೆ. ಈ ನಾಲ್ಕು ವ್ಯಕ್ತಿವಿಶಿಷ್ಟತೆಗಳಿಗೆ ಮಹೇಶ್ವರಿ, ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಮಹಾಸರಸ್ವತಿ ಎಂಬ ಶ್ರೇಷ್ಠ ಹೆಸರುಗಳನ್ನು ನಾವು ಕೊಡುತ್ತೇವೆ.

*

## ಮಹೇಶ್ವರಿ

ರಾಜರಾಜೇಶ್ವರಿಯಾದ ಮಹೇಶ್ವರಿಯು ಯೋಚಿಸುವ ಮನಸ್ಸು ಹಾಗೂ ಸಂಕಲ್ಪ ಇವುಗಳ ವೈಶಾಲ್ಯದ ಮೇಲ್ಗಡೆ ಆಸೀನಳಾಗಿರುವಳು ಮತ್ತು ಅವುಗಳನ್ನು ಘನತೆಗೇರಿಸುವಳು ಹಾಗೂ ಶ್ರೇಷ್ಠ ರೀತಿಯವನ್ನಾಗಿ ಮಾಡುವಳು ಇಲ್ಲವೆ ಅವುಗಳಿಗೆ ಅತೀತವಾದ ಭವ್ಯತೆಯ ಪ್ರವಾಹ ಅವುಗಳನ್ನು ತುಂಬಿಕೊಳ್ಳುವಂತೆ



ಮಾಡುವಳು. ಅವಳು ಶಕ್ತಿಶಾಲಿನಿಯೂ, ವಿವೇಕವುಳ್ಳವಳೂ ಏಕಮಾದ್ವಿತೀಯಳೂ ಆಗಿರುವುದರ ಕಾರಣದಿಂದಾಗಿ ನಮ್ಮನ್ನು ಅತಿಮಾನಸದ ಅನಂತತೆಗಳತ್ತ, ವಿಶ್ವವ್ಯಾಪಕ ವಿಸ್ತಾರದತ್ತ, ಪರಮೋಚ್ಚ ದಿವ್ಯ ಪ್ರಕಾಶದ ಮಹಿಮೆಯತ್ತ, ಅದ್ಭುತ ಜ್ಞಾನದ ಭಾಂಡಾರದತ್ತ ಮತ್ತು ತನ್ನ ಅಪರಿಮಿತ ಚಿರಂತನ ಶಕ್ತಿಗಳ ಚಲನೆಯತ್ತ ತೆರೆದಿರಿಸುವಳು. ಪ್ರಶಾಂತಳಾದ ಅವಳು ಎಂದೆಂದಿಗೂ ಅದ್ಭುತಳಾದವಳು, ಲೋಕೋತ್ತರಳಾದವಳು ಆಗಿದ್ದಾಳೆ. ಯಾವುದೂ ಅವಳನ್ನು ಪ್ರಚೋದಿಸುವಂತೆ ಮಾಡಲಾರದು, ಏಕೆಂದರೆ ಎಲ್ಲ ವಿವೇಕ(wisdom) ಅವಳಲ್ಲಿದೆ, ಆಕೆ ತಿಳಿದುಕೊಳ್ಳಬೇಕೆಂದು ಆಯ್ದುಕೊಂಡದ್ದಾವುದೂ ಆಕೆಯಿಂದ ಮರೆಯಾಗಿ ಇರಲಾರದು. ಅವಳು ಸಮಸ್ತ ವಸ್ತು–ವಿಷಯಗಳನ್ನು, ಎಲ್ಲ ಸತ್ತೆಗಳು ಹಾಗೂ ಅವುಗಳ ಸ್ವಭಾವವನ್ನು, ಯಾವುದು ಅವುಗಳನ್ನು ಪ್ರಚೋದಿಸುವಂತೆ ಮಾಡುತ್ತದೆ ಎಂಬುದನ್ನು, ಜಗತ್ತಿನ ನಿಯಮ ಹಾಗೂ ಅದರ ಕಾಲಗತಿಗಳನ್ನು ಗ್ರಹಿಸಿರುತ್ತಾಳೆ, ಎಲ್ಲವೂ ಮೊದಲು ಹೇಗಿತ್ತು, ಮುಂದೆ ಅದು ಹೇಗಿರಬೇಕು ಎಂಬುದೂ ಅವಳಿಗೆ ತಿಳಿದಿದೆ. ಎಲ್ಲವನ್ನೂ ಎದುರಿಸಿ ಎಲ್ಲದರ ಮೇಲೆ ಪ್ರಭುತ್ವ ಪಡೆಯುವ ಬಲ ಅವಳಲ್ಲಿದೆ. ಅವಳ ವಿಶಾಲವಾದ, ಗ್ರಹಿಕೆಗೆ ನಿಲುಕಲಾರದ ವಿವೇಕ ಮತ್ತು ಪ್ರಶಾಂತ ಸಾಮರ್ಥ್ಯ ಇವುಗಳನ್ನು ಪ್ರತಿಭಟಿಸಿ ಕೊನೆಗೆ ಯಾರೂ ಜಯಶಾಲಿ–ಯಾಗಲಾರರು. ಸಮತೆಯುಳ್ಳವಳೂ, ಸಹನಶೀಲಳೂ, ಸ್ಥಿರ ಸಂಕಲ್ಪವುಳ್ಳವಳೂ ಆದ ಅವಳು ಮಾನವರ ಜೊತೆಗೆ ಅವರವರ ಸ್ವಭಾವಕ್ಕನುಗುಣವಾಗಿ ವ್ಯವಹರಿಸುವಳು. ಮತ್ತು ವಸ್ತು–ವಿಷಯಗಳು ಹಾಗೂ ಘಟನೆಗಳು ಇವುಗಳೊಡನೆ ಇವುಗಳ ಶಕ್ತಿ ಮತ್ತು ಇವುಗಳೊಳಗಿನ ಸತ್ಯಕ್ಕೆ ಅನುಗುಣವಾಗಿ ವ್ಯವಹರಿಸುವಳು. ಪಕ್ಷಪಾತದ ಲವಲೇಶವೂ ಅವಳಲ್ಲಿಲ್ಲ, ಆದರೆ ಅವಳು ಪರಮೋಚ್ಚನ ಶಾಸನವನ್ನು ಅನುಸರಿಸುವಳು: ಕೆಲವರನ್ನು ಉದ್ಧರಿಸುವಳು, ಇನ್ನು ಕೆಲವರನ್ನು ಅಧೋಗತಿಗೆ ಅಟ್ಟುವಳು ಇಲ್ಲವೆ ತನ್ನಿಂದ ದೂರವಿರುವ ಅಂಧಕಾರದಲ್ಲಿ ತಳ್ಳುವಳು. ವಿವೇಕಿಗಳಿಗೆ ಮತ್ತಷ್ಟು ಘನತರ ಹಾಗೂ ಹೆಚ್ಚು ಪ್ರಕಾಶಮಯವಾಗಿರುವ ಜ್ಞಾನವನ್ನು ನೀಡುವಳು, ದರ್ಶನ ದೃಷ್ಟಿ ಇರುವವರಿಗೆ ತನ್ನ ಸಮಾಲೋಚನೆಯಲ್ಲಿ ತೊಡಗಲು ಅವಕಾಶ ನೀಡುವಳು, ವಿರೋಧಿಗಳಾದವರ ಮೇಲೆ ಅವರ ವಿರೋಧದ ಪರಿಣಾಮವನ್ನು ಹೇರುವಳು. ಅಜ್ಞಾನಿಗಳನ್ನೂ, ಮೂಢರನ್ನೂ ಅವರವರ ಕುರುಡುತನಕ್ಕೆ ಅನುಗುಣವಾಗಿ ಕರೆದೊಯ್ಯುವಳು. ಅವಳು ಪ್ರತಿಯೊಬ್ಬ ಮಾನವನಲ್ಲಿ ಅವನ ಸ್ವಭಾವದ ಭಿನ್ನ ಅಂಶಗಳನ್ನು, ಅವುಗಳ ಆವಶ್ಯಕತೆಗಳು ಹಾಗೂ ಹಂಬಲಗಳು ಇವುಗಳಿಗೆ

ಅನುಸಾರವಾಗಿ, ಬಯಸಿದ ಪ್ರತಿಫಲಕ್ಕನುಸಾರವಾಗಿ ನಿರ್ವಹಿಸುತ್ತಾಳೆ ಮತ್ತು ಅವಶ್ಯವಾದ ಒತ್ತಡವನ್ನು ಹೇರುತ್ತಾಳೆ, ಇಲ್ಲವೆ ಅವುಗಳಿಗೆ ಪ್ರಿಯವಾದ ಸ್ವಾತಂತ್ರ್ಯಕ್ಕೆ ದಾರಿಮಾಡಿಕೊಟ್ಟು ಅವಿದ್ಯೆಯ ಮಾರ್ಗದಲ್ಲಿ ಏಳ್ಗೆ ಹೊಂದಲು ಇಲ್ಲವೆ ನಾಶವಾಗಲು ಬಿಟ್ಟುಕೊಡುತ್ತಾಳೆ. ಏಕೆಂದರೆ ವಿಶ್ವದಲ್ಲಿ, ಎಲ್ಲಕ್ಕೂ ಮಿಗಿಲಾಗಿ, ಅವಳು ಯಾವ ಬಂಧನಕ್ಕೂ ಒಳಗಾಗಿರುವುದಿಲ್ಲ, ಯಾವುದರ ಬಗೆಗೂ ಆಸಕ್ತಿ ಹೊಂದಿರುವುದಿಲ್ಲ. ಆದಾಗ್ಯೂ ಬೇರೆ ಎಲ್ಲರಲ್ಲಿರುವುದಕ್ಕಿಂತ ಹೆಚ್ಚಿನ ಮಾತೃ ಹೃದಯ ವಿಶ್ವಮಾತೆಯಲ್ಲಿದೆ. ಆಕೆಯ ಕರುಣೆ ಅನಂತ, ಮತ್ತು ಅಕ್ಷಯ. ಅಸುರರು, ಪಿಶಾಚಿಗಳು, ವಿದ್ರೋಹಿಗಳು, ವಿರೋಧಿಗಳು ಹೀಗೆ ಎಲ್ಲರೂ ಆಕೆಯ ದೃಷ್ಟಿಯಲ್ಲಿ ಆಕೆಯ ಮಕ್ಕಳು, ಐಕ್ಯೈಕಳಾದ ಅವಳ ಅಂಶಗಳು. ಆಕೆಯ ನಿರಾಕರಣೆ ಮುಂದೂಡಿಕೆ ಮಾತ್ರ. ಅವಳ ಕಾರುಣ್ಯವು ಅವಳ ವಿವೇಕವನ್ನು ಕುರುಡಾಗಿಸುವುದಿಲ್ಲ ಇಲ್ಲವೆ ಪೂರ್ವನಿರ್ದಿಷ್ಟ ಪಥದಿಂದ ಅವಳ ಕಾರ್ಯ ದಾರಿ ತಪ್ಪುವಂತೆ ಮಾಡುವುದಿಲ್ಲ. ವಸ್ತು–ವಿಷಯಗಳ ಸತ್ಯವಷ್ಟೇ ಅವಳಿಗೆ ಸಂಬಂಧಿಸಿದ ವಿಷಯ, ಜ್ಞಾನ ಅವಳ ಸಾಮರ್ಥ್ಯದ ಕೇಂದ್ರ ಮತ್ತು ನಮ್ಮ ಆತ್ಮಗಳನ್ನು, ಸ್ವಭಾವಗಳನ್ನು ದೈವೀಸತ್ಯದಲ್ಲಿ ಪುನರ್ನಿಮಾಣ ಮಾಡುವುದು ಅವಳ ಧ್ಯೇಯ ಮತ್ತು ಶ್ರಮ.

*

## ಮಹಾಕಾಳಿ

ಮಹಾಕಾಳಿಯ ಸ್ವಭಾವವು ಇನ್ನೊಂದು ಬಗೆಯದು. ಅವಳ ವಿಶೇಷ ಸಾಮರ್ಥ್ಯವು ವ್ಯಾಪಕತೆಯಲ್ಲ, ಆದರೆ ಅದು ಔನ್ನತ್ಯ, ವಿವೇಕವಲ್ಲ, ಆದರೆ ಶಕ್ತಿ ಮತ್ತು ಬಲ, ಸಹಿಸಲಸಾಧ್ಯವಾದ ತೀವ್ರತೆ, ಕಾರ್ಯಸಿದ್ಧಿಗಾಗಿ ಪ್ರಚಂಡ ಭಾವೋದ್ರೇಕ, ಪ್ರತಿಯೊಂದು ಅಡೆತಡೆಯನ್ನು ಕೊಚ್ಚಿಹಾಕುವ ದೈವೀ ಉಗ್ರ ಪ್ರತಾಪ ಇವೆಲ್ಲವುಗಳಿಂದ ಕೂಡಿದೆ. ಅವಳ ಸಕಲ ದೈವಿಕತೆ ಬಿರುಗಾಳಿಯಂತಹ ಭವ್ಯತೆಯಿಂದ ಕೂಡಿದ ಕಾರ್ಯಕ್ಕೆ ಪುಟಿದೇಳುತ್ತದೆ. ಶೀಘ್ರವಾಗಿ, ಕೂಡಲೆ ಪರಿಣಾಮಕಾರಿಯಾಗುವ ಪ್ರಕ್ರಿಯೆ(process)ಗಾಗಿ ಅವಳಲ್ಲಿದ್ದಾಳೆ. ಆ ಸಾಮರ್ಥ್ಯದ ಎದುರು ಕೊಂಡೊಯ್ಯುವ ಪ್ರತಿಯೊಂದರ ಮೇಲೆ ಅವಳದು ರಭಸದ ನೇರ ಹೊಡೆತ, ಮುಂಚೂಣಿಯ ಆಕ್ರಮಣ. ಅಸುರನಿಗೆ ಅವಳ ಮುಖ ಭಯಾನಕವಾದದ್ದು, ಏಕೆಂದರೆ ಅವಳು ರಣಾಂಗಣದಿಂದ ಎಂದೂ ಹಿಂದೆಗೆಯದ



ಬ್ರಹ್ಮಾಂಡಗಳ ರಣಚಂಡಿ. ಅಪರಿಪೂರ್ಣತೆಯನ್ನು ಸಹಿಸದ ಅವಳು ಮಾನವನಲ್ಲಿ ಪ್ರತಿಕೂಲ ಆಗಿರುವುದರೊಂದಿಗೆ ಬಿರುಸಿನಿಂದ ವ್ಯವಹರಿಸುವಳು. ಹಟಮಾರಿ–ತನದಿಂದ ಅಜ್ಞಾನಿಯಾಗಿರುವುದು, ಮಬ್ಬಾಗಿರುವುದು ಇದೆಲ್ಲದರ ಬಗ್ಗೆ ಅಪರಿಪೂರ್ಣತೆಯನ್ನು ಸಹಿಸಿಕೊಳ್ಳದ ಅವಳ ವರ್ತನೆ ನಿರ್ದಾಕ್ಷಿಣ್ಯದಿಂದ ಕೂಡಿರುತ್ತದೆ. ದ್ರೋಹ, ಮಿಥ್ಯಾಚಾರ, ಬದ್ಧ ದ್ವೇಷ ಇವುಗಳ ವಿರುದ್ಧ ಆಕೆಯ ರೋಷ ಕೂಡಲೆ ಕೆರಳಿ ರುದ್ರರೂಪ ತಾಳುವುದು, ಕೆಡುಕಿನ ಭಾವನೆಯು ಅವಳ ದೈವೀ ಪ್ರಕೋಪದಿಂದ ಜರ್ಜರಿತವಾಗುವುದು. ಭಗವತ್ ಕಾರ್ಯದಲ್ಲಿ ಉದಾಸೀನತೆ, ಉಪೇಕ್ಷೆ, ಆಲಸ್ಯಗಳನ್ನು ಅವಳು ಸಹಿಸಲಾರಳು. ಅಲ್ಲದೆ ಆವೇಳೆಯಲ್ಲಿ ಮಲಗುವವರನ್ನೂ, ಸುಮ್ಮನೆ ಸುತ್ತುವವರನ್ನೂ, ಅಗತ್ಯ ಕಂಡರೆ, ಕೂಡಲೆ ತೀವ್ರ ವೇದನೆಗೊಳಪಡಿಸಿ ಬಡಿದೆಬ್ಬಿಸುವಳು. ಮಹಾಕಾಳಿಯ ಕಾರ್ಯಗತಿಯಲ್ಲಿ ಪ್ರೇರಣೆಗಳು ತೀವ್ರಗತಿಯವು, ನೇರವಾದವುಗಳು ಮತ್ತು ಮುಚ್ಚುಮರೆಯಿಲ್ಲದವು. ಚಲನೆಗಳು ಕಾದಿರಿಸಿಕೊಳ್ಳದಂತಹವು ಮತ್ತು ಪರಿಪೂರ್ಣವಾದವುಗಳು. ಅಭೀಪ್ಸೆಯು ಜ್ವಾಲೆಯ ರೂಪದಲ್ಲಿ ಮೇಲೇರು–ವಂತಹದು. ಆಕೆಯ ಮನೋಧರ್ಮ ಅದಮ್ಯ, ದೃಷ್ಟಿ ಸಂಕಲ್ಪಗಳು ಗರುಡ ಪಕ್ಷಿಯ ಉಡ್ಡಾಣದ ಹಾಗೆ ಉಚ್ಚ ದರ್ಜೆಯವೂ, ದೂರಗಾಮಿಯಾದವುಗಳೂ ಆಗಿವೆ. ಆಕೆಯ ಪದಗಳು ಊರ್ಧ್ವ ಪಥದಲ್ಲಿ ತೀವ್ರಗತಿಯಿಂದ ಸಾಗುತ್ತವೆ, ಮತ್ತು ಅವಳ ಕರಗಳು ಶಿಕ್ಷೆಗೂ, ನೆರವಿಗೂ ಮುಂದೆ ಚಾಚಿವೆ. ಏಕೆಂದರೆ, ಅವಳೂ ಮಾತೆಯೇ, ಅವಳ ಪ್ರೇಮ ಕ್ರೋಧದಷ್ಟೇ ಗಾಢ, ಅವಳಲ್ಲಿ ಆಳವಾದ, ಭಾವಭರಿತ ಕಾರುಣ್ಯವಿದೆ. ತನ್ನ ಶಕ್ತಿಸಮೇತವಾಗಿ ಅವಳಿಗೆ ಮಧ್ಯಸ್ಥಿಕೆ ವಹಿಸಲು ಆಸ್ಪದ ದೊರೆತರೆ, ಅನ್ವೇಷಕನ ಪ್ರಗತಿಯನ್ನು ತಡೆಗಟ್ಟುವ ವಿಘ್ನಗಳು ಅಥವಾ ಅವನ ಮೇಲೆರಗುವ ವೈರಿಗಳು ನಿಮಿಷ ಮಾತ್ರದಲ್ಲಿ ಅಸಾಂದ್ರ ವಸ್ತುಗಳ ಹಾಗೆ ಪುಡಿ ಪುಡಿಯಾಗಿ ಹೋಗುವವು. ಅವಳ ಕೋಪ ವಿರೋಧಿಗಳಿಗೆ ಭಯವನ್ನುಂಟು ಮಾಡುವಂತಹದು, ಅವಳ ಆವೇಗಪೂರ್ಣ ಒತ್ತಡ ದುರ್ಬಲರಿಗೆ, ಪುಕ್ಕರಿಗೆ ನೋವನ್ನುಂಟುಮಾಡುವಂತಹದು ಆಗಿದ್ದರೂ, ಮಹಾಮಹಿಮರು, ವೀರರು, ಕುಲೀನರು ಇವರೆಲ್ಲರಿಗೆ ಅವಳು ಅತಿ ಪ್ರಿಯಳು, ಪೂಜಾರ್ಹಳು. ಅವಳು ಕೊಟ್ಟ ಹೊಡೆತಗಳು ಅವರ ಭೌತಿಕ ಆಧಾರದಲ್ಲಿ ವಿದ್ರೋಹಕರವಾದದ್ದನ್ನೆಲ್ಲ ಸಾಮರ್ಥ್ಯವನ್ನಾಗಿ ಪರಿಪೂರ್ಣ ಸತ್ಯವನ್ನಾಗಿ ಮಾರ್ಪಡಿಸುವವು, ವಕ್ರವೂ ವಿಕೃತವೂ ಆಗಿರುವುದನ್ನೆಲ್ಲ ಅಕೆಯ ಸುತ್ತಿಗೆಯ ಪೆಟ್ಟುಗಳು ನೇರವಾಗುವಂತೆ ತಿದ್ದುವವು; ಅಪವಿತ್ರ ಹಾಗೂ ಕುಂದುಕೊರತೆಗಳಿಂದ ಕೂಡಿದ್ದನ್ನು

ಹೊರದೂಡುವವು ಎಂದು ಅವರು ಭಾವಿಸುತ್ತಾರೆ. ಅವಳಿಲ್ಲದಿದ್ದರೆ ಒಂದು ದಿನದಲ್ಲಾಗುವ ಕಾರ್ಯಕ್ಕೆ ನೂರಾರು ವರ್ಷಗಳು ಬೇಕಾಗಬಹುದಾಗಿತ್ತು. ಅವಳಿಲ್ಲದೆ ಆನಂದ ವಿಸ್ತರಿಸಿಕೊಂಡದ್ದು ಮತ್ತು ಗಂಭೀರವಾದದ್ದು ಇಲ್ಲವೆ ಮೃದು ಮತ್ತು ಮಧುರ ಸುಂದರ ಲಕ್ಷಣಗಳನ್ನು ಹೊಂದಿದ್ದು ಮಾತ್ರ ಆಗಬಹುದಿತ್ತು, ಆದರೆ ಅತ್ಯಂತ ಪರಿಪೂರ್ಣ ತೀವ್ರತೆಗಳ ಜಾಜ್ವಲ್ಯಮಾನ ಸಂತೋಷಾನುಭವ ಇರುತ್ತಿರಲಿಲ್ಲ. ಜ್ಞಾನಕ್ಕೆ ಅವಳು ಜಯ ದೊರಕಿಸುವ ಬಲ ಕೊಡುವಳು. ಸೌಂದರ್ಯ ಹಾಗೂ ಸಾಮರಸ್ಯಗಳಿಗೆ ಉನ್ನತ ಹಾಗೂ ಮೇಲಕ್ಕೇರುವ ಚಾಲನೆ ತಂದುಕೊಡುವಳು. ಪರಿಪೂರ್ಣತೆಯನ್ನು ಬೆಂಬತ್ತಿರುವ, ನಿಧಾನ ಹಾಗೂ ಕಠಿಣ ಶ್ರಮಸಾಧನೆಗಾಗಿ ಇರುವ ಸಾಮರ್ಥ್ಯ ಬಹುಪಾಲು ಹೆಚ್ಚಾಗುವಂತೆ ಉತ್ತೇಜನ ನೀಡುವಳು. ಪರಮೋಚ್ಚ ದಿವ್ಯಾನಂದಗಳು, ಅತ್ಯುಚ್ಚ ಔನ್ನತ್ಯಗಳು, ಅತಿ ಉದಾರ ಗುರಿಗಳು, ಹೆಚ್ಚು ಭವ್ಯವಾದ ನೀಳನೋಟಗಳು ಇವುಗಳಿಗೆ ಕಡಿಮೆಯಾದ ಯಾವುದೂ ಅವಳಿಗೆ ತೃಪ್ತಿ ತಂದುಕೊಡಲಾರದು. ಆದ್ದರಿಂದ ವಿಜಯ ತಂದುಕೊಡುವ ಭಗವಂತನ ಶಕ್ತಿ ಅವಳೊಂದಿಗಿದೆ. ಭವ್ಯ ಸಿದ್ಧಿಗಳನ್ನು ಇನ್ನೆಂದೋ ಸಾಧಿಸುವುದರ ಬದಲಾಗಿ ಇಂದೇ ಸಾಧಿಸಬೇಕಾದರೆ ಅದು ಅವಳ ಪ್ರಜ್ವಲಿತ, ಭಾವೋನ್ಮತ್ತ ಶೀಘ್ರಗತಿಗಳಿಂದ ಮಾತ್ರ ಸಾಧ್ಯ.

*

## ಮಹಾಲಕ್ಷ್ಮಿ

ವಿವೇಕ (ಶ್ರೀಮಾತೆಯ ಮಹೇಶ್ವರಿ ರೂಪ) ಮತ್ತು ದೈವೀಶಕ್ತಿ (ಶ್ರೀಮಾತೆಯ ಮಹಾಕಾಳಿ ರೂಪ) ಇವುಗಳಷ್ಟೇ ಶ್ರೀಮಾತೆಯ ಪ್ರಕಟ ರೂಪಗಳಲ್ಲ, ಅವಳ ಸ್ವಭಾವಕ್ಕೆ ಸೇರಿದ ಮತ್ತೊಂದು ಸೂಕ್ಷ್ಮತರ ರಹಸ್ಯವಿದೆ. ಅದಿಲ್ಲದೆ ದೈವೀ ವಿವೇಕ ಮತ್ತು ದೈವೀ ಶಕ್ತಿಗಳು ಅಪೂರ್ಣವಾಗಿರುತ್ತಿದ್ದವು, ಪರಿಪೂರ್ಣತೆ ಪರಿಪೂರ್ಣ–ವಾಗಿರುತ್ತಿರಲಿಲ್ಲ. ಅವುಗಳ ಮೇಲ್ಗಡೆ ಚಿರಂತನ ಸೌಂದರ್ಯದ ಅದ್ಭುತವಿದೆ, ದೈವೀ ಸಾಮರಸ್ಯಗಳ ಗ್ರಹಿಸಲಾಗದ ರಹಸ್ಯವಿದೆ. ವಸ್ತು–ವಿಷಯಗಳನ್ನು, ಶಕ್ತಿ ಮತ್ತು ಸತ್ತೆಗಳನ್ನು ಹಿಡಿದೆಳೆದು ಒಂದುಗೂಡಿಸುವ ಹಾಗೂ ಅವು ಸಂಧಿಸಲು ಮತ್ತು ಏಕತೆ ಪಡೆಯಲು ನಿರ್ಬಂಧಿಸುವ ವಿಶ್ವಂಭರ ಮೋಹಕತೆ ಹಾಗೂ ಆಕರ್ಷಣೆಗಳಿವೆ. ಅದರಿಂದಾಗಿ ಗುಪ್ತ ದಿವ್ಯಾನಂದ ತೆರೆಮರೆಯೊಳಗಿಂದ ತನ್ನ ಲೀಲೆಯನ್ನು ನಡೆಸಬಹುದು, ತನ್ಮೂಲಕ ಅವುಗಳ ಲಯಬದ್ಧತೆ ಮತ್ತು



ಆಕಾರಗಳನ್ನು ಮಾಡಿಕೊಳ್ಳಬಹುದು. ಇದೇ ಮಹಾಲಕ್ಷ್ಮಿಯ ಸಾಮರ್ಥ್ಯ. ದೇಹಧಾರಿ ಸತ್ತೆಗಳ ಹೃದಯಗಳಿಗೆ ಶ್ರೀಮಾತೆಯ ಮಹಾಲಕ್ಷ್ಮಿಯ ಮುಖ ಅತ್ಯಂತ ಚಿತ್ತಾಕರ್ಷಕವಾಗಿದೆ. ಮಹೇಶ್ವರಿಯು ಅತ್ಯಂತ ಅಚಲಳು, ಶ್ರೇಷ್ಠಳಾದವಳು, ಪಾರ್ಥಿವ ಸ್ವಭಾವದ ಅಲ್ಪತೆಗೆ ಅತಿ ದೂರ ಇರುವವಳು ಎಂಬ ಭಾವನೆಯಿಂದಾಗಿ ಅವಳ ಸಾನ್ನಿಧ್ಯವನ್ನು ಸಮೀಪಿಸುವುದಾಗಲಿ, ಧಾರಣಮಾಡಿ–ಕೊಳ್ಳುವುದಾಗಲಿ ದುಸ್ಸಾಧ್ಯವೆಂದು ತೋರಿಬರಬಹುದು. ಮಹಾಕಾಳಿಯೂ ಕೂಡ ಆ ಸ್ವಭಾವದ ದುರ್ಬಲತೆಗೆ ತೀರ ತೀವ್ರಗತಿಯುಳ್ಳವಳು ಮತ್ತು ಗಾಬರಿಗೊಳಿಸುವವಳು ಆಗಿರುವುದರಿಂದ ಅವಳ ಸಾನ್ನಿಧ್ಯ ಸಹಿಸಲಸಾಧ್ಯವೆಂದು ತೋರಿಬರಬಹುದು, ಆದರೆ ಎಲ್ಲರೂ ಸಂತೋಷದಿಂದ ಮತ್ತು ಹಾತೊರೆತದಿಂದ ಮಹಾಲಕ್ಷ್ಮಿಯೆಡೆಗೆ ಹೊರಳುತ್ತಾರೆ. ಮಹಾಲಕ್ಷ್ಮಿ ಭಗವಂತನ ಮಾದಕ ಮಾಧುರ್ಯದ ಮೋಹಕ ಶಕ್ತಿಯನ್ನು ಬೀರುತ್ತಾಳೆ. ಅವಳ ಸಮೀಪದಲ್ಲಿರುವುದು ಆಳವಾದ ಸುಖದ ಅನುಭವಕ್ಕೆ ತೆರೆದುಕೊಂಡಂತೆ. ಹೃದಯದಲ್ಲಿ ಅವಳ ಸಾನ್ನಿಧ್ಯದ ಅನುಭವ ಪಡೆಯುವುದೆಂದರೆ ಅಸ್ತಿತ್ವವನ್ನು ಆನಂದಪರವಶತೆಗೆ, ಅದ್ಭುತವಾದುದಕ್ಕೆ ಒಳಪಡಿಸಿದಂತೆ, ಸೂರ್ಯನಿಂದ ಬೆಳಕು ಹರಿದು ಬರುವಂತೆ ದೈವೀಕೃಪೆ, ಮೋಹಕತೆ ಹಾಗೂ ಕೋಮಲತೆಗಳು ಅವಳಿಂದ ಹರಿದು ಬರುತ್ತವೆ. ಅವಳು ತನ್ನ ಅದ್ಭುತ ದೃಷ್ಟಿಯನ್ನು ಸ್ಥಿರಗೊಳಿಸಿದಲ್ಲೆಲ್ಲ ಅಥವಾ ತನ್ನ ಮುಗುಳ್ನಗೆಯ ರಮ್ಯತೆ ಚೆಲ್ಲಿಕೊಂಡು ಬರಲು ಅನುವು ಮಾಡಿಕೊಟ್ಟಲ್ಲೆಲ್ಲ ಮಾನವ ಆತ್ಮ ಅದರ ಸೆರೆಗೊಳಗಾಗುವುದು ಮತ್ತು ಅಗಾಧ ದಿವ್ಯಾನಂದದ ಆಳಗಳಲ್ಲಿ ಧುಮುಕುವುದು. ಅವಳ ಹಸ್ತಗಳ ಸ್ಪರ್ಶ ಅತ್ಯಾಕರ್ಷಕ ಮತ್ತು ಅವುಗಳ ಮಾಂತ್ರಿಕ, ಕೋಮಲ ಸ್ಪರ್ಶದ ಪ್ರಭಾವ ಮನಸ್ಸು, ಪ್ರಾಣ ಹಾಗೂ ದೇಹಗಳನ್ನು ಪರಿಶುದ್ಧಗೊಳಿಸುವುದು ಮತ್ತು ಅವಳು ಪಾದಾರ್ಪಣ ಮಾಡಿದಲ್ಲೆಲ್ಲ ಮೈಮರೆಸುವ ಆನಂದದ ಅದ್ಭುತ ಪ್ರವಾಹಗಳು ಪ್ರವಹಿಸುವು.

ಹಾಗಿದ್ದಾಗ್ಯೂ ಮಂತ್ರಮುಗ್ಧವಾಗಿಸುವ ಈ ದೈವೀ ಸಾಮರ್ಥ್ಯದ ಬೇಡಿಕೆಯನ್ನು ಈಡೇರಿಸುವುದು ಇಲ್ಲವೆ ಅವಳ ದೈವೀ ಸಾನ್ನಿಧ್ಯವನ್ನು ಹಿಡಿದಿಟ್ಟುಕೊಳ್ಳುವುದು ಸುಲಭವಲ್ಲ. ಮನಸ್ಸು ಆತ್ಮಗಳ ಸಾಮರಸ್ಯ ಹಾಗೂ ಸೌಂದರ್ಯ, ಯೋಚನೆಗಳ ಹಾಗೂ ಭಾವನೆಗಳ ಸಾಮರಸ್ಯ ಹಾಗೂ ಸೌಂದರ್ಯ, ಬಾಹ್ಯ ಕ್ರಿಯೆ ಮತ್ತು ಚಲನೆಗಳಲ್ಲಿ ಸಾಮರಸ್ಯ ಹಾಗೂ ಸೌಂದರ್ಯ, ಜೀವನ ಹಾಗೂ ಪರಿಸರಗಳ ಸಾಮರಸ್ಯ ಹಾಗೂ ಸೌಂದರ್ಯ

ಇವೆಲ್ಲವನ್ನು ಮಹಾಲಕ್ಷ್ಮಿ ಒತ್ತಾಯದಿಂದ ಬೇಡುವಳು. ಎಲ್ಲಿ ನಿಗೂಢ ಜಗದಾನಂದದ ಲಯಬದ್ಧತೆಗಳಿಗೆ ಒಲವಿರುವುದೋ, ಸರ್ವಸುಂದರವಾದುದಕ್ಕೆ ಪ್ರತಿಸ್ಪಂದನವಿರುವುದೋ, ಹೊಂದಾಣಿಕೆ ಹಾಗೂ ಏಕತೆಗಳಿರುವವೋ, ಮತ್ತು ಹಲವಾರು ಜೀವಿಗಳ ಸಂತೋಷಕರ ಪ್ರವಾಹ ಭಗವದಭಿಮುಖವಾಗಿರುವುದೋ ಅಂತಹ ವಾತಾವರಣದಲ್ಲಿ ಮಾತ್ರ ಅವಳು ನೆಲೆಸಲು ಸಮ್ಮತಿಸುವಳು. ಕುರೂಪ, ಕ್ಷುದ್ರ ಹಾಗೂ ಹೀನವಾದದ್ದೆಲ್ಲ, ದರಿದ್ರ ಅಸಹ್ಯ ಹಾಗೂ ತುಚ್ಛವಾದದ್ದೆಲ್ಲ, ನಿರ್ದಯ ಹಾಗೂ ಒರಟಾದದ್ದೆಲ್ಲ ಮಹಾಲಕ್ಷ್ಮಿಯ ಆಗಮನಕ್ಕೆ ತಿರಸ್ಕರಣೀಯವಾಗಿರುತ್ತವೆ. ಪ್ರೇಮ ಮತ್ತು ಸೌಂದರ್ಯಗಳು ಇಲ್ಲದೆ ಇರುವಲ್ಲಿ ಇಲ್ಲವೆ ಅವು ಜನ್ಮ ತಾಳಲು ಸಮ್ಮತಿಸದೆ ಇರುವಲ್ಲಿ ಅವಳು ಆಗಮಿಸುವುದಿಲ್ಲ; ಹೀನತರ ವಿಷಯಗಳೊಂದಿಗೆ ಪ್ರೇಮ ಮತ್ತು ಸೌಂದರ್ಯಗಳು ಜೊತೆಗೂಡಿ ವಿಕೃತವಾಗಿರುವಲ್ಲಿಂದ ಅವಳು ಕೂಡಲೆ ವಿಮುಖಳಾಗಿ ಹೊರಟು ಹೋಗುವಳು ಇಲ್ಲವೆ ಅಲ್ಲಿ ತನ್ನ ಐಶ್ವರ್ಯ ಸುರಿಯಲು ಉಪೇಕ್ಷಿಸುವಳು. ಮನುಷ್ಯರ ಹೃದಯಗಳಲ್ಲಿ ಅವರ ಸ್ವಾರ್ಥಪರತೆ, ದ್ವೇಷ, ಮಾತ್ಸರ್ಯ, ಬದ್ಧವೈರ, ಅಸೂಯೆ, ಕಲಹವೃತ್ತಿ ಇವೆಲ್ಲ ತನ್ನನ್ನು ಸುತ್ತಿಕೊಂಡಿರುವಂತೆ ಕಂಡುಬಂದರೆ, ಅವಳು ಅಲ್ಲಿಂದ ಕೂಡಲೆ ಹೊರಟು ಹೋಗುವಳು. ದ್ರೋಹ, ಲೋಭ, ಕೃತಘ್ನತೆಗಳು ಪವಿತ್ರ ಪಾತ್ರೆಯಲ್ಲಿ ಬೆರಕೆಗೊಳಗಾಗಿದ್ದರೆ, ಭಾವೋದ್ರೇಕದ ಸ್ಥೂಲತೆ ಹಾಗೂ ಅಪವಿತ್ರ ಕಾಮನಾ ಪಿಪಾಸೆ ಭಕ್ತಿಯನ್ನು ಮಲಿನಗೊಳಿಸಿದ್ದರೆ, ಆ ಬಗೆಯ ಹೃದಯಗಳಲ್ಲಿ, ಕೃಪಾಪೂರ್ಣ ಹಾಗೂ ಸುಂದರಳಾದ ಆ ದೇವಿ ಕ್ಷಣ ಮಾತ್ರವೂ ನಿಲ್ಲುವುದಿಲ್ಲ, ದೈವಿಕ ಜುಗುಪ್ಸೆಯೊಂದು ಅವಳನ್ನು ಆವರಿಸುವುದರಿಂದ ಅವಳು ಅಲ್ಲಿಂದ ನಿರ್ಗಮಿಸುತ್ತಾಳೆ. ಏಕೆಂದರೆ ಒತ್ತಾಯಿಸುವ, ಹೆಣಗುವ ಪ್ರವೃತ್ತಿ ಅವಳದಲ್ಲ. ಈ ಕಹಿ, ವಿಷಕಾರಿ, ಪೈಶಾಚಿಕ ದುರ್ಭಾವ ತಿರಸ್ಕಾರಗೊಳ್ಳುವವರೆಗೆ ಮತ್ತು ಮರೆಯಾಗುವವರೆಗೆ, ತೆರೆಯ ಹಿಂದೆ ಕಾದುಕೊಂಡಿದ್ದು ನಂತರ ತನ್ನ ಮಂಗಳಮಯ ಪ್ರಭಾವವನ್ನು ಪುನಃ ಸ್ಥಾಪಿಸುವಳು. ದೇಹವನ್ನು ದಂಡಿಸುವ ದಾರಿದ್ರ್ಯ ಮತ್ತು ಕಠೋರತೆ ಇಲ್ಲವೆ ಹೃದಯದ ಅತಿ ಆಳದ ಭಾವನೆಗಳ ದಮನ, ಅಂತರಾತ್ಮದ ಮತ್ತು ಜೀವನದ ಸೌಂದರ್ಯಾಂಶಗಳ ಅಭಿವ್ಯಕ್ತಿಯ ಉಗ್ರ ನಿಗ್ರಹ ಇವೆಲ್ಲ ಅವಳನ್ನು ಪ್ರಸನ್ನಗೊಳಿಸಲಾರವು. ಏಕೆಂದರೆ ಅವಳು ಪ್ರೇಮ ಹಾಗೂ ಸೌಂದರ್ಯಗಳ ಮೂಲಕ ಮನುಷ್ಯರನ್ನು ಭಗವಂತನ ಪ್ರಭಾವಕ್ಕೆ ಒಳಪಡಿಸುವಳು. ಅವಳ ಪರಮೋಚ್ಚ ಸೃಷ್ಟಿಯಲ್ಲಿ ಜೀವನವು ಶ್ರೀಮಂತ ಹಾಗೂ ಸ್ವರ್ಗೀಯ ಲಲಿತ ಕಲೆಯಾಗಿ, ಅಸ್ತಿತ್ವವೆಲ್ಲವೂ ದಿವ್ಯಾನಂದದ ಒಂದು ಕಾವ್ಯವಾಗಿ



ತಿರುವು ಪಡೆಯುವುದು, ಜಗತ್ತಿನ ಸಂಪತ್ತನ್ನೆಲ್ಲ ಒಟ್ಟುಗೂಡಿಸಲಾಗುವುದು ಮತ್ತು ಅದನ್ನು ಪರಮೋಚ್ಚ ವ್ಯವಸ್ಥೆಗೆ ಒಳಪಡಿಸಲು ಯೋಜಿಸಲಾಗುವುದು. ಏಕತೆಯ ಬಗೆಗಿರುವ ಅವಳ ಅಂತರ್ಬೋಧೆಯಿಂದ, ಆತ್ಮದ ಉಸಿರಿನಿಂದ ಅತ್ಯಂತ ಸಾಮಾನ್ಯ ವಸ್ತು–ವಿಷಯಗಳು ಅಲೌಕಿಕವಾಗುವವು. ಹೃದಯದಲ್ಲಿ ಪ್ರವೇಶ ಪಡೆದ ಅವಳು ವಿವೇಕವನ್ನು ಅದ್ಭುತದ ಪರಮೋತ್ಕರ್ಷ ಸ್ಥಿತಿಯತ್ತ ಮೇಲೆಕ್ಕೆತ್ತುತ್ತಾಳೆ ಮತ್ತು ಅದಕ್ಕೆ ಎಲ್ಲ ಜ್ಞಾನವನ್ನು ಅತಿಶಯಿಸುವ ದಿವ್ಯಾನಂದದ ರಹಸ್ಯಗಳನ್ನು ತೆರೆದುತೋರಿಸುವಳು, ಭಗವಂತನ ಭಾವೋನ್ಮತ್ತತೆಯ ಆಕರ್ಷಣೆಯಿಂದ ಭಕ್ತಿಭಾವವನ್ನು ಸಂಧಿಸುವಳು, ಶೌರ್ಯ ಹಾಗೂ ಶಕ್ತಿಗಳಿಗೆ ಲಯಬದ್ಧತೆಯನ್ನು ಬೋಧಿಸುವಳು, ಈ ಲಯಬದ್ಧತೆ ಅವುಗಳ ಪ್ರಾಬಲ್ಯವನ್ನು ಸಾಮರಸ್ಯದಲ್ಲಿ, ಅಳತೆ ಮೀರದಂತೆ ಇರಿಸುವುದು ಮತ್ತು ಪರಿಪೂರ್ಣತೆಯ ಮೇಲೆ ಮೋಹಕತೆ ಬೀರಿ ಅದು ಚಿರಕಾಲ ಉಳಿಯುವಂತೆ ಮಾಡುವುದು.

*

## ಮಹಾಸರಸ್ವತಿ

ಮಹಾಸರಸ್ವತಿಯು ಶ್ರೀಮಾತೆಯ ಕ್ರಿಯಾಸಾಮರ್ಥ್ಯವನ್ನು, ಪರಿಪೂರ್ಣತೆ ಮತ್ತು ಕ್ರಮಬದ್ಧತೆಗಳ ಮನೋಧರ್ಮವನ್ನು ಹೊಂದಿದ್ದಾಳೆ. ಶ್ರೀಮಾತೆಯ ನಾಲ್ಕು ಪ್ರಕಟ ರೂಪಗಳಲ್ಲಿ ಅವಳು ಅತ್ಯಂತ ಕಿರಿಯಳು, ಕಾರ್ಯನಿರ್ವಹಣೆಯ ಸಹಜ ಸಾಮರ್ಥ್ಯದಲ್ಲಿ ಅತ್ಯಂತ ನಿಪುಣಳು ಮತ್ತು ಭೌತಿಕ ಪ್ರಕೃತಿಗೆ ಅತಿ ಹತ್ತಿರದವಳು. ಮಹೇಶ್ವರಿಯು ವಿಶ್ವಶಕ್ತಿಗಳ ರೂಪರೇಖೆಗಳನ್ನು ನಿರ್ದಿಷ್ಟ ರೂಪದಲ್ಲಿ ಇರಿಸುವಳು. ಮಹಾಕಾಳಿ ಅವುಗಳ ಚೈತನ್ಯ(energy) ಹಾಗೂ ರಭಸಗಳಿಗೆ ಚಾಲನೆ ನೀಡುವಳು. ಮಹಾಲಕ್ಷ್ಮಿಯು ಅವುಗಳ ಲಯಬದ್ಧತೆಯನ್ನು, ಪ್ರಮಾಣಗಳನ್ನು ಶೋಧಿಸುವಳು, ಆದರೆ ಮಹಾಸರಸ್ವತಿಯು ಅವುಗಳ ಸಂಘಟನೆ, ನಿರ್ವಹಣೆಗಳ ವಿವರಗಳ ಮೇಲೆ, ಶಕ್ತಿಗಳ ಭಾಗಗಳನ್ನು ಕುರಿತು ಪರಿಣಾಮಕಾರಿ ಸಂಯೋಜನೆಯ ಮೇಲೆ, ಮತ್ತು ವಿಫಲವಾಗದ ಪರಿಣಾಮದ ನಿಖರತೆ ಹಾಗೂ ನೆರವೇರಿಕೆಯ ಎಲ್ಲ ವಿವರಗಳ ಮೇಲೆ ಅಧ್ಯಕ್ಷತೆ ವಹಿಸುವಳು. ವಸ್ತು–ವಿಷಯಗಳ ಬಗೆಗಿನ ವಿಜ್ಞಾನ, ತಂತ್ರರಚನೆ ಮತ್ತು ಪ್ರಯೋಗ ವಿಧಾನ ಇವು ಮಹಾಸರಸ್ವತಿಯ ಕಾರ್ಯಕ್ಷೇತ್ರಕ್ಕೆ ಸೇರಿವೆ. ಅವಳು ತನ್ನ ಸ್ವಭಾವದಲ್ಲಿ ಪರಿಪೂರ್ಣ ಕಾರ್ಯಕರ್ತೃವಿನ ನಿಕಟ ಹಾಗೂ ನಿಖರವಾದ ಜ್ಞಾನ, ಅತಿ ಸೂಕ್ಷ್ಮ

ತರ್ಕ (subtlely) ಹಾಗೂ ಸಹನಶೀಲತೆ, ಅಂತರ್ಬೋಧೆಯುಳ್ಳ ಮನಸ್ಸಿನ ಖಚಿತತೆ, ಪ್ರಜ್ಞಾಪೂರ್ಣ ಹಸ್ತ, ಹಾಗೂ ವ್ಯತ್ಯಾಸ ಗುರುತಿಸುವ ದೃಷ್ಟಿ ಇವೆಲ್ಲವನ್ನು ತನ್ನ ಸ್ವಭಾವದಲ್ಲಿ ಹಿಡಿದಿಟ್ಟುಕೊಂಡಿರುವವಳು ಮತ್ತು ತಾನು ಆಯ್ದುಕೊಂಡ ಜನರಿಗೆ ಅದನ್ನು ಕರುಣಿಸಬಲ್ಲಳು. ಈ ಸಾಮರ್ಥ್ಯವೇ ದೃಢರಾದ, ದಣಿವರಿಯದ, ಜಾಗರೂಕರಾದ ಹಾಗೂ ದಕ್ಷರಾದ ನಿರ್ಮಾಪಕ, ಸಂಘಟನಾಕಾರ, ಆಡಳಿತಗಾರ, ತಂತ್ರಜ್ಞ, ಕಲಾಕಾರ ಮತ್ತು ಲೋಕಗಳ ವರ್ಗೀಕರಣ ಮಾಡುವವ ಇವರೆಲ್ಲರನ್ನು ರೂಪಿಸಿದೆ. ಸ್ವಭಾವದ ಪರಿವರ್ತನೆ, ಮತ್ತು ನವ ನಿರ್ಮಾಣಗಳನ್ನು ಅವಳು ಕೈಗೆತ್ತಿಕೊಂಡಾಗ ಅವಳ ಕಾರ್ಯ ಶ್ರಮದಾಯಕ ಹಾಗೂ ಸೂಕ್ಷ್ಮಾತಿ–ಸೂಕ್ಷ್ಮದ್ದಾಗಿರುತ್ತದೆ. ನಮ್ಮ ಆತುರ ಸ್ವಭಾವಕ್ಕೆ ಇದು ಅತಿ ನಿಧಾನವಾದದ್ದು, ಕೊನೆಗಾಣದಂತಹದು ಎಂದು ಬಹಳ ಸಲ ತೋರಿಬರಬಹುದು, ಆದರೆ ಅದರಲ್ಲಿ ಸಾತತ್ಯ, ಸಮಗ್ರತೆ ಹಾಗೂ ನಿರ್ದೋಷಗಳಿರುತ್ತವೆ. ಏಕೆಂದರೆ ಅವಳ ಕಾರ್ಯಗಳಲ್ಲಿರುವ ಸಂಕಲ್ಪ ಸೂಕ್ಷ್ಮ ವಿವರಗಳಿಗೂ ಗಮನಕೊಡುವ, ಜಾಗರೂಕವಾಗಿರುವ, ಅವಿಶ್ರಾಂತ ರೀತಿಯದಾಗಿದೆ. ಅವಳು ನಮ್ಮತ್ತ ವಾಲಿಕೊಂಡಿದ್ದು ಅತಿ ಚಿಕ್ಕ ವಿವರವನ್ನೂ ನಿಭಾಯಿಸುವವಳು, ಅತಿ ಸೂಕ್ಷ್ಮವಾದ ಕುಂದುಕೊರತೆ ಕೊಂಕು ಹಾಗೂ ನ್ಯೂನತೆಗಳನ್ನು ತಿದ್ದುವವಳು. ಈ ಮೊದಲು ಮಾಡಿದ್ದನ್ನೂ ಮುಂದೆ ಮಾಡಬೇಕಾದುದನ್ನೂ ಪರಿಗಣಿಸಿ ಸರಿಯಾಗಿ ತೂಗಿ ನೋಡುವವಳು. ಅವಳು ಲಕ್ಷ್ಯಗೊಡುವುದಕ್ಕೆ ಯಾವುದೂ ಅತಿ ಚಿಕ್ಕದಾದದ್ದಲ್ಲ, ಇಲ್ಲವೆ ತೋರಿಕೆಯಲ್ಲಿ ಕ್ಷುಲ್ಲಕವಲ್ಲ. ಮನಸ್ಸಿಗೆ ಸುಲಭವಾಗಿ ಎಟುಕದ ಇಲ್ಲವೆ ಮುಸುಕಿನಲ್ಲಿರುವ ಇಲ್ಲವೆ ಗುಪ್ತವಾಗಿರುವ ವಿಷಯ ಯಾವುದೇ ಆಗಿರಲಿ ಅದು ಅವಳ ಕಣ್ಣು ತಪ್ಪಿಸಿಕೊಳ್ಳಲಾರದು. ಪ್ರತಿಯೊಂದು ಭಾಗವೂ ತನ್ನ ನಿಜವಾದ ರೂಪ ಪಡೆಯುವವರೆಗೆ, ಇಡಿಯದರಲ್ಲಿ ತನ್ನ ಸ್ಥಾನವನ್ನು ಕಂಡುಕೊಳ್ಳುವವರೆಗೆ ಮತ್ತು ತನ್ನ ನಿಖರವಾದ ಉದ್ದೇಶವನ್ನು ಈಡೇರಿಸುವವರೆಗೆ ಅವಳು ಮತ್ತೆ ಮತ್ತೆ ಎರಕ ಹೊಯ್ಯುತ್ತ ಶ್ರಮಿಸುವವಳು. ವಸ್ತು–ವಿಷಯಗಳನ್ನು ಕುರಿತು ಸತತ ಹಾಗೂ ಕಾರ್ಯನಿಷ್ಠ ಪ್ರಯತ್ನದಿಂದ ಕೈಕೊಳ್ಳುವ ಅವಳ ಏರ್ಪಾಟುಗಳು ಮತ್ತು ಮರು–ಏರ್ಪಾಟುಗಳಲ್ಲಿ ಅವಳ ದೃಷ್ಟಿ ಒಂದೇ ಕಾಲಕ್ಕೆ ಎಲ್ಲ ಆವಶ್ಯಕತೆಗಳ ಮೇಲೆ ಹಾಗೂ ಅವುಗಳನ್ನು ಪೂರೈಸುವ ರೀತಿಯ ಮೇಲೆ ನೆಟ್ಟಿರುತ್ತದೆ. ಅವಳ ಅಂತರ್ಬೋಧೆ ಯಾವುದನ್ನು ಆಯ್ದುಕೊಳ್ಳಬೇಕು, ಯಾವುದನ್ನು ತಿರಸ್ಕರಿಸಬೇಕು ಎಂಬುದನ್ನು ಅರಿತು ಸರಿಯಾದ ಉಪಕರಣ, ಸಮಯ, ಸ್ಥಿತಿ ಹಾಗೂ ವಿಧಾನ ಇವುಗಳನ್ನು ಯಶಸ್ವಿಯಾಗಿ ನಿರ್ಧರಿಸುವುದು. ಅನಾದರ, ನಿರ್ಲಕ್ಷ್ಯ ಹಾಗೂ



ಸೋಮಾರಿತನಗಳನ್ನು ಕಂಡರೆ ಮಹಾಸರಸ್ವತಿಯು ಅಸಹ್ಯಪಟ್ಟುಕೊಳ್ಳುವಳು. ಅಸಡ್ಡೆಯಿಂದ ಅಸಮರ್ಪಕವಾಗಿ, ಆತುರತೆಯಿಂದ, ನುಣುಚಿಕೊಳ್ಳುವಿಕೆಯಿಂದ ಮಾಡುವ ಕಾರ್ಯಗಳು, ನಾಜೂಕಿರದಿರುವುದೆಲ್ಲವೂ, ಸಾಧಾರಣವಾಗಿರುವು–ದೆಲ್ಲವೂ, ವೈಫಲ್ಯ, ಮತ್ತು ಉಪಕರಣಗಳ ಹಾಗೂ ಸಹಜ ಶಕ್ತಿಗಳ ತಪ್ಪು ರೀತಿಯ ಹೊಂದಾಣಿಕೆ ಮತ್ತು ದುರುಪಯೋಗ, ಕಾರ್ಯಗಳನ್ನು ಕೈಕೊಳ್ಳದೇ ಬಿಟ್ಟುಕೊಡುವುದು, ಇಲ್ಲವೆ ಪೂರೈಸದೇ ನಡುವೇ ಬಿಟ್ಟುಕೊಡುವುದು ಮಹಾಸರಸ್ವತಿಯ ಸ್ವಭಾವಕ್ಕೆ ಜುಗುಪ್ಸೆ ಹುಟ್ಟಿಸುವಂತಹದು ಮತ್ತು ಪರಕೀಯವಾದದ್ದು. ಅವಳ ಕಾರ್ಯ ಪೂರ್ತಿಯಾದಾಗ ಯಾವುದನ್ನೂ ಮರೆತಿರುವುದಿಲ್ಲ, ಯಾವ ಭಾಗವನ್ನೂ ತಪ್ಪು ಸ್ಥಳದಲ್ಲಿರಿಸಿರುವುದಿಲ್ಲ, ಉಪೇಕ್ಷಿಸಿರುವುದಿಲ್ಲ, ಇಲ್ಲವೆ ದೋಷಪೂರಿತ ಸ್ಥಿತಿಯಲ್ಲಿ ಇರಲು ಬಿಟ್ಟುಕೊಟ್ಟಿರುವುದಿಲ್ಲ, ಎಲ್ಲವೂ ದೃಢ, ನಿಖರ, ಸಂಪೂರ್ಣ ಹಾಗೂ ಪ್ರಶಂಸಾರ್ಹವಾಗಿರುತ್ತದೆ. ಸಂಪೂರ್ಣ ಪರಿಪೂರ್ಣತೆಗೆ ಲವಲೇಶ ಕೊರತೆ ಉಂಟಾದರೂ ಅವಳಿಗೆ ಅದು ಅತೃಪ್ತಿಯನ್ನುಂಟು ಮಾಡುತ್ತದೆ. ತನ್ನ ಸೃಷ್ಟಿಯ ಪೂರ್ಣತೆಗಾಗಿ, ಅವಶ್ಯವೆನಿಸಿದರೆ ಅನಂತ ಕಾಲದವರೆಗೆ ಶ್ರಮಿಸುವುದನ್ನು ಎದುರಿಸಲು ಅವಳು ಸಿದ್ಧಳಾಗಿರುತ್ತಾಳೆ. ಆದ್ದರಿಂದ ಶ್ರೀಮಾತೆಯ ಎಲ್ಲ ಸಾಮರ್ಥ್ಯಗಳಲ್ಲಿ ಮಹಾಸರಸ್ವತಿಯದು ಮನುಷ್ಯನೊಡನೆ ಹಾಗೂ ಅವನ ಸಹಸ್ರಾರು ಅಪರಿಪೂರ್ಣತೆಗಳೊಡನೆ ಬಹಳಷ್ಟು ಶ್ರಮಪಡುವಂತಹದು. ದಯಾಮಯಿ, ಹಸನ್ಮುಖಿ, ಆತ್ಮೀಯಳು, ಹಾಗೂ ಸಹಾಯಕಳು, ಮನುಷ್ಯ ಮತ್ತೆ ಮತ್ತೆ ವಿಫಲನಾದಾಗಲೂ ಮುಂದುವರಿಯಲು ಅವನನ್ನು ಆಗ್ರಹಪಡಿಸುವವಳು ಆಗಿರುವ ಅವಳ ಹಸ್ತ ನಮ್ಮ ಪ್ರತಿಯೊಂದು ಹೆಜ್ಜೆಗೆ ಬೆಂಬಲ ನೀಡುತ್ತದೆ, ಆದರೆ ಅದಕ್ಕೆ ನಾವು ನಮ್ಮ ಸಂಕಲ್ಪದಲ್ಲಿ ಏಕನಿಷ್ಠರೂ, ಸರಳರೂ ಮತ್ತು ನಿಷ್ಕಪಟಿಗಳೂ ಆಗಿರಬೇಕೆಂಬ ನಿಬಂಧನೆಯಿದೆ. ದ್ವಂದ್ವ ಮನಸ್ಸನ್ನು ಆಕೆ ಸಹಿಸುವುದಿಲ್ಲ ಮತ್ತು ನಾಟಕೀಯತೆ, ಬೂಟಾಟಿಕೆ, ಆತ್ಮವಂಚನೆ, ಸುಳ್ಳುಸೋಗು ಇವುಗಳಿಗೆ ಅವಳು ಪ್ರಕಟಪಡಿಸುವ ಅಣಕ ದಯೆಯಿಲ್ಲದ್ದಾಗಿರುತ್ತದೆ. ನಮ್ಮ ಬೇಡಿಕೆಗಳಿಗೆ ತಾಯಿ ಸ್ವರೂಪಳೂ, ನಮ್ಮ ಕಷ್ಟಗಳಲ್ಲಿ ಸಹಾಯ ನೀಡುವ ಸ್ನೇಹಪರಳಾದವಳೂ, ಅವಿಶ್ರಾಂತ ಪ್ರಶಾಂತಳೂ, ವಿಶ್ವಸನೀಯ ಸಲಹೆಗಾರಳೂ ಆಗಿರುವ ಅವಳು ತನ್ನ ಸಮುಜ್ವಲ ಮಂದಹಾಸದಿಂದ ನಮ್ಮ ವಿಷಣ್ಣತೆಯ, ಸಿಡುಕುಮಿಡುಕಿನ ಹಾಗೂ ಖಿನ್ನತೆಯ ಮೋಡಗಳನ್ನು ಚದುರಿಸುವಳು, ಸದಾ ಸಿದ್ಧವಾಗಿರುವ ತನ್ನ ಬೆಂಬಲದ ನೆನಪನ್ನು ನಮಗೆ ಯಾವಾಗಲೂ ತಂದುಕೊಡುವಳು, ಸನಾತನ

ಪರಂಜ್ಯೋತಿಯತ್ತ ನಮ್ಮ ಗಮನ ಸೆಳೆಯುವಳು, ಪರಾಪ್ರಕೃತಿಯ ಸಮಗ್ರತೆಯತ್ತ ನಮ್ಮನ್ನು ಸದಾ ತಳ್ಳುವ, ಆಳವಾದ, ಅವಿಚ್ಛಿನ್ನ ಒತ್ತಾಯ ತರುವುದರಲ್ಲಿ ಅವಳು ಸ್ಥಿರವಾಗಿ, ಅಚಂಚಲವಾಗಿ, ಪಟ್ಟುಹಿಡಿದು ಕಾರ್ಯನಿರತಳಾಗಿರುವಳು. ಶ್ರೀಮಾತೆಯ ಇನ್ನುಳಿದ ಮುಖಗಳ ಕಾರ್ಯ, ಅದರ ಸಂಪೂರ್ಣತೆಗಾಗಿ, ಮಹಾಸರಸ್ವತಿಯ ಸಾಮರ್ಥ್ಯವನ್ನೇ ಅವಲಂಬಿಸಿರುತ್ತದೆ, ಏಕೆಂದರೆ ಅವಳು ಅದಕ್ಕೆ ಭೌತಿಕ ಆಧಾರವನ್ನು ಸುನಿಶ್ಚಿತಗೊಳಿಸಿ, ವಿವರಗಳ ಸತ್ವವನ್ನು ವಿಸ್ತರಿಸಿ ಮತ್ತು ತನ್ನ ಕಾರ್ಯರಚನೆಯ ಕವಚವನ್ನು ನಿರ್ಮಿಸಿ ಭದ್ರಗೊಳಿಸುವಳು.

*

## ಶ್ರೀಮಾತೆಯ ಇನ್ನಿತರ ಶ್ರೇಷ್ಠ ವ್ಯಕ್ತಿವಿಶಿಷ್ಟತೆಗಳು

ಶ್ರೀಮಾತೆಯ ಇನ್ನಿತರ ಶ್ರೇಷ್ಠ ದೈವೀ ವ್ಯಕ್ತಿವಿಶಿಷ್ಟತೆಗಳಿವೆ, ಆದರೆ ಅವುಗಳನ್ನು ಕೆಳಗಿಳಿಸಿ ತರುವುದು ಹೆಚ್ಚು ಕಠಿಣವಾದದ್ದು, ಮತ್ತು ಅವು ಪೃಥ್ವಿಯ ಮೇಲಿನ ಉತ್ಕ್ರಾಂತಿಯಲ್ಲಿ ಅಷ್ಟೊಂದು ಪ್ರಾಮುಖ್ಯತೆಯಿಂದ ಎದ್ದು ಕಾಣುವಂತೆ ಮುಂಭಾಗಕ್ಕೆ ಬಂದಿಲ್ಲ. ಅವುಗಳ ಮಧ್ಯೆ ಅತಿಮಾನಸ ಸಿದ್ಧಿಗೆ ಅತ್ಯಗತ್ಯವಾಗಿರುವ ದೈವೀ ಸಾನ್ನಿಧ್ಯಗಳಿವೆ – ಈ ಎಲ್ಲವುಗಳಲ್ಲಿ ರಹಸ್ಯಮಯ ಮತ್ತು ಸಾಮರ್ಥ್ಯಪೂರ್ಣ ಭಾವಪರವಶತೆ ಹಾಗೂ ಆನಂದಗಳಿರುವ ಅವಳ ದೈವೀ ವ್ಯಕ್ತಿವಿಶಿಷ್ಟತೆಯೊಂದು ಹೆಚ್ಚು ಶ್ರೇಷ್ಠವಾದದ್ದಾಗಿದೆ. ಪರಮೋಚ್ಚ ದೈವೀ ಪ್ರೇಮದಿಂದ ಪ್ರವಹಿಸುವ ಈ ಆನಂದ ಮಾತ್ರ ದೈವಿಕತೆಯ ಅತ್ಯುಚ್ಚ ಶಿಖರಗಳು ಮತ್ತು ಭೌತದ್ರವ್ಯದ ಅತಿ ನಿಮ್ನ ಸೃಷ್ಟಿಗೆ ಪೂರ್ವದಲ್ಲಿ ಎಲ್ಲವೂ ಅಸ್ತವ್ಯಸ್ತವಾಗಿದ್ದ ಕೂಪಗಳು ಇವುಗಳ ನಡುವಿನ ಕಂದರವನ್ನು ಕೊನೆಗಾಣಿಸಬಲ್ಲದು. ಅದ್ಭುತವಾದ ಅತ್ಯಂತ ದೈವಿಕ ಜೀವನದ ಬೀಗದ ಕೈಯನ್ನು ಈ ಆನಂದ ಹಿಡಿದುಕೊಂಡಿದೆ. ಮತ್ತು ಈಗಲೂ ಕೂಡ ತನ್ನ ರಹಸ್ಯಗಳಿಂದ ವಿಶ್ವದ ಎಲ್ಲ ಇತರ ದೈವೀ ಸಾಮರ್ಥ್ಯಗಳಿಗೆ ಆಧಾರ ನೀಡುತ್ತದೆ. ಆದರೆ ಬಂಧನಕ್ಕೊಳಗಾದ, ಅಹಂಕಾರಯುಕ್ತ ಮತ್ತು ಮಬ್ಬಾದ ಮಾನವ ಸ್ವಭಾವ ಈ ಶ್ರೇಷ್ಠ ಸಾನ್ನಿಧ್ಯಗಳನ್ನು ಸ್ವೀಕರಿಸುವುದಕ್ಕಾಗಲಿ ಇಲ್ಲವೆ ಅವುಗಳ ಪ್ರಬಲ ಕ್ರಿಯೆಗೆ ಆಧಾರ ನೀಡುವುದಕ್ಕಾಗಲಿ ಅನರ್ಹವಾಗಿದೆ. ಆ ನಾಲ್ಕು ದೈವೀ ಸಾಮರ್ಥ್ಯಗಳು ತಮ್ಮ ಸಾಮರಸ್ಯ, ಚಲನೆಯಲ್ಲಿಯ ಸ್ವಾತಂತ್ರ್ಯ ಇವುಗಳನ್ನು ಮನಸ್ಸು, ದೇಹ ಹಾಗೂ ಪ್ರಾಣಗಳಲ್ಲಿ ಸ್ಥಾಪಿಸಿದಾಗ ಮಾತ್ರ ಆ ಇತರ ಅಪರೂಪದ ದೈವೀ ಸಾಮರ್ಥ್ಯಗಳು ಪೃಥ್ವಿಯ



ಮೇಲಿನ ಚಲನೆಯಲ್ಲಿ ಪ್ರಕಟಗೊಳ್ಳಬಲ್ಲವು ಮತ್ತು ಅತಿಮಾನಸ ಕ್ರಿಯೆ ಸಾಧ್ಯವಾಗುವಂತೆ ಮಾಡಬಲ್ಲವು. ಏಕೆಂದರೆ ಶ್ರೀಮಾತೆಯ ಎಲ್ಲ ಸಾಮರ್ಥ್ಯಗಳು ಅವಳಲ್ಲಿ ಒಟ್ಟಿಗೆ ಸೇರಿದಾಗ ಹಾಗೂ ಪ್ರಕಟಗೊಂಡಾಗ ಮತ್ತು ಅವುಗಳ ಪ್ರತ್ಯೇಕ ಕಾರ್ಯಗತಿ ಸಾಮರಸ್ಯವಿರುವ ಏಕತೆಯ ತಿರುವು ಪಡೆದಾಗ ಮತ್ತು ಅವು ಅವಳಲ್ಲಿ ಅತಿಮಾನಸ ದೇವಪ್ರಮುಖರ ಹಂತಕ್ಕೆ ಮೇಲೇರಿದಾಗ ಮಾತ್ರ ಅತಿಮಾನಸ ಮಹಾಶಕ್ತಿಯೆಂದು ಶ್ರೀಮಾತೆ ತನ್ನನ್ನು ತೆರೆದು ತೋರಿಸುತ್ತಾಳೆ ಮತ್ತು ತನ್ನ ಪ್ರಕಾಶಮಯ ವಿಶ್ವಾತೀತತೆಗಳನ್ನು ವರ್ಣನಾತೀತ ಸ್ತರದಿಂದ ಕೆಳಗೆ ಸುರಿಯುತ್ತ ತರುತ್ತಾಳೆ. ಆಗ ಮಾನವ ಸ್ವಭಾವ ದೈವೀ ಸ್ವಭಾವವಾಗಿ ಬದಲಾಗುವುದು, ಏಕೆಂದರೆ ಅತಿಮಾನಸ ಸತ್ಯಪ್ರಜ್ಞೆಯ ಹಾಗೂ ಸತ್ಯ ಸಾಮರ್ಥ್ಯದ ಪ್ರಾಥಮಿಕ ಧಾರೆಗಳನ್ನು ತಂತಿಗಳ ಹಾಗೆ ಒಟ್ಟಿಗೆ ಕಟ್ಟಲಾಗಿರುತ್ತದೆ ಮತ್ತು ಅವುಗಳನ್ನು ಜೀವನದ ತಂತಿವಾದ್ಯಕ್ಕೆ, ಸನಾತನನ ಲಯಬದ್ಧತೆಗಾಗಿ, ಜೋಡಿಸಲಾಗಿರುತ್ತದೆ.

*

## ನೀವು ಹೊಂದಿರಬೇಕಾದ ಮೂರು ವಿಷಯಗಳು

ನಿಮಗೆ ಈ ಪರಿವರ್ತನೆ ಬೇಕಾಗಿದ್ದರೆ ನಿಮ್ಮನ್ನು ಶ್ರೀಮಾತೆಯ ಕೈಗಳಿಗೆ ಹಾಗೂ ಅವಳ ದೈವೀ ಸಾಮರ್ಥ್ಯಗಳಿಗೆ ದುಷ್ಟ ಅಪೇಕ್ಷೆಯನ್ನಿರಿಸಿಕೊಳ್ಳದೆ, ವಿರೋಧಿಸದೆ ಒಪ್ಪಿಸಿರಿ, ಮತ್ತು ಅವಳು ನಿಮ್ಮಂತರಂಗದಲ್ಲಿ ಅಡೆತಡೆಯಿಲ್ಲದೆ ಕಾರ್ಯ ಕೈಕೊಳ್ಳಲು ಅನುವು ಮಾಡಿಕೊಡಿರಿ. ಮೂರು ವಿಷಯಗಳು ನಿಮ್ಮಲ್ಲಿರಬೇಕು: ಪ್ರಜ್ಞೆ, ನಮ್ಯತೆ ಮತ್ತು ಕಾದಿರಿಸಿಕೊಂಡಿರದ ಸಮರ್ಪಣ. ಏಕೆಂದರೆ ನಿಮ್ಮ ಮನಸ್ಸಿನಲ್ಲಿ, ಆತ್ಮದಲ್ಲಿ, ಹೃದಯದಲ್ಲಿ, ಪ್ರಾಣದಲ್ಲಿ ಮತ್ತು ನಿಮ್ಮ ದೇಹದ ಜೀವಕೋಶಗಳಲ್ಲಿಯೂ ಕೂಡ ಅವಳ ದೈವೀ ಸಾಮರ್ಥ್ಯಗಳು ಹಾಗೂ ಅವುಗಳ ಕಾರ್ಯಗತಿ ಇವುಗಳ ಬಗ್ಗೆ ನೀವು ಅರಿವುಳ್ಳವರಾಗಿರಬೇಕು. ಏಕೆಂದರೆ ಅವಳು ನಿಮ್ಮ ಮಬ್ಬುತನ, ಅಪ್ರಜ್ಞೆಯ ಭಾಗಗಳು ಹಾಗೂ ಚಲನೆಗಳು ಇವುಗಳಲ್ಲಿ ತನ್ನ ಕಾರ್ಯವನ್ನು ಮಾಡಬಲ್ಲಳು ಮತ್ತು ಮಾಡುತ್ತಾಳೆ, ಅದು ನೀವು ಎಚ್ಚತ್ತುಕೊಂಡ ಹಾಗೂ ಅವಳೊಡನೆ ಜೀವಂತ ಸಂಸರ್ಗ ಹೊಂದಿದ ಸ್ಥಿತಿಯಲ್ಲಿ ಇರುವಾಗಿನ ಹಾಗೆ ಇರುವಂತಹದಲ್ಲ. ನಿಮ್ಮ ಎಲ್ಲ ಸ್ವಭಾವ ಅವಳ ಸ್ಪರ್ಶಕ್ಕೆ ನಮ್ಯವಾಗಿರಬೇಕು – ಅದು ಸ್ವ–ಸಂತೃಪ್ತ, ಅಜ್ಞಾನಿ ಮನಸ್ಸು ಪ್ರಶ್ನಿಸುವಂತಿರ–ಬಾರದು, ಸಂಶಯ ಪಡುವಂತಹದು, ಚರ್ಚೆಗೆ ಆಸ್ಪದ ಮಾಡಿಕೊಡುವಂತಹದು,

ಅದು ನೀಡುವ ಜ್ಞಾನೋದಯಕ್ಕೆ ಮತ್ತು ಬದಲಾವಣೆಗೆ ವೈರಿಯಾಗಿರುವಂತಹದು ಆಗಿರಬಾರದು; ಮನುಷ್ಯನಲ್ಲಿರುವ ಪ್ರಾಣಿಕ ಮಾಡುವ ಹಾಗೆ ತನ್ನದೇ ಚಲನೆಗಳಿಗೆ ಒತ್ತುಕೊಡದೆ ಇರದ, ಪ್ರತಿಯೊಂದು ದೈವೀ ಪ್ರಭಾವಕ್ಕೆ ತನ್ನ ಆಸೆಗಳು ಹಾಗೂ ಬದ್ಧ ದ್ವೇಷ ಇವು ಬಿಟ್ಟೂ ಬಿಡದೆ ದ್ವೇಷಿಸುವಂತೆ ಮಾಡದಿರದ ಸ್ವಭಾವವಿರಬೇಕು, ಮನುಷ್ಯನ ಭೌತಿಕ ಪ್ರಜ್ಞೆ ಅಡೆತಡೆ ಒಡ್ಡುವ ಹಾಗೆ ಮತ್ತು ಅದು ತನ್ನ ಅಲ್ಪತ್ವದಲ್ಲಿ ಹಾಗೂ ಅಂಧಕಾರದಲ್ಲಿ ಇರುವ ಸಂತೋಷಕ್ಕೆ ಅಂಟಿಕೊಂಡಿದ್ದು, ಅದರ ನಿರ್ಜೀವ ನಿಯತ ಕ್ರಮ (routine) ಕ್ಕೆ ಇಲ್ಲವೆ ಅದರ ಮಬ್ಬು ಮೈಗಳ್ಳತನಕ್ಕೆ ಇಲ್ಲವೆ ನಿರುತ್ಸಾಹದ ನಿದ್ರಾವಸ್ಥೆಗೆ ಕ್ಷೋಭೆಯನ್ನುಂಟು ಮಾಡುವ ಪ್ರತಿಯೊಂದು ಸ್ಪರ್ಶದ ವಿರುದ್ಧ ಕೂಗೆಬ್ಬಿಸುವ ಹಾಗೆ ಅವನ ಸ್ವಭಾವ ಅಡೆತಡೆಯನ್ನುಂಟು ಮಾಡಬಾರದು, ಅಸಾಮರ್ಥ್ಯದಲ್ಲಿ, ಜಡತ್ವದಲ್ಲಿ ಹಾಗೂ ತಮಸ್ಸಿನಲ್ಲಿ ನೆಲೆಸಿರಬಾರದು. ನಿಮ್ಮ ಆಂತರಿಕ ಹಾಗೂ ಬಾಹ್ಯ ಸತ್ತೆಯ ಕಾದಿರಿಸಿಕೊಂಡಿರದ ಸಮರ್ಪಣ ಈ ನಮ್ಯತೆಯನ್ನು ನಿಮ್ಮ ಸ್ವಭಾವದ ಎಲ್ಲ ಭಾಗಗಳಲ್ಲಿ ತಂದುಕೊಡುವುದು. ಮೇಲ್ಗಡೆಯಿಂದ ಪ್ರವಾಹದಂತೆ ಬರುವ ದೈವೀ ವಿವೇಕ, ಪ್ರಕಾಶ, ಶಕ್ತಿ, ಸಾಮರಸ್ಯ, ಸೌಂದರ್ಯ ಹಾಗೂ ಪರಿಪೂರ್ಣತೆ ಇವೆಲ್ಲವುಗಳಿಗೆ ಸತತ ತೆರೆದಿರಿಸಿಕೊಳ್ಳುವಿಕೆಯ ಮೂಲಕ ನಿಮ್ಮ ಪ್ರತಿಯೊಂದು ಭಾಗದಲ್ಲಿ ಪ್ರಜ್ಞೆ ಎಚ್ಚತ್ತುಕೊಳ್ಳುವುದು ಮತ್ತು ತನ್ನನ್ನು ಅತಿಮಾನಸದ ಅತಿಪ್ರಜ್ಞೆಯ ದೈವೀಶಕ್ತಿಯೊಂದಿಗೆ ಏಕವಾಗಿಸುವುದು, ಆ ಪ್ರಜ್ಞೆ ಈಗ ತಳಶಾಯಿಯಾಗಿ ಉಳಿದುಕೊಂಡಿರುವುದಿಲ್ಲ, ಮೇಲ್ಗಡೆಯಿಂದ, ಕೆಳಗಿನಿಂದ ಮತ್ತು ತನ್ನನ್ನು ಸುತ್ತುವರಿದಿರುವುದರಿಂದ ಆ ದೈವೀಶಕ್ತಿಯ ಎಲ್ಲ ಸಾಮರ್ಥ್ಯಗಳು ವ್ಯಾಪಿಸಿಕೊಂಡಿರುವುದರ ಭಾವನೆಯನ್ನು ದೇಹ ತಂದುಕೊಳ್ಳುತ್ತದೆ ಮತ್ತು ಪರಮೋಚ್ಚ ದೈವೀ ಪ್ರೇಮ ಮತ್ತು ಆನಂದಗಳಿಂದ ಪುಳಕಿತಗೊಳ್ಳುತ್ತದೆ.

**ಜಾಗರೂಕರಾಗಿರಿ**

ಆದರೆ ಜಾಗರೂಕರಾಗಿರಿ, ಮತ್ತು ನಿಮ್ಮ ಚಿಕ್ಕ ಪಾರ್ಥಿವ ಮನಸ್ಸಿನಿಂದ ದೈವೀ ಶ್ರೀಮಾತೆಯನ್ನು ಅರ್ಥಮಾಡಿಕೊಳ್ಳಲು, ತೀರ್ಮಾನಕ್ಕೊಳಪಡಿಸಲು ಪ್ರಯತ್ನಿಸುವುದು ಬೇಡ, ಆ ಮನಸ್ಸು ತನ್ನ ಆಚೆಗಿರುವ ವಿಷಯಗಳನ್ನು ಅದರದೇ ರೂಢಿಯ ನಡವಳಿಕೆಗೆ, ಮಾನದಂಡಗಳಿಗೆ, ಅದರ ಸಂಕುಚಿತ ತರ್ಕಗಳಿಗೆ, ತಪ್ಪೆಸಗುವ ಅನಿಸಿಕೆಗಳಿಗೆ, ಅದರ ತಳರಹಿತ ಆಕ್ರಮಣಕಾರಕ ಅಜ್ಞಾನಕ್ಕೆ ಮತ್ತು ಅದರ ಕ್ಷುದ್ರ ಆತ್ಮವಿಶ್ವಾಸದ ಜ್ಞಾನಕ್ಕೆ ಅಧೀನಪಡಿಸಲು ಇಷ್ಟಪಡುತ್ತದೆ. ಮಾನವ



ಮನಸ್ಸು ಅದರ ಅರ್ಧಪ್ರಕಾಶದಿಂದ ಕೂಡಿದ ಮಬ್ಬಿನ ಸೆರೆಮನೆಯಲ್ಲಿ ಮುಚ್ಚಿಹಾಕಿಕೊಂಡಿರುವುದರಿಂದಾಗಿ ದೈವೀಶಕ್ತಿಯ ಹೆಜ್ಜೆಗಳ ಬಹುಮುಖ ಸ್ವಾತಂತ್ರ್ಯವನ್ನು ಅನುಸರಿಸಲಾರದು, ಅವಳ ದೃಷ್ಟಿಯ ಹಾಗೂ ಕ್ರಿಯೆಯ ತೀವ್ರತೆ ಹಾಗೂ ಸಂಕೀರ್ಣತೆ ಮನಸ್ಸಿನ ಎಡವುವ ಗ್ರಹಿಕೆಯನ್ನು ಮೀರಿ ಹೋಗುತ್ತದೆ, ಅವಳ ಚಲನೆಯ ಪ್ರಮಾಣಗಳು ಅದರ ಪ್ರಮಾಣಗಳಾಗಿರುವುದಿಲ್ಲ. ಅವಳ ಹಲವಾರು ಭಿನ್ನ ವ್ಯಕ್ತಿವಿಶಿಷ್ಟತೆಗಳ ತೀವ್ರಗತಿಯ ಬದಲಾವಣೆ, ಅವಳ ವೇಗೋತ್ಕರ್ಷ ಹಾಗೂ ನಿಧಾನಗೊಳಿಸುವಿಕೆ, ಒಬ್ಬರ ಸಮಸ್ಯೆಯನ್ನು ಅವಳು ಪರಿಹರಿಸುವ ರೀತಿ ಇನ್ನೊಬ್ಬರದನ್ನು ಪರಿಹರಿಸುವುದಕ್ಕಿಂತ ಭಿನ್ನವಾಗಿರುವುದು, ಒಂದು ಕ್ರಮವನ್ನು ಈಗ ಕೈಗೆತ್ತಿಕೊಂಡು ಇನ್ನೊಂದನ್ನು ಕೈಬಿಡುವುದು ಮತ್ತು ಅವೆಲ್ಲವುಗಳನ್ನು ಒಟ್ಟಿಗೆ ಸೇರಿಸುವುದು ಇವೆಲ್ಲವನ್ನು ನೋಡುವುದರಿಂದ ದಿಗ್ಭ್ರಮೆಗೊಳಗಾದ ಮಾನವ ಮನಸ್ಸು, ಪರಮೋಚ್ಚ ದೈವೀ ಸಾಮರ್ಥ್ಯವು ದೈವೀ ಪ್ರಕಾಶದೆಡೆಗೆ ಅವಿದ್ಯೆಯ ಜಟಿಲ ಮಾರ್ಗದೊಳಗಿಂದ ಸುರುಳಿ ಸುತ್ತುತ್ತ ಮೇಲ್ಗಡೆಗೆ ಕೊಚ್ಚಿಕೊಂಡು ಹೋಗುವುದನ್ನು ಗುರುತಿಸಲಾರದು. ಎಲ್ಲದಕ್ಕಿಂತಲೂ ಹೆಚ್ಚಾಗಿ ನಿಮ್ಮ ಆತ್ಮವನ್ನು ಅವಳಿಗೆ ತೆರೆದಿರಿಸಿರಿ, ಚೈತ್ಯ ಸ್ವಭಾವದಿಂದ ಅವಳ ಬಗ್ಗೆ ಭಾವನೆ ತಂದುಕೊಳ್ಳಿರಿ, ಚೈತ್ಯ ದೃಷ್ಟಿಯಿಂದ ಅವಳನ್ನು ನೋಡಿರಿ ಮತ್ತು ಅದು ಮಾತ್ರ ದೈವೀ ಸತ್ಯಕ್ಕೆ ನೇರವಾಗಿ ಪ್ರತಿಸ್ಪಂದಿಸಬಲ್ಲದು. ಆಗ ಶ್ರೀಮಾತೆಯೇ ಸ್ವತಃ ನಿಮ್ಮ ಮನಸ್ಸು, ಹೃದಯ, ಪ್ರಾಣ ಮತ್ತು ಭೌತಿಕ ಪ್ರಜ್ಞೆ ಇವುಗಳಲ್ಲಿರುವ ಚೈತ್ಯಾಂಶಗಳ ಮೂಲಕ ಇವುಗಳಲ್ಲಿ ಜ್ಞಾನೋದಯವನ್ನುಂಟು ಮಾಡುವಳು ಮತ್ತು ಇವುಗಳಿಗೆ ತನ್ನ ರೀತಿಗಳನ್ನು ಹಾಗೂ ಸ್ವಭಾವವನ್ನು ತೆರೆದು ತೋರಿಸುವಳು.

ಸರ್ವಜ್ಞತೆ ಮತ್ತು ಸರ್ವಸಾಮರ್ಥ್ಯ ಕುರಿತು ಇರುವ ನಮ್ಮ ಅಸಂಸ್ಕೃತ ಮೇಲ್ಮೈ ವಿಚಾರಗಳ ಪ್ರಕಾರ ದೈವೀ ಸಾಮರ್ಥ್ಯ ಕಾರ್ಯಮಾಡಲಿ ಎಂಬ ಅಜ್ಞಾನಿ ಮನಸ್ಸಿನ ಒತ್ತಾಯದ ಬೇಡಿಕೆಯನ್ನು ಇರಿಸುವ ತಪ್ಪನ್ನು ಮಾಡಬೇಡಿರಿ. ಏಕೆಂದರೆ ನಮ್ಮ ಮನಸ್ಸು, ಪ್ರತಿಯೊಂದು ತಿರುವಿನಲ್ಲಿ, ಪವಾಡ ಸದೃಶ ಸಾಮರ್ಥ್ಯ, ಸುಲಭವಾಗಿ ದೊರಕುವ ಯಶಸ್ಸು ಮತ್ತು ಕಣ್ಣು ಕುಕ್ಕಿಸುವ ಭವ್ಯತೆ ಇವುಗಳಿಂದ ಪ್ರಭಾವಿತವಾಗಲು ಕೂಗೆಬ್ಬಿಸುತ್ತದೆ, ಹಾಗಿಲ್ಲದಿದ್ದರೆ ಭಗವಂತ ಇಲ್ಲಿದ್ದಾನೆಂದು ನಂಬಲಾರದು. ಶ್ರೀಮಾತೆ ಅವಿದ್ಯೆಯ ಕ್ಷೇತ್ರಗಳಲ್ಲಿ ಅವಿದ್ಯೆಯೊಡನೆ ವ್ಯವಹರಿಸುತ್ತಾಳೆ, ಅಲ್ಲಿ ಅವಳು ಅವರೋಹಣ ಮಾಡಿದ್ದಾಳೆ ಮತ್ತು

ಪೂರ್ತಿಯಾಗಿ ಅದರ ಮೇಲಿದ್ದುಕೊಂಡಿಲ್ಲ. ತನ್ನ ಜ್ಞಾನ, ಸಾಮರ್ಥ್ಯಗಳನ್ನು ಭಾಗಶಃ ಪರದೆಯ ಹಿಂದಿರಿಸುತ್ತಾಳೆ, ಭಾಗಶಃ ಪರದೆಯ ಮುಂದೆ ತರುತ್ತಾಳೆ, ಬಹಳಷ್ಟು ಸಲ ಅವುಗಳನ್ನು ತನ್ನ ಉಪಕರಣಗಳು ಹಾಗೂ ವ್ಯಕ್ತಿವಿಶಿಷ್ಟತೆಗಳು ಇವುಗಳಿಂದ ಹಿಂದೆ ಇರಿಸಿಕೊಂಡಿರುತ್ತಾಳೆ ಮತ್ತು ಇವುಗಳನ್ನು ಪರಿವರ್ತಿಸುವುದು ಸಾಧ್ಯವಾಗಲೆಂದು ಅರಸುತ್ತಿರುವ ಮನಸ್ಸಿನ ರೀತಿ, ಅಭೀಪ್ಸೆಪಡುವ ಚೈತ್ಯದ ರೀತಿ, ಹೋರಾಟ ನಡೆಸುವ ಪ್ರಾಣಿಕದ ರೀತಿ, ಸೆರೆಗೊಳಗಾಗಿರುವ ವೇದನೆ ಪಡುತ್ತಿರುವ ಭೌತಿಕ ಸ್ವಭಾವದ ರೀತಿ ಇವನ್ನೆಲ್ಲ ಅನುಸರಿಸುತ್ತಾಳೆ. ಪರಮೋಚ್ಚ ದೈವೀ ಸಂಕಲ್ಪ ಇರಿಸಿರುವ ಷರತ್ತುಗಳಿವೆ, ಸಡಿಲಿಸಬೇಕಾದ ತೊಡಕಿ ಹಾಕಿಕೊಂಡ ಅನೇಕ ಗಂಟುಗಳಿವೆ, ಅವುಗಳನ್ನು ಒಮ್ಮಿಂದೊಮ್ಮೆಗೆ ದೂರವಿರಿಸುವಂತೆ ಕತ್ತರಿಸಿ ಹಾಕಲಾಗುವುದಿಲ್ಲ. ಅಸುರರು ಮತ್ತು ರಾಕ್ಷಸರು ಉತ್ಕ್ರಾಂತಿಯಲ್ಲಿರುವ ಪಾರ್ಥಿವ ಸ್ವಭಾವವನ್ನು ಹಿಡಿದಿಟ್ಟುಕೊಂಡಿದ್ದಾರೆ, ಅವರನ್ನು ಅವರದೇ ಕರಾರುಗಳಿಗನು– ಗುಣವಾಗಿ, ಅವರು ಬಹಳ ಕಾಲದಿಂದ ಜಯಿಸಿ ತಮ್ಮ ವಶದಲ್ಲಿ ಇಟ್ಟುಕೊಂಡ ಕಾರ್ಯಕ್ಷೇತ್ರಗಳಲ್ಲಿ ಎದುರಿಸಬೇಕಾಗಿದೆ. ನಮ್ಮೊಳಗಿರುವ ಮಾನವ ಜೀವಿಯನ್ನು ಅದರ ಸೀಮಿತತೆಗಳಾಚೆಗೆ ಮೀರಿ ಹೋಗಲು ತಯಾರು ಮಾಡಬೇಕಾಗಿದೆ, ಕರೆದೊಯ್ಯಬೇಕಾಗಿದೆ, ಅದು ಅತಿ ದುರ್ಬಲ ಹಾಗೂ ಮಬ್ಬಾಗಿರುವುದರಿಂದ ಅದನ್ನು ಒಮ್ಮೆಗೆ ಬಹಳ ಎತ್ತರದಲ್ಲಿರುವ ರೂಪದತ್ತ ಏರುವಂತೆ ಮಾಡಲಾಗುವುದಿಲ್ಲ. ದೈವೀಪ್ರಜ್ಞೆ ಹಾಗೂ ದೈವೀಶಕ್ತಿಗಳು ಅಲ್ಲಿವೆ ಮತ್ತು ಪ್ರತಿಕ್ಷಣ, ಶ್ರಮದ ಪರಿಸ್ಥಿತಿಗಳಲ್ಲಿ ಅವಶ್ಯವಾದ ಕಾರ್ಯವನ್ನು ಕೈಕೊಳ್ಳುತ್ತವೆ, ಯಾವಾಗಲೂ ವಿಧಿನಿಯಮದ ಪ್ರಕಾರ ಹೆಜ್ಜೆ ಇರಿಸುತ್ತವೆ ಮತ್ತು ಅಪರಿಪೂರ್ಣತೆಯ ಮಧ್ಯೆ ಬರಲಿರುವ ಪರಿಪೂರ್ಣತೆಗೆ ಆಕಾರ ಕೊಡುತ್ತವೆ. ಆದರೆ ಅತಿಮನಸ್ಸು ನಿಮ್ಮಲ್ಲಿ ಅವರೋಹಣ ಮಾಡಿದಾಗ ಮಾತ್ರ, ಅತಿಮಾನಸ ಶಕ್ತಿಯ ರೂಪದಲ್ಲಿ ಅವಳು ಅತಿಮಾನಸ ಸ್ವಭಾವಗಳೊಡನೆ ನೇರವಾಗಿ ವ್ಯವಹರಿಸಬಲ್ಲಳು. ನಿಮ್ಮ ಮನಸ್ಸನ್ನು ನೀವು ಅನುಸರಿಸಿದರೆ ಶ್ರೀಮಾತೆ ನಿಮ್ಮ ಮುಂದೆ ಪ್ರಕಟಳಾಗಿದ್ದಾಗಲೂ ಕೂಡ ಅವಳನ್ನು ಗುರುತಿಸಲಾರಿರಿ, ನಿಮ್ಮ ಆತ್ಮವನ್ನು ಅನುಸರಿಸಿರಿ, ಮನಸ್ಸನ್ನಲ್ಲ. ನಿಮ್ಮ ಆತ್ಮ ದೈವೀಸತ್ಯಕ್ಕೆ ಉತ್ತರ ನೀಡುತ್ತದೆ, ತೋರಿಕೆಗಳತ್ತ ಜಿಗಿದೇಳುವ ನಿಮ್ಮ ಮನಸ್ಸು ಅದನ್ನು ಮಾಡಲಾರದು. ದೈವೀ ಸಾಮರ್ಥ್ಯದಲ್ಲಿ ವಿಶ್ವಾಸವಿರಿಸಿರಿ, ಅದು ನಿಮ್ಮಲ್ಲಿರುವ ದೇವಸದೃಶ ಅಂಶಗಳನ್ನು ಮುಕ್ತಗೊಳಿಸುವುದು ಮತ್ತು ದೈವೀ ಪ್ರಕೃತಿಯ ಅಭಿವ್ಯಕ್ತಿಯಾಗುವಂತೆ ಎಲ್ಲದಕ್ಕೂ ಆಕಾರ ನೀಡುವುದು.

*



## ಅತಿಮಾನಸ ಬದಲಾವಣೆ

ಅತಿಮಾನಸ ಬದಲಾವಣೆ ನಿಯತಿ ನಿರ್ದಿಷ್ಟವಾದ ಒಂದು ವಿಷಯ, ಮತ್ತು ಪೃಥ್ವೀ ಪ್ರಜ್ಞೆಯ ಉತ್ಕ್ರಾಂತಿಯಲ್ಲಿ ಅನಿವಾರ್ಯವಾದದ್ದು, ಏಕೆಂದರೆ ಅದರ ಮೇಲ್ಮುಖ ಆರೋಹಣ ಕೊನೆಗೊಂಡಿಲ್ಲ ಮತ್ತು ಮನಸ್ಸು ಅದರ ಕೊನೆಯ ಶಿಖರವಲ್ಲ. ಆದರೆ ಬದಲಾವಣೆ ಬರಲು, ರೂಪ ತಾಳಲು ಮತ್ತು ತಾಳಿಕೊಳ್ಳಲು ಕೆಳಗಿನಿಂದ ಕರೆಕೊಡುವ ಆವಶ್ಯಕತೆ ಇದೆ, ದೈವೀಪ್ರಕಾಶ ಬಂದಾಗ ಅದನ್ನು ಗುರುತಿಸುವ ಹಾಗೂ ನಿರಾಕರಿಸದಿರುವ ಸಂಕಲ್ಪ ಆ ಕರೆಯಲ್ಲಿರಬೇಕಾಗುತ್ತದೆ ಮತ್ತು ಮೇಲ್ಗಡೆಯಿಂದ ಪರಮೋಚ್ಚನು ಅನುಮತಿ ನೀಡುವ ಆವಶ್ಯಕತೆಯೂ ಇರುತ್ತದೆ. ಆ ಅನುಮತಿ ಹಾಗೂ ಆ ಕರೆ ಇವುಗಳ ನಡುವೆ ಪರಸ್ಪರ ಸಂಬಂಧವನ್ನು ಶ್ರೀಮಾತೆಯವರ ಸಾನ್ನಿಧ್ಯ ಹಾಗೂ ಸಾಮರ್ಥ್ಯಗಳು ಕಲ್ಪಿಸುತ್ತವೆ. ಯಾವುದೇ ಮಾನವ ಸಾಹಸ ಮತ್ತು ತಪಸ್ಸು ಇವುಗಳಿಂದ ಸಾಧ್ಯವಾಗದಿರುವುದನ್ನು ಶ್ರೀಮಾತೆಯ ಸಾಮರ್ಥ್ಯ ಕೈಕೊಳ್ಳಬಲ್ಲದು, ಆ ಸಾಮರ್ಥ್ಯ ಮುಚ್ಚಳವನ್ನು ತೆಗೆದು ಹಾಕಿ, ಆವರಣವನ್ನು ಹರಿದು, ಪಾತ್ರೆಗೆ ಆಕಾರ ನೀಡಿ ಮಬ್ಬು, ಮಿಥ್ಯೆ, ಮೃತ್ಯು ಮತ್ತು ವೇದನೆಗಳಿರುವ ಈ ಜಗತ್ತಿನಲ್ಲಿ ದೈವೀಸತ್ಯ, ಪ್ರಕಾಶ, ಜೀವನಗಳನ್ನು ಮತ್ತು ಅಮರನ ಆನಂದವನ್ನು ತರಬಲ್ಲದು.

**(CWSA 32/17-26)** – **ಶ್ರೀ ಅರವಿಂದರು**

*

## ಹನ್ನೆರಡು ಗುಣಲಕ್ಷಣಗಳು

**ಜನೆವರಿ 19, 1972**

ಹನ್ನೆರಡು ಗುಣಲಕ್ಷಣಗಳನ್ನು ನಿರೀಕ್ಷಿಸುತ್ತಿದ್ದೆ ಎಂದು ಕಳೆದ ಸಲ ನಾನು ಹೇಳಿದ್ದೆ. (ಶ್ರೀಮಾತೆಯವರು ಒಂದು ಕಾಗದವನ್ನು ಕೈಗೆತ್ತಿಕೊಳ್ಳುತ್ತಾರೆ) ಇಲ್ಲಿ ಅವುಗಳಿವೆ. ಯಾರೋ ಒಬ್ಬರು ಇದನ್ನು ಹುಡುಕಿಕೊಟ್ಟರು:

| | | | |
|---|---|---|---|
| ನಿಷ್ಕಾಪಟ್ಯ | ವಿನಮ್ರತೆ | ಕೃತಜ್ಞತೆ | ಪಟ್ಟುಹಿಡಿಯುವಿಕೆ |
| ಅಭೀಪ್ಸೆ | ಸ್ವೀಕೃತಿ | ಪ್ರಗತಿ | ಧೈರ್ಯ |
| ಒಳ್ಳೆಯತನ | ಔದಾರ್ಯ | ಸಮಚಿತ್ತತೆ | ಶಾಂತಿ |

ಮೊದಲಿನ ಎಂಟು ಗುಣಲಕ್ಷಣಗಳು ಭಗವಂತನಿಗೆ ಸಂಬಂಧಿಸಿವೆ ಮತ್ತು ಕೊನೆಯ ನಾಲ್ಕು ಮನುಕುಲಕ್ಕೆ ಸಂಬಂಧಿಸಿವೆ.

ಹಾಗೆಯೇ ಶ್ರೀ ಅರವಿಂದರು ರಚಿಸಿದ ಮೂಲಪಾಠವೊಂದು ದೊರಕಿತು (ವರ್ಣರಂಜಿತ* ಹನ್ನೆರಡು ಪಕಳೆಗಳ ರೇಖಾನಕ್ಷೆ (chart)).

ಕೇಂದ್ರ ಮತ್ತು ನಾಲ್ಕು ಸಾಮರ್ಥ್ಯಗಳು ಬಿಳಿಯ ಬಣ್ಣದವು.

ಮೂರು ಗುಂಪುಗಳಲ್ಲಿರುವ ಹನ್ನೆರಡು ಪಕಳೆಗಳೆಲ್ಲವೂ ಭಿನ್ನ ಬಣ್ಣದವು.

ಮೇಲ್ಗಡೆಗಿರುವ ಗುಂಪು ಕೆಂಪು ಬಣ್ಣದ್ದು, ಕಿತ್ತಳೆ ಬಣ್ಣದಿಂದ ಹಳದಿ ಬಣ್ಣದತ್ತ ಸಾಗಿ ಹೋಗುವಂತಹದು.

ಮುಂದಿನ ಗುಂಪು ಹಳದಿ ಬಣ್ಣದ್ದು, ಹಸಿರು ಬಣ್ಣದ ಮೂಲಕ ನೀಲಿ ಬಣ್ಣದತ್ತ ಸಾಗಿ ಹೋಗುವಂತಹದು.

ಮೂರನೆಯ ಗುಂಪು ನೀಲಿ ಬಣ್ಣದ್ದು, ನೇರಳೆ ಬಣ್ಣದ ಮೂಲಕ ಕೆಂಪು ಬಣ್ಣದತ್ತ ಸಾಗಿ ಹೋಗುವಂತಹದು.

ಬಿಳಿ ಬಣ್ಣ ಅನುಕೂಲವಾದದ್ದೆನಿಸದಿದ್ದರೆ ಕೇಂದ್ರ ಬಂಗಾರದ ಪುಡಿಯ ಬಣ್ಣದ್ದಾಗಿರಬಹುದು.

(ಶ್ರೀ ಅರವಿಂದರು, ಮಾರ್ಚ 20, 1934)

(ಶ್ರೀಮಾತೆಯವರ Agenda ದಿಂದ) **– ಶ್ರೀಮಾತೆ**

*

---

* ಓದುಗರಿಗೆ ತಿಳಿದುಕೊಳ್ಳಲು ಸ್ವಾರಸ್ಯಕರವೆನಿಸಬಹುದಾದ ವಿಷಯವನ್ನು ಶ್ರೀ ಅರವಿಂದರು ಹೇಳಿದ್ದಾರೆ; ಅವರ ಪ್ರಕಾರ ಈ ಬಣ್ಣಗಳಿಗೆ ಕೆಳಗೆ ಹೇಳಿದ ಪ್ರಾಮುಖ್ಯತೆಗಳಿವೆ, ಆದಾಗ್ಯೂ "ಕ್ಷೇತ್ರದೊಂದಿಗೆ ಸಂಯೋಜನೆಗಳು, ಬಣ್ಣದ ಗುಣಲಕ್ಷಣಗಳು, ಛಾಯೆಗಳು, ಶಕ್ತಿಯ ಲೀಲೆಗಳು" ಇವುಗಳ ನಿಜವಾದ ಅರ್ಥದಲ್ಲಿ ವ್ಯತ್ಯಾಸವಿರಬಹುದು: ಕೆಂಪು = ಭೌತಿಕ, ಕಿತ್ತಳೆ = ಭೌತಿಕದಲ್ಲಿ ಅತಿಮಾನಸ, ಹಳದಿ = ಯೋಚಿಸುವ ಮನಸ್ಸು, ಹಸಿರು = ಜೀವನ, ನೀಲಿ = ಉಚ್ಚತರ ಮನಸ್ಸು, ನೇರಳೆ = ದೈವೀ ಕರುಣೆ ಮತ್ತು ಕೃಪೆ, ಬಂಗಾರ = ದೈವೀಸತ್ಯ, ಬಿಳಿ = ಶ್ರೀಮಾತೆಯವರ ಪ್ರಕಾಶ ಇಲ್ಲವೆ ದೈವೀಪ್ರಜ್ಞೆ.



## ನಿಷ್ಕಾಪಟ್ಯ (Sincerity)

ಮೊದಲನೆಯದಾಗಿ ಮನುಷ್ಯ ತನ್ನನ್ನು ತಾನೇ ವಂಚಿಸಿಕೊಳ್ಳಬಾರದು. ಭಗವಂತನನ್ನು ವಂಚಿಸಲು ಸಾಧ್ಯವಿಲ್ಲವೆಂಬುದನ್ನು ಮನುಷ್ಯ ಅರಿತಿರುತ್ತಾನೆ. ಅಸುರರಲ್ಲಿ ಅತ್ಯಂತ ಚತುರನಾದವನೂ ಕೂಡ ಭಗವಂತನನ್ನು ವಂಚಿಸಲಾರನು. ಮನುಷ್ಯ ಅದನ್ನು ತಿಳಿದುಕೊಂಡಿದ್ದಾಗ್ಯೂ ತನ್ನ ಜೀವನದಲ್ಲಿ ಬಹಳಷ್ಟು ಸಲ ದಿನದ ಸಮಯದಲ್ಲಿ, ತನಗರಿವಿಲ್ಲದೆಯೆ, ಸ್ವಯಂಪ್ರೇರಿತವಾಗಿ, ಸ್ವಯಂಚಾಲಿತ–ವಾಗಿ ತನ್ನನ್ನು ವಂಚಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ತಾನು ಕೈಕೊಳ್ಳುವುದಕ್ಕೆಲ್ಲ, ಮಾತನಾಡುವುದಕ್ಕೆಲ್ಲ, ತನ್ನ ಎಲ್ಲ ಕ್ರಿಯೆಗಳಿಗೆ ಅನುಕೂಲಕರ ವಿವರಣೆಯನ್ನು ಕೊಟ್ಟುಕೊಳ್ಳುತ್ತಾನೆ. ಮೊದಲು ಸಂಭವಿಸುವುದು ಅದು. "ಅದು ಇನ್ನೊಬ್ಬನ ತಪ್ಪು" ಎಂದು ಹೇಳುತ್ತ ಜಗಳ ಕಾದುವಂತಹ ಸ್ಪಷ್ಟ ವಿಷಯಗಳನ್ನು ಕುರಿತು ನಾನು ಹೇಳುತ್ತಿಲ್ಲ. ದೈನಂದಿನ ಜೀವನದಲ್ಲಿಯ ಚಿಕ್ಕ ವಿಷಯಗಳನ್ನು ಕುರಿತು ಹೇಳುತ್ತಿದ್ದೇನೆ.

ಬಾಗಿಲನ್ನು ಎಡವಿ ಅದಕ್ಕೆ ಜೋರಾಗಿ ಒದೆ ಕೊಟ್ಟ ಬಾಲಕನ ಪರಿಚಯ ನನಗಿದೆ. ವಿಷಯ ಯಾವಾಗಲೂ ಅದೇ. ಯಾವಾಗಲೂ ತಪ್ಪು ಇನ್ನೊಬ್ಬನದು, ಆ ಇನ್ನೊಬ್ಬ ತಪ್ಪು ಮಾಡುತ್ತಾನೆ. ಮಗುವಿನ ವಯಸ್ಸಿನ ಹಂತ ದಾಟಿ ಹೋದ ನಂತರವೂ, ತರ್ಕಮಾಡುವ ಶಕ್ತಿ ಬಂದ ನಂತರವೂ ನೀವು ಅತ್ಯಂತ ಮೂರ್ಖತನದ ನೆಪಗಳನ್ನು ಕೊಡುತ್ತೀರಿ: "ಅವನು ಅದನ್ನು ಕೈಕೊಂಡಿರದಿದ್ದರೆ ನಾನು ಇದನ್ನು ಕೈಕೊಳ್ಳುತ್ತಿರಲಿಲ್ಲ." ಆದರೆ ಅದು ಕೇವಲ ತಿರುಗುಮುರುಗು ಆಗಿರಬೇಕು!

ಇದನ್ನೇ ನಾನು ನಿಷ್ಕಪಟರಾಗಿರುವುದು ಎಂದು ಹೇಳುತ್ತೇನೆ. ಯಾರೊಬ್ಬರ ಜೊತೆಗಿದ್ದಾಗ ನೀವು ನಿಷ್ಕಪಟರಾಗಿದ್ದರೆ, ತತ್ಕ್ಷಣ ಪ್ರತಿಕ್ರಿಯೆ ತೋರಿಸುವ ನಿಮ್ಮ ರೀತಿ ಸರಿಯಾದದ್ದನ್ನು ಕೈಕೊಂಡಿರುವುದಾಗಿರಬೇಕು, ಆ ಇನ್ನೊಬ್ಬ ಸರಿಯಾದುದನ್ನು ಮಾಡದೆ ಇರಬಹುದು. ಸಿಟ್ಟಿಗೇಳುವವನೊಬ್ಬನ ಅತ್ಯಂತ ಸಾಮಾನ್ಯ ಉದಾಹರಣೆಯನ್ನು ತೆಗೆದುಕೊಳ್ಳೋಣ, ನೋವನ್ನುಂಟು–ಮಾಡುವಂತಹ ಮಾತುಗಳನ್ನು ಆಡುವುದರ ಬದಲಾಗಿ ನೀವು ಸ್ಥಿರರಾಗಿ, ಅಚಂಚಲರಾಗಿ ಉಳಿದುಕೊಳ್ಳುತ್ತೀರಿ, ಸಿಟ್ಟಿನ ಸಂಸರ್ಗಕ್ಕೆ ಒಳಗಾಗುವುದಿಲ್ಲ. ಇದು ಸುಲಭವಾದದ್ದೇ ಎಂಬುದನ್ನು ತಿಳಿದುಕೊಳ್ಳಲು ನಿಮ್ಮನ್ನು ನೀವೇ ನೋಡಬೇಕು.

ಅದು ಬಹಳ ಪ್ರಾಥಮಿಕ ವಿಷಯ. ನೀವು ನಿಷ್ಕಪಟರಾಗಿದ್ದೀರಿ ಎಂಬುದನ್ನು ತಿಳಿದುಕೊಳ್ಳಲು ಬಹಳ ಚಿಕ್ಕ ಪ್ರಾರಂಭ. ಪ್ರತಿಯೊಂದು ಸಂಸರ್ಗಕ್ಕೆ ಒಳಗಾಗುವ ಜನರನ್ನು ಕುರಿತು ನಾನು ಹೇಳುತ್ತಿಲ್ಲ, ಒರಟು ರೀತಿಯ ಹಾಸ್ಯದಲ್ಲಿ ತೊಡಗಿಕೊಂಡವರನ್ನಾಗಲಿ, ಇತರರು ಮಾಡುವ ಮೂರ್ಖತನವನ್ನೇ ಮಾಡುವಂತಹ ಜನರನ್ನಾಗಲಿ ಕುರಿತು ಕೂಡ ನಾನು ಹೇಳುತ್ತಿಲ್ಲ.

ನಿಮ್ಮನ್ನು ನೀವು ತೀಕ್ಷ್ಣ ಕಣ್ಣುಗಳಿಂದ ನೋಡಿದಾಗ, ನಿಮ್ಮ ಸರ್ವಸಾಧಾರಣ ಮನೋಭಾವದಲ್ಲಿ ನಿಷ್ಕಪಟರಾಗಿರಲು ಪ್ರಯತ್ನಿಸುತ್ತಿದ್ದಾಗಲೂ ನೂರಾರು ಕಪಟಾಚರಣೆಗಳಲ್ಲಿ ತೊಡಗಿಕೊಂಡಿರುವುದನ್ನು ನೀವು ನೋಡುವಿರಿ ಎಂದು ನಾನು ಹೇಳುತ್ತೇನೆ. ಅದೆಷ್ಟು ಕಠಿಣವಾದದ್ದು ಎಂಬುದನ್ನು ನೋಡುವಿರಿ.

*

ಪರಿಪೂರ್ಣವಾಗಿ ನಿಷ್ಕಪಟರಾಗಿರಲು ನೀವು ಯಾವ ಆದ್ಯತೆಯನ್ನಾಗಲಿ, ಆಸೆಯನ್ನಾಗಲಿ, ಆಸಕ್ತಿಯನ್ನಾಗಲಿ, ಜುಗುಪ್ಸೆಯನ್ನಾಗಲಿ, ಆಕರ್ಷಣೆಯನ್ನಾಗಲಿ, ಇಷ್ಟವಿಲ್ಲದಿರುವಿಕೆಯನ್ನಾಗಲಿ, ಸಹಾನುಭೂತಿಯನ್ನಾಗಲಿ, ಸಹಜದ್ವೇಷವನ್ನಾಗಲಿ ಹೊಂದಿರದೆ ಇರುವುದು ಅತ್ಯಗತ್ಯವಾದದ್ದು. ವಿಷಯಗಳನ್ನು ಕುರಿತು ಮನುಷ್ಯ ಸಮಗ್ರ ದೃಷ್ಟಿ ಹೊಂದಿರಬೇಕು, ಆ ವಿಷಯಗಳಲ್ಲಿ ಪ್ರತಿಯೊಂದು ಅದರದರ ಸ್ಥಾನದಲ್ಲಿರಬೇಕು, ಮತ್ತು ಎಲ್ಲ ವಿಷಯಗಳನ್ನು ಕುರಿತು ಒಂದೇ ಬಗೆಯ ಮನೋಭಾವ ಎಂದರೆ ನಿಜವಾದ ದೃಷ್ಟಿಯನ್ನು ಹೊಂದಿರುವ ಮನೋಭಾವವಿರಬೇಕು.

*

ನಿಷ್ಕಾಪಟ್ಯದ ಅರ್ಥ ಸತ್ತೆಯ ಎಲ್ಲ ಚಲನೆಗಳನ್ನು ಅದಾಗಲೇ ಸಿದ್ಧಿಸಿಕೊಂಡ ಅತ್ಯುಚ್ಚ ಪ್ರಜ್ಞೆಯ ಹಾಗೂ ಸಾಧನೆಯ ಸ್ತರಕ್ಕೆ ಎತ್ತುವುದಾಗಿದೆ.

ನಿಷ್ಕಾಪಟ್ಯ, ಇಡೀ ಸತ್ತೆ ಹಾಗೂ ಅದರ ಭಾಗಗಳು ಭಗವಂತನ ಸಂಕಲ್ಪದ ಸುತ್ತ ಏಕಗೊಳ್ಳುವುದಕ್ಕೆ, ಸಾಮರಸ್ಯದಿಂದ ಇರುವುದಕ್ಕೆ ವಿಧೇಯತೆಯನ್ನು ಒತ್ತಾಯದಿಂದ ಬೇಡುತ್ತದೆ.

*

ನಿಷ್ಕಾಪಟ್ಯವಿದ್ದಾಗ ಸಹಾಯ, ಮಾರ್ಗದರ್ಶನ, ದೈವೀಕೃಪೆ ಇವು ನಿಮಗೆ



ಉತ್ತರ ನೀಡಲು ಯಾವಾಗಲೂ ಇರುವವೆಂಬುದನ್ನು ನೀವು ಕಂಡುಕೊಳ್ಳುತ್ತೀರಿ ಮತ್ತು ಬಹಳ ಕಾಲದವರೆಗೆ ತಪ್ಪು ಗ್ರಹಿಕೆಗೆ ಒಳಗಾಗಿರುವುದಿಲ್ಲ.

**(5/6, 8/398, 14/67, 3/192)** **– ಶ್ರೀಮಾತೆ**

*

## ವಿನಮ್ರತೆ

ಒಂದು ವಿಷಯ ಕುರಿತು ಯಾವಾಗಲೂ ಹೇಳಲಾಗಿದೆ, ಆದರೆ ಅದನ್ನು ಯಾವಾಗಲೂ ತಪ್ಪಾಗಿ ಅರ್ಥಮಾಡಿಕೊಳ್ಳಲಾಗಿದೆ, ಅದು ವಿನಮ್ರತೆಯ ಆವಶ್ಯಕತೆ. ಅದನ್ನು ತಪ್ಪಾದ ರೀತಿಯಲ್ಲಿ ಗ್ರಹಿಸಲಾಗಿದೆ, ಮತ್ತು ತಪ್ಪಾದ ರೀತಿಯಲ್ಲಿ ಉಪಯೋಗಿಸಲಾಗಿದೆ. ಸರಿಯಾದ ರೀತಿಯಲ್ಲಿ ವಿನಮ್ರರಾಗಿರಬಲ್ಲಿರಾದರೆ ಹಾಗಿದ್ದುಕೊಳ್ಳಿರಿ, ಅದಕ್ಕೂ ಹೆಚ್ಚಾಗಿ ತಪ್ಪಾದ ರೀತಿಯಲ್ಲಿ ವಿನಮ್ರರಾಗಿರುವುದು ಬೇಡ, ಏಕೆಂದರೆ ಅದು ನಿಮ್ಮನ್ನು ಎಲ್ಲಿಗೂ ಕರೆದೊಯ್ಯಲಾರದು. ಆದರೆ ಒಂದು ವಿಷಯವಿದೆ; ಜಂಬ ಎಂದು ಕರೆಯಲಾದ ಕಳೆ(weed)ಯನ್ನು ನಿಮ್ಮಿಂದ ಕಿತ್ತಿ ತೆಗೆಯಬಲ್ಲಿರಾದರೆ, ಆಗ ನಿಜವಾಗಿ ನೀವು ಏನನ್ನೋ ಕೈಕೊಂಡಿರುತ್ತೀರಿ. ಆದರೆ ಅದು ಎಷ್ಟು ಕಠಿಣವಾದದ್ದು ಎಂಬುದನ್ನು ನೀವು ತಿಳಿದಿರಬೇಕು! ಜಂಬದಿಂದ ತುಂಬಿಕೊಂಡ ಸ್ವ–ಸಂತೃಪ್ತಿಯಿಲ್ಲದೆ ಏನನ್ನೂ ಸರಿಯಾಗಿ ಕೈಕೊಳ್ಳಲಾರಿರಿ (ಅದರ ಬಗ್ಗೆ ನಿಮಗೆ ಅರಿವು ಕೂಡ ಇರದೆ ಹೋಗಬಹುದು), ಸುಂದರವಾದ ವಿಚಾರ ಮಾಡಲಾರಿರಿ, ಸರಿಯಾದ ಚಲನೆ ನಿಮ್ಮದಾಗಿರುವುದಿಲ್ಲ, ಚಿಕ್ಕ ಪ್ರಗತಿಯನ್ನೂ ಸಾಧಿಸಲಾರಿರಿ. ಮತ್ತು ಆಗ ಅದನ್ನು ಭಗ್ನಗೊಳಿಸಲು ಅದಕ್ಕೆ ಬಲವಾದ ಸುತ್ತಿಗೆ ಪೆಟ್ಟುಕೊಡುವ ನಿರ್ಬಂಧಕ್ಕೊಳಗಾಗುತ್ತೀರಿ. ಅದು ಭಗ್ನಗೊಂಡಾಗಲೂ ಕೂಡ ಅದರ ಚೂರುಗಳು ಉಳಿದುಕೊಳ್ಳುತ್ತವೆ ಮತ್ತು ಅವು ಚಿಗುರೊಡೆಯಲು ಪ್ರಾರಂಭಿಸುತ್ತವೆ. ಮನುಷ್ಯ ತನ್ನ ಇಡೀ ಜೀವನದ ಕಾಲದಲ್ಲಿ ಮತ್ತೆ, ಮತ್ತೆ ಚಿಗುರಿ ಮೇಲಕ್ಕೆದ್ದುಬರುವ ಈ ಕಳೆಯನ್ನು ಬೇರುಸಹಿತ ಕಿತ್ತುಹಾಕುವ ಕಾರ್ಯವನ್ನು ಎಂದೂ ಮರೆಯಬಾರದು. ಅದು ಎಷ್ಟೊಂದು ಗುಟ್ಟಾಗಿ ಬೆಳೆಯುತ್ತದೆಂದರೆ ನೀವು ಅದು ಹೋಗಿಬಿಟ್ಟಿತೆಂದು ನಂಬಿರುತ್ತೀರಿ ಮತ್ತು ಬಹಳ ವಿನೀತರಾಗಿ ಹೇಳುತ್ತೀರಿ: "ಅದನ್ನು ಕೈಕೊಂಡವನು ನಾನಲ್ಲ, ಅದು ಭಗವಂತನ ಕಾರ್ಯ. ಅವನಿಲ್ಲದೆ ನಾನೇನೂ ಅಲ್ಲ" ಮತ್ತು ಮುಂದಿನ ಕ್ಷಣ ಆ ರೀತಿ ಯೋಚಿಸಿದ ಸರಳ ಕಾರಣದಿಂದಾಗಿ ಬಹಳ ಸಂತೃಪ್ತಿಯಿಂದಿರುತ್ತೀರಿ.

**ಪ್ರಶ್ನೆ :** *ವಿನೀತರಾಗಿರುವುದಕ್ಕೆ ಸರಿಯಾದ ಮತ್ತು ಸರಿಯಾಗಿರದ ಮಾರ್ಗಗಳು ಯಾವವು?*

**ಶ್ರೀಮಾತೆ :** ಅದು ಬಹಳ ಸರಳವಾಗಿದೆ. ಜನರಿಗೆ "ವಿನೀತರಾಗಿರಿ" ಎಂದು ಹೇಳಿದಾಗ ಅವರು ಕೂಡಲೆ "ಇತರರ ಎದುರಿನಲ್ಲಿ ವಿನೀತರಾಗಿರುವುದು" ಎಂದು ಯೋಚಿಸುತ್ತಾರೆ ಮತ್ತು ಆ ಬಗೆಯ ವಿನಮ್ರತೆ ತಪ್ಪಾದದ್ದು. ನಿಜವಾದ ವಿನಮ್ರತೆ ಭಗವಂತನ ಎದುರಿನಲ್ಲಿ ವಿನೀತನಾಗಿರುವುದಾಗಿದೆ ಎಂದರೆ ಭಗವಂತನಿಲ್ಲದೆ ಮನುಷ್ಯ ಏನೂ ಅಲ್ಲ. ಅವನು ಏನನ್ನೂ ಮಾಡಲಾರ, ಏನನ್ನೂ ತಿಳಿದುಕೊಳ್ಳಲಾರ ಎಂಬ ಜೀವಂತ ಭಾವನೆಯನ್ನು ಹೊಂದಿರುವುದಾಗಿದೆ. ಮನುಷ್ಯನೊಬ್ಬ ಅಸಾಧಾರಣ ಬುದ್ಧಿಮತ್ತೆಯುಳ್ಳವನಾಗಿದ್ದರೂ, ಸಮರ್ಥ–ನಾಗಿದ್ದರೂ ಅದು ಭಗವಂತನ ಪ್ರಜ್ಞೆಯ ಮುಂದೆ ಏನೂ ಅಲ್ಲ, ಮತ್ತು ಮನುಷ್ಯ ಈ ಭಾವನೆಯನ್ನು ಯಾವಾಗಲೂ ಹೊಂದಿರಬೇಕು, ಏಕೆಂದರೆ ಆಗ ಅವನು ಸ್ವೀಕೃತಿಯ ನಿಜವಾದ ಮನೋಭಾವ ಹೊಂದಿರುತ್ತಾನೆ. ವಿನೀತವಾದ ಸ್ವೀಕೃತಿ ತನ್ನ ವೈಯಕ್ತಿಕ ನಟನೆಗಳನ್ನು ಭಗವಂತನಿಗೆ ವಿರೋಧ ವ್ಯಕ್ತಪಡಿಸುವ ರೀತಿಯಲ್ಲಿ ಇರಿಸುವುದಿಲ್ಲ.

**ಪ್ರಶ್ನೆ :** *ಶ್ರೀಮಾತೆಯವರೆ, ನಾವು ಪ್ರಯತ್ನವೊಂದನ್ನು ಕೈಕೊಂಡಾಗ, ನಮ್ಮಲ್ಲಿರುವ ಏನೋ ಒಂದು ಬಹಳ ಸ್ವ–ಸಂತೃಪ್ತಿಯಲ್ಲಿರುತ್ತದೆ, ಜಂಬ ಕೊಚ್ಚಿಕೊಳ್ಳುತ್ತದೆ ಮತ್ತು ಈ ಪ್ರಯತ್ನದಿಂದ ಸಮಾಧಾನ ತಂದುಕೊಂಡಿರುತ್ತದೆ ಮತ್ತು ಅದು ಎಲ್ಲವನ್ನೂ ಹಾಳುಮಾಡುತ್ತದೆ, ಹಾಗಾಗಿ ಅದನ್ನು ತೊಡೆದು ಹಾಕುವುದು ಹೇಗೆ?*

**ಶ್ರೀಮಾತೆ :** ಅಹಾ, ಅದು ತಾನು ಕೈಕೊಳ್ಳುತ್ತಿರುವುದನ್ನು ನೋಡುತ್ತಿರುವುದಾಗಿದೆ. ಮನುಷ್ಯ ಏನೋ ಒಂದನ್ನು ಕೈಕೊಳ್ಳುತ್ತಿರುವಾಗ ಅದನ್ನು ಅವಲೋಕನಮಾಡುವ, ಒಬ್ಬರು ಅಲ್ಲಿರುತ್ತಾರೆ. ಈಗ ಅವನು ಕೆಲವೊಮ್ಮೆ ಬಹಳ ಗರ್ವಿಷ್ಠನಾಗಿರುತ್ತಾನೆ. ಸ್ಪಷ್ಟವಾಗಿ ಇದು ಪ್ರಯತ್ನದಿಂದ ಬಹಳಷ್ಟು ಬಲವನ್ನು ತೆಗೆದುಕೊಂಡು ಹೋಗುತ್ತದೆ. ಅದೇ ಇದು ಎಂದು ನನಗನಿಸುತ್ತದೆ. ಕಾರ್ಯ ಕೈಕೊಳ್ಳುತ್ತಿರುವಾಗ ತನ್ನನ್ನು ನೋಡುತ್ತಿರುವ, ತಾನು ಜೀವಿಸುತ್ತಿರುವುದನ್ನು ನೋಡುತ್ತಿರುವ ರೂಢಿ ಇದಾಗಿದೆ. ಮನುಷ್ಯ ತನ್ನನ್ನು ಅವಲೋಕನ ಮಾಡುತ್ತಿರುವುದು ಅವಶ್ಯವಾಗಿದೆ, ಆದರೆ, ಪರಿಪೂರ್ಣವಾಗಿ ನಿಷ್ಕಪಟನಾಗಿರುವುದು ಮತ್ತು ಸ್ವಯಂಪ್ರೇರಿತ–ನಾಗಿರುವುದು ಅದಕ್ಕಿಂತಲೂ ಹೆಚ್ಚು ಅವಶ್ಯವಾಗಿದೆ, ಮನುಷ್ಯ ತಾನು ಕೈಕೊಳ್ಳುತ್ತಿರುವುದರಲ್ಲಿ, ಕೆಲವೊಮ್ಮೆ ತನ್ನನ್ನು ಕಠೋರವಾಗಿ ತೀರ್ಮಾನಕ್ಕೊಳ–



ಪಡಿಸುವುದರಲ್ಲಿ ಯಾವಾಗಲೂ ಅವಲೋಕನ ಮಾಡುವುದಲ್ಲ. ಅದು ವಾಸ್ತವದಲ್ಲಿ ಅವನು ಸ್ವ–ಸಂತೃಪ್ತಿಯಿಂದ ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಂಡಷ್ಟೇ ಕೆಟ್ಟದಾಗಿರುತ್ತದೆ. ಮನುಷ್ಯ ಅಭೀಪ್ಸೆಪಡುವುದರಲ್ಲಿ ಎಷ್ಟೊಂದು ನಿಷ್ಕಪಟ–ನಾಗಿರಬೇಕೆಂದರೆ ತಾನು ಅಭೀಪ್ಸೆಪಡುತ್ತಿದ್ದೇನೆಂಬುದರ ಅರಿವು ಅವನಲ್ಲಿ ಉಳಿದುಕೊಳ್ಳಬಾರದು. ಅವನು ಅಭೀಪ್ಸೆಯೇ ಆಗಿಬಿಡಬೇಕು.

ಒಂದು ನಿಮಿಷ, ಈ ವಿಷಯವಿರುವ ಒಂದು ನಿಮಿಷ ಸಿದ್ಧಿಗಾಗಿ ಬೇಕಾಗುವ ಹಲವಾರು ವರ್ಷಗಳ ತಯಾರಿ ಮಾಡುತ್ತದೆ, ತನ್ನನ್ನು ಪರಿಗಣಿಸದೆ ಇರುವ, ತಾನು ಕೈಕೊಳ್ಳುತ್ತಿರುವುದನ್ನು ನೋಡುತ್ತಿರುವುದರ ಬಗ್ಗೆ ಅಹಂಕಾರ ರಹಿತನಾದ, ತಾನೇ ಸ್ವತಃ ಕ್ರಿಯೆಯೇ ಆಗಿಬಿಟ್ಟ, ಅಭೀಪ್ಸೆಯಲ್ಲಿ ಎಲ್ಲದರ ಮೇಲಿರುವ ವ್ಯಕ್ತಿಯಾದಾಗ ಅದು ನಿಜವಾಗಿ ಒಳ್ಳೆಯದಾಗಿರುತ್ತದೆ. ಇನ್ನು ಮುಂದೆ ಅಭೀಪ್ಸೆ ಪಡುವ ವ್ಯಕ್ತಿಯಿರದೆ, ಅದು ಪೂರ್ತಿ ಏಕಾಗ್ರಗೊಂಡು ಮೇಲ್ಗಡೆ ಜಿಗಿದು ಬರುವ ಅಭೀಪ್ಸೆಯಾದಾಗ, ನಿಜವಾಗಿ ಬಹಳ ದೂರ ಸಾಗಿ ಹೋಗುತ್ತದೆ. ಹಾಗಿರದೆ ಇದ್ದಾಗ ಅಲ್ಲಿ ಯಾವಾಗಲೂ ಚಿಕ್ಕ ಜಂಬ, ಚಿಕ್ಕ ಸ್ವ–ಸಂತೃಪ್ತಿ, ಹಾಗೆಯೇ ತನಗಾಗಿ ಸ್ವಲ್ಪ ಮರುಕ ಇವೆಲ್ಲ ಮಿಶ್ರಣಗೊಂಡಿರುತ್ತವೆ, ಅದು ಎಲ್ಲವನ್ನೂ ಹಾಳು ಮಾಡುತ್ತದೆ.

**(5/45–46, 6/402)** **– ಶ್ರೀಮಾತೆ**

*

## ಕೃತಜ್ಞತೆ

ಭಕ್ತಿಯೊಂದಿಗೆ ಸತತ ಜೊತೆಗೂಡಿರಬೇಕಾದ ಇನ್ನೊಂದು ಚಲನೆಯಿದೆ. ಭಗವಂತ ಅಸ್ತಿತ್ವದಲ್ಲಿದ್ದಾನೆ ಎಂಬ ಕೃತಜ್ಞತೆಯ ಭಾವನೆ, ಭಗವಂತ ಅಸ್ತಿತ್ವದಲ್ಲಿದ್ದಾನೆ ಎಂಬ ವಾಸ್ತವತೆ ನಿಮ್ಮನ್ನು ಘನತೆವೆತ್ತ ಸಂತೋಷದಿಂದ ತುಂಬಿಬಿಡುವ ಭಾವನೆ, ವಿಶ್ವದಲ್ಲಿ ಭಗವಂತನೆನಿಸಿಕೊಳ್ಳುವ ಏನೋ ಒಂದಿದೆ, ಅದು ನಮಗೆ ಕಂಡುಬರುವ ಅತಿ ಘೋರತೆ ಅಲ್ಲ, ಭಗವಂತನಿದ್ದಾನೆ, ಅವನು ಅಸ್ತಿತ್ವದಲ್ಲಿದ್ದಾನೆ. ಮತ್ತು ಕನಿಷ್ಠವಾದ ಒಂದು ವಿಷಯ ನಿಮ್ಮನ್ನು ನೇರವಾಗಿ ಇಲ್ಲವೆ ಅಪರೋಕ್ಷವಾಗಿ ಭಗವಂತನ ಅಸ್ತಿತ್ವದ ಘನತೆವೆತ್ತ ನೈಜತೆಯೊಂದಿಗೆ ಸಂಪರ್ಕದಲ್ಲಿರಿಸಿದ ಪ್ರತಿಯೊಂದು ಸಲ, ಹೃದಯ ಎಷ್ಟೊಂದು ಗಾಢವಾದ, ಅದ್ಭುತವಾದ ಸಂತೋಷದಿಂದ, ಕೃತಜ್ಞತೆಯಿಂದ ತುಂಬಿಕೊಳ್ಳುವುದೆಂದರೆ ಅದಕ್ಕೆ ಎಲ್ಲ ವಿಷಯಗಳಿಗಿರುವುದಕ್ಕಿಂತ ಹೆಚ್ಚು ದಿವ್ಯಾನಂದದ ಸ್ವಾದವಿರುತ್ತದೆ.

ಕೃತಜ್ಞತೆ ಕೊಡುವ ಸಂತೋಷಕ್ಕೆ ಸಮನಾದ ಬೇರೆ ಯಾವ ಸಂತೋಷವಿರುವುದಿಲ್ಲ. ಮನುಷ್ಯ ಹಕ್ಕಿ ಹಾಡುವುದನ್ನು ಕೇಳುತ್ತಾನೆ, ಸುಂದರ ಹೂವನ್ನು ನೋಡುತ್ತಾನೆ, ಚಿಕ್ಕ ಮಗುವೊಂದರತ್ತ ಗಮನ ಹರಿಸುತ್ತಾನೆ, ಔದಾರ್ಯದ ಕಾರ್ಯವೊಂದನ್ನು ನೋಡುತ್ತಾನೆ, ಸುಂದರ ವಾಕ್ಯವೊಂದನ್ನು ಓದುತ್ತಾನೆ, ಅಸ್ತವಾಗುತ್ತಿರುವ ಸೂರ್ಯನನ್ನು ನೋಡುತ್ತಾನೆ, ವಿಷಯ ಯಾವುದೇ ಇರಲಿ, ಈ ಬಗೆಯ ಭಾವನೆ ನಿಮ್ಮನ್ನಾವರಿಸಿಕೊಳ್ಳುತ್ತದೆ – ನಿಜವಾಗಿ ಎಷ್ಟೊಂದು ಆಳವಾದ, ಗಾಢವಾದ ಭಾವನೆ – ಅದೆಂದರೆ ಜಗತ್ತು ಭಗವಂತನನ್ನು ಪ್ರಕಟಿಸುತ್ತದೆ, ಜಗತ್ತಿನ ಹಿಂದೆ ದೈವಿಕವಾದ ಏನೋ ಒಂದಿದೆ ಎಂಬ ಭಾವನೆಯಾಗಿರುತ್ತದೆ.

*

ಅತಿ ಕಡಿಮೆ ಜನರು ಚರ್ಚಿಗೆ ಇಲ್ಲವೆ ದೇವಾಲಯಕ್ಕೆ ನಿಜವಾದ ಧಾರ್ಮಿಕ ಭಾವನೆಯಿಂದ ಹೋಗುತ್ತಾರೆ, ಎಂದರೆ ಭಗವಂತನಿಗೆ ಪ್ರಾರ್ಥನೆ ಮಾಡುವುದಕ್ಕಾಗಲಿ ಇಲ್ಲವೆ ಅವನಿಂದ ಏನನ್ನಾದರೂ ಬೇಡುವುದಕ್ಕಾಗಲಿ ಅಲ್ಲ, ಆದರೆ ತಮ್ಮನ್ನೇ ಅರ್ಪಿಸಲು, ಧನ್ಯವಾದ ಹೇಳಲು, ಅಭೀಪ್ಸೆಪಡಲು ಹೋಗುತ್ತಾರೆ. ಹತ್ತು ಲಕ್ಷ ಜನರಲ್ಲಿ ಅಂತಹರು ಒಬ್ಬರು ಕಂಡುಬರಬಹುದು.

*

ಪ್ರತಿಯೊಬ್ಬ ಮನುಷ್ಯನನ್ನು, ಅವನಲ್ಲಿ ಅಜ್ಞಾನ, ತಪ್ಪು ತಿಳಿವಳಿಕೆಗಳು ಅಹಂಕಾರ ಹಾಗೂ ಅದರ ಪ್ರತಿರೋಧಗಳು ಮತ್ತು ಬಂಡಾಯಗಳು ಇದ್ದಾಗಲೂ ಅತಿ ಸಮೀಪದ ಮಾರ್ಗದಿಂದ ಪರಮೋಚ್ಚ ಭಗವಂತ ಅವನ ದೈವೀ ಗುರಿಯತ್ತ ಕರೆದೊಯ್ಯುತ್ತಾನೆ. ಅದಕ್ಕಾಗಿ ಮನುಷ್ಯ ಕೃತಜ್ಞನಾಗಿರಬೇಕು, ಪರಮೋಚ್ಚನ ಈ ಅದ್ಭುತ ದೈವೀಕೃಪೆಯನ್ನು ಎಂದಿಗೂ ಮರೆಯಬಾರದು.

ಬೆಚ್ಚಗಿನ, ಮಾಧುರ್ಯದ ಹಾಗೂ ಪ್ರಕಾಶದ ಭಾವನೆ ತಂದುಕೊಡುವ ಕೃತಜ್ಞತೆಯ ಪರಿಶುದ್ಧ ಜ್ವಾಲೆ ಯಾವಾಗಲೂ ನಮ್ಮ ಹೃದಯದಲ್ಲಿ ಪ್ರಜ್ವಲಿಸಬೇಕು, ಅದು ಎಲ್ಲ ಅಹಂಮನ್ಯತೆಯನ್ನು, ಮಬ್ಬುತನವನ್ನು ಕರಗಿಸುವುದು, ಅದು ಸಾಧಕನನ್ನು ಅವನ ಗುರಿಯತ್ತ ಕರೆದೊಯ್ಯುವ ಪರಮೋಚ್ಚನ ದೈವೀಕೃಪೆಗಾಗಿ ಇರುವ ಕೃತಜ್ಞತೆಯ ಜ್ವಾಲೆ – ಮನುಷ್ಯ ಹೆಚ್ಚು ಹೆಚ್ಚಾಗಿ ಕೃತಜ್ಞನಾದಂತೆ.



ದೈವೀಕೃಪೆಯ ಈ ಕ್ರಿಯೆಯನ್ನು ಗುರುತಿಸಿದಂತೆ, ಅದಕ್ಕೆ ಕೃತಜ್ಞತಾಪೂರ್ಣ–ನಾದಂತೆ ಗುರಿಯೆಡೆಗಿನ ಆ ಮಾರ್ಗ ಕಿರಿದಾಗುತ್ತ ಹೋಗುವುದು.

*

ಎಲ್ಲ ಚಲನೆಗಳಲ್ಲಿ ಮಿಶ್ರಣಕ್ಕೊಳಗಾಗದ, ಅಹಂಕಾರದಿಂದ ಕಲಂಕಿತವಾಗದ ಸಂತೋಷವನ್ನು ತಂದುಕೊಡುವ ಚಲನೆ ಕೃತಜ್ಞತೆಯಾಗಿದೆ.

ಅದು ವಿಶೇಷವಾದ ಏನೋ ಒಂದು. ಅದು ಪ್ರೇಮವಲ್ಲ, ಅದು ತನ್ನನ್ನು ಕೊಟ್ಟುಕೊಳ್ಳುವುದಲ್ಲ. ಅದು ಅತಿ ಹೆಚ್ಚಿನ ಸಂತೋಷದಿಂದ ತುಂಬಿಕೊಂಡಿರುತ್ತದೆ.

ಅದು ವಿಶೇಷವಾದ ಕಂಪನ, ಅದಕ್ಕೆ ಹೊರತಾದ ಇನ್ನಾವುದೂ ಅದರಂತಿಲ್ಲ. ಅದು ನಿಮ್ಮನ್ನು ವಿಸ್ತರಿಸುತ್ತದೆ, ತುಂಬಿ ಬಿಡುತ್ತದೆ, ಅದು ಎಷ್ಟೊಂದು ಉತ್ಸಾಹದಿಂದ ಕೂಡಿರುತ್ತದೆ!

ಮಾನವ ಪ್ರಜ್ಞೆಯ ಅಳವಿನಲ್ಲಿರುವ ಎಲ್ಲ ಚಲನೆಗಳಲ್ಲಿ ಅದು ನಿಮ್ಮನ್ನು ಅಹಂಕಾರದಿಂದ ಅತ್ಯಂತ ಹೆಚ್ಚಿನ ರೀತಿಯಲ್ಲಿ ಹೊರಗೆಳೆಯುವ ಚಲನೆಯಾಗಿದೆ.

ಈ ಕಂಪನವನ್ನು ಅದರ ಪರಿಶುದ್ಧತೆಯಲ್ಲಿ ಪ್ರವೇಶಿಸಬಲ್ಲಿರಾದರೆ ಅದು ದೈವೀ ಪ್ರೇಮದ ಕಂಪನವಿದ್ದ ಹಾಗೆ ಇದೆ ಎಂಬುದನ್ನು ನೀವು ಕೂಡಲೆ ಮನಗಾಣುವಿರಿ, ಅದಕ್ಕೆ ದಿಶೆಯೆಂಬುದಿಲ್ಲ. ... ಕಟ್ಟಕಡೆಯದಾಗಿ ಕೃತಜ್ಞತೆ ಕೇವಲ ದೈವೀ ಪ್ರೇಮದ ಸಾರಭೂತ ಕಂಪನದ ಅತಿ ಕಡಿಮೆ ವರ್ಣದ ಛಾಯೆಯಾಗಿರುತ್ತದೆ.

**(8/40, 6/194–95; White rosese Message of 26–6–1964;**
**The Spriritual Significance of Flowers, Part 1, p. 122)** – **ಶ್ರೀಮಾತೆ**

*

## ಪಟ್ಟುಹಿಡಿಯುವಿಕೆ

ಪಟ್ಟು ಹಿಡಿಯುವಿಕೆ, ತಾಳ್ಮೆ ಮತ್ತು – ನಾನೇನೆಂದು ಹೇಳಲಿ – ನೀವು ಧೈರ್ಯಗುಂದದೆ, ದುಃಖಿತರಾಗದೆ ಇರುವುದಕ್ಕೆ ಮತ್ತು ಎಲ್ಲ ತೊಂದರೆಗಳನ್ನು ಮುಗುಳ್ನಗೆಯಿಂದ ಎದುರಿಸುವುದಕ್ಕೆ ಸಹಾಯ ನೀಡುವ ಒಂದು ಬಗೆಯ ಆಂತರಿಕ ಸುಪ್ರಸನ್ನತೆ ಅತ್ಯಂತ ಅವಶ್ಯವಾದ ಗುಣ. ಇದನ್ನು ಸರಿಯಾಗಿ

ಅಭಿವ್ಯಕ್ತಗೊಳಿಸುವ ಇಂಗ್ಲೀಷ ಶಬ್ದ "Cheerfulness" ಆಹ್ಲಾದಕತೆ. ಇದನ್ನು ನಿಮ್ಮೊಳಗೆ ಇರಿಸಿಕೊಳ್ಳಬಲ್ಲಿರಾದರೆ ಅದರ ಪ್ರಕಾಶದಲ್ಲಿ ಪ್ರಗತಿ ಹೊಂದುವುದಕ್ಕೆ ನಿಮ್ಮ ಮಾರ್ಗದಲ್ಲಿ ಅಡೆತಡೆ ಒಡ್ಡುವ ಆ ಕೆಟ್ಟ ಪ್ರಭಾವಗಳೊಂದಿಗೆ ನೀವು ಹೆಚ್ಚು ಒಳ್ಳೆಯ ರೀತಿಯಲ್ಲಿ ಹೋರಾಡಬಲ್ಲಿರಿ, ಪ್ರತಿರೋಧಿಸಬಲ್ಲಿರಿ.

*

ಮನುಷ್ಯ ತನ್ನ ನಿಶ್ಚಿತತೆಯನ್ನು ತನ್ನಲ್ಲೇ ಕಂಡುಕೊಳ್ಳಬೇಕು. ಏನೆಲ್ಲ ಇದ್ದಾಗ್ಯೂ ಅದನ್ನು ಕಾಪಾಡಿಕೊಂಡು ಹೋಗಬೇಕು, ಎಷ್ಟೇ ಬೆಲೆ ತೆತ್ತಾದರೂ ಕೊನೆಯವರೆಗೆ ತನ್ನ ಮಾರ್ಗದಲ್ಲಿ ಸಾಗಬೇಕು. ಅತ್ಯಂತ ಹೆಚ್ಚಿನ ತಾಳ್ಮೆಯುಳ್ಳವರಿಗೆ ವಿಜಯವಿರುತ್ತದೆ.

ಎಲ್ಲ ಬಗೆಯ ವಿರೋಧಗಳಿದ್ದಾಗ್ಯೂ ಮನುಷ್ಯ ತನ್ನ ತಾಳ್ಮೆಯನ್ನು ಕಾಪಾಡಿಕೊಂಡು ಬರಲು ಆಧಾರ ಅಲುಗಾಡದಂತಿರಬೇಕು, ಒಂದು ಆಧಾರ ಮಾತ್ರ ಅಲುಗಾಡದಂತಹದು, ಅದು ದೈವೀ ನೈಜತೆಯ, ಪರಮೋಚ್ಚ ದೈವೀಸತ್ಯದ ಆಧಾರ.

ಇನ್ನೊಂದಕ್ಕಾಗಿ ನೋಡುವುದು ನಿರುಪಯುಕ್ತವಾದದ್ದು. ಎಂದೂ ವಿಫಲವಾಗದ ಆಧಾರ ಇದೊಂದೇ.

*

ತಾಳ್ಮೆಯ ಒಂದು ರೂಪ ವಚನನಿಷ್ಠೆ, ಮನುಷ್ಯ ತನ್ನ ನಿರ್ಧಾರಕ್ಕೆ ನಿಷ್ಠನಾಗಿರಬೇಕು – ನಿಷ್ಠಾವಂತನಾಗಿರುವುದು. ಮನುಷ್ಯ ನಿರ್ಧಾರವೊಂದನ್ನು ಮಾಡಿರುತ್ತಾನೆ, ಅವನು ತನ್ನ ನಿರ್ಧಾರಕ್ಕೆ ನಿಷ್ಠನಾಗಿರುತ್ತಾನೆ. ಇದು ತಾಳ್ಮೆ.

*

ತೊಂದರೆಗಳು ಹೆಚ್ಚಿನವಿವೆ ಎಂಬ ಕಾರಣದಿಂದ ಅವುಗಳನ್ನು ನೀವು ಧೈರ್ಯಗುಂದದೆ, ಕೈಬಿಟ್ಟುಬಿಡದೆ ಎದುರಿಸಲು ಶಕ್ತರಾಗದಿದ್ದರೆ, ನಿಮ್ಮಲ್ಲಿರುವ ದೋಷಗಳಿಂದಾಗಿ ನೀವು ಹೊಡೆತಗಳನ್ನು ಸ್ವೀಕರಿಸಬೇಕಾದಾಗ್ಯೂ, ಅವುಗಳನ್ನು ಸ್ವೀಕರಿಸಿ, ಜೇಬಿಗಿಳಿಸಿ ಸಾಗಿ ಹೋಗುವುದನ್ನು ಮುಂದುವರಿಸಲು ಅಸಮರ್ಥರಾದರೆ, ಸರಿ, ನಿಮಗೆ ಬಹಳ ದೂರ ಹೋಗಲಾಗುವುದಿಲ್ಲ. ನಿಮ್ಮ ಚಿಕ್ಕ ರೂಢಿಗತ ಜೀವನದ ಮೇಲಿನ ದೃಷ್ಟಿಯನ್ನು ಕಳೆದುಕೊಂಡ ಮೊದಲ ತಿರುವಿನಲ್ಲಿ ನೀವು ನಿರಾಶೆಯಲ್ಲಿ ಬಿದ್ದುಬಿಡುತ್ತೀರಿ, ಆಟವನ್ನು ಬಿಟ್ಟುಕೊಡುತ್ತೀರಿ.



ಇದಕ್ಕಿರುವ ಅತ್ಯಂತ ಪ್ರಾಪಂಚಿಕ ರೂಪ ಪಟ್ಟು ಹಿಡಿಯುವುದಾಗಿದೆ. ಒಂದೇ ಕಾರ್ಯವನ್ನು ಸಾವಿರ ಸಲ ಮಾಡಬೇಕಾಗಿದ್ದಾಗ, ಅದನ್ನು ಮತ್ತೆ ಕೈಕೊಳ್ಳುವೆ ಎಂದು ನೀವು ನಿರ್ಧರಿಸಿರದಿದ್ದರೆ... ಜನರು ನಿರಾಶೆಯಿಂದ ನನ್ನೆಡೆಗೆ ಬಂದು ಹೇಳುತ್ತಾರೆ: "ಅದು ಮುಗಿದು ಹೋಯಿತು ಎಂದು ತಿಳಿದಿದ್ದೆ ಮತ್ತು ಈಗ ಅದನ್ನು ಮತ್ತೆ ಪ್ರಾರಂಭಿಸಬೇಕಾಗಿದೆ." ಅವರಿಗೆ "ಆದರೆ ಅದು ಏನೂ ಅಲ್ಲ, ಬಹುಶಃ ನೀವು ಅದನ್ನು ನೂರು ಸಲ, ಎರಡುನೂರು ಸಲ, ಸಾವಿರ ಸಲ ಪುನಃ ಪ್ರಾರಂಭಿಸಬೇಕಾಗಬಹುದು. ನೀವು ಒಂದು ಹೆಜ್ಜೆ ಮುಂದಿಡುತ್ತೀರಿ, ಸುರಕ್ಷಿತರಾಗಿದ್ದೇವೆ ಎಂದು ಯೋಚಿಸುತ್ತೀರಿ, ಆದರೆ ಸ್ವಲ್ಪ ಮುಂದೆ ಹೋದಾಗ ಯಾವಾಗಲೂ ಅದೇ ತೊಂದರೆಯನ್ನು ಮರಳಿ ತರುವ ಏನೋ ಒಂದಿರುತ್ತದೆ. ನೀವು ಸಮಸ್ಯೆಯನ್ನು ಪರಿಹರಿಸಿದ್ದೇವೆ ಎಂದು ಯೋಚಿಸುತ್ತೀರಿ, ಅದನ್ನು ಇನ್ನೂ ಒಂದು ಸಲ ಪರಿಹರಿಸಬೇಕಾಗಿರುತ್ತದೆ, ಅದು ಸ್ವಲ್ಪ ಭಿನ್ನವಾಗಿ ಮತ್ತೆ ಹೊರಳಿ ಬರುತ್ತದೆ, ಆದರೆ ಸಮಸ್ಯೆ ಅದೇ ಆಗಿರುತ್ತದೆ. ಅದು ಹತ್ತು ಲಕ್ಷ ಸಲ ಮತ್ತೆ ಬಂದರೂ ಹತ್ತು ಲಕ್ಷ ಸಲ ಪರಿಹರಿಸುತ್ತೇನೆ, ಆದರೆ ಅದನ್ನು ಆದ್ಯಂತವಾಗಿ ಗಮನಿಸುತ್ತೇನೆ" ಎಂದು ನೀವು ನಿರ್ಧಾರ ಮಾಡದಿದ್ದರೆ ನೀವು ಯೋಗವನ್ನು ಕೈಕೊಳ್ಳಲು ಶಕ್ತರಾಗುವುದಿಲ್ಲ. ಇದು ಪರಿಪೂರ್ಣವಾಗಿ ಅತ್ಯಗತ್ಯವಾದದ್ದು.

ಪಟ್ಟುಹಿಡಿಯುವುದರ ಮೂಲಕ ಮನುಷ್ಯ ತೊಂದರೆಗಳ ಮೇಲೆ ಜಯಗಳಿಸುತ್ತಾನೆ, ಅವುಗಳಿಂದ ದೂರ ಓಡಿಹೋಗುವುದರಿಂದಲ್ಲ. ಪಟ್ಟುಹಿಡಿಯುವ ಮನುಷ್ಯ ನಿಶ್ಚಿತವಾಗಿ ಜಯ ಸಾಧಿಸುತ್ತಾನೆ. ಹೆಚ್ಚು ತಾಳ್ಮೆಯುಳ್ಳವರಿಗೆ ಜಯ ದೊರಕುವುದು. ಯಾವಾಗಲೂ ನಿಮಗೆ ಸಾಧ್ಯವಿದ್ದಷ್ಟು ಒಳ್ಳೆಯ ರೀತಿಯಲ್ಲಿ ಕಾರ್ಯಕೈಕೊಳ್ಳಿರಿ, ದೈವೀ ಪ್ರಭು ಪರಿಣಾಮಗಳನ್ನು ಕುರಿತು ಕಾಳಜಿ ವಹಿಸುತ್ತಾನೆ.

**(8/23, 9/255, 8/42, 41–42, 14/173)** **– ಶ್ರೀಮಾತೆ**

*

## ಅಭೀಪ್ಸೆ

ಅಭೀಪ್ಸೆ ಎಂದರೆ ಸತ್ತೆ ಉಚ್ಚತರ ವಿಷಯಗಳಿಗೆ ಕರೆಕೊಡುವುದಾಗಿದೆ. ಎಂದರೆ ಭಗವಂತನಿಗೆ, ಉಚ್ಚತರವಾದ ಇಲ್ಲವೆ ಭಗವಂತನ ದೈವೀಪ್ರಜ್ಞೆಗೆ ಸೇರಿರುವ ಎಲ್ಲದಕ್ಕೆ ಕರೆಕೊಡುವುದಾಗಿದೆ.

*

ಅಭೀಪ್ಸೆ ಆಸೆಯ ರೂಪದ್ದಾಗಿರಬಾರದು. ಆದರೆ ಅದು ಆಂತರಿಕ ಆತ್ಮದ ಆವಶ್ಯಕತೆಯಿರುವ ಭಾವನೆಯಾಗಿರಬೇಕು, ಭಗವಂತನೆಡೆಗೆ ಹೊರಳಲು ಮತ್ತು ಅವನನ್ನು ಅರಸಲು ಅಚಂಚಲವಾದ, ನಿಶ್ಚಿತಗೊಂಡ ಸಂಕಲ್ಪವಾಗಿರಬೇಕು.

*

ಆದರ್ಶ ಸಾಧಕ: "ಭಗವಂತನಿಗಾಗಿ ಇರುವ ನನ್ನ ಉತ್ಸಾಹ ನನ್ನನ್ನು ತಿಂದು ಹಾಕಿದೆ" ಎಂಬ ಬೈಬಲ್ಲಿನ ಪದಗುಚ್ಛವನ್ನು ಉಪಯೋಗಿಸಿ ಹೇಳಲು ಶಕ್ತನಾಗಬೇಕು. ದೈವೀ ಪ್ರಭುವಿಗಾಗಿ ಇರುವ ಈ ಉತ್ಸಾಹ – ದೈವೀ ಪರಿಣಾಮಗಳಿಗಾಗಿ ಇಡೀ ಸ್ವಭಾವದ ಉತ್ಸಾಹ, ಭಗವಂತನನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ಹೃದಯದ ವ್ಯಾಕುಲತಾ – ಅಹಂಕಾರವನ್ನು ನುಂಗಿಬಿಡುತ್ತದೆ ಹಾಗೂ ಪೂರ್ಣ ಹಾಗೂ ವಿಶಾಲವಾದ ಸ್ವೀಕೃತಿಗಾಗಿ ಅದರ ಕ್ಷುದ್ರ ಹಾಗೂ ಸಂಕುಚಿತ ಎರಕದ ಮಿತಿಗಳನ್ನು ಮುರಿದುಹಾಕುತ್ತದೆ, ಆ ಸ್ವೀಕೃತಿಯಿಂದಾಗಿ ಯಾವುದನ್ನು ಆ ಉತ್ಸಾಹ ಅರಸುತ್ತದೆಯೋ, ಯಾವುದು ವಿಶ್ವಂಭರವಾಗಿರುವುದರಿಂದ ಅದನ್ನು ಮೀರಿ ಹೋಗುತ್ತದೆಯೋ, ಯಾವುದು ವಿಶ್ವಾತೀತವಾಗಿರುವುದರಿಂದ ಅತ್ಯಂತ ಭವ್ಯ ಹಾಗೂ ಅತ್ಯುಚ್ಚ ವ್ಯಕ್ತಿವಿಶಿಷ್ಟತೆಯನ್ನು ಮೀರಿಸುವುದೋ ಅಂತಹದನ್ನು ಪೂರ್ತಿಯಾಗಿ, ವಿಶಾಲವಾಗಿ ಸ್ವೀಕರಿಸುವಂತಾಗುತ್ತದೆ.

*

ಆಧ್ಯಾತ್ಮಿಕ ಅಭೀಪ್ಸೆ ಮನುಷ್ಯನಲ್ಲಿ ಅಂತರ್ನಿಹಿತವಾಗಿರುತ್ತದೆ, ಏಕೆಂದರೆ ಅವನು ಪಶುವಿಗೆ ಅರಿತುಕೊಳ್ಳಲು ಸಾಧ್ಯವಿಲ್ಲದ ತನ್ನ ಅಪರಿಪೂರ್ಣತೆ ಹಾಗೂ ಮಿತಿಯ ಬಗ್ಗೆ ಅರಿವುಳ್ಳವನಾಗಿರುತ್ತಾನೆ ಮತ್ತು ತಾನು ಈಗಿರುವುದರಿಂದ ಆಚೆಗಿರುವ ಏನೋ ಒಂದನ್ನು ಸಿದ್ಧಿಸಿಕೊಳ್ಳಬೇಕೆಂಬ ಭಾವನೆ ತಂದುಕೊಳ್ಳುತ್ತಾನೆ. ...

ಅಭಿವೃದ್ಧಿ ಹೊಂದಿದ ಯೋಚಿಸುವ ಮನಸ್ಸು ಭೌತದ್ರವ್ಯದಲ್ಲಿ ಆಗಮಿಸುವವರೆಗೆ ಉತ್ಕ್ರಾಂತಿ ಸ್ವ–ಅರಿವಿರುವ ಅಭೀಪ್ಸೆ ಹಾಗೂ ಉದ್ದೇಶಗಳಿಂದಾಗಿರಲಿಲ್ಲ, ಜೀವಂತ ಸತ್ತೆಯ ಸಂಕಲ್ಪ ಇಲ್ಲವೆ ಅರಸುವಿಕೆಯಿಂದಾಗಿರಲಿಲ್ಲ, ಆದರೆ ಅದು ಅವಚೇತನದ ಇಲ್ಲವೆ ತಳಶಾಯಿ ಪ್ರಜ್ಞೆಯ ಮೂಲಕ ಪ್ರಕೃತಿಯ ಸ್ವಯಂಚಾಲಿತ ಕಾರ್ಯಾಚರಣೆಯಿಂದಾಗಿತ್ತು. ...



ಮನುಷ್ಯ ತನ್ನ ಪ್ರಜ್ಞೆಗಿಂತ ಉಚ್ಚತರ ಪ್ರಜ್ಞೆಯ ಹಂತ ಇರಬಲ್ಲದು ಎಂಬುದನ್ನು ನೋಡಿದ್ದಾನೆ, ಅವನ ಮನಸ್ಸಿನ ಹಾಗೂ ಪ್ರಾಣದ ಭಾಗಗಳಲ್ಲಿ ಉತ್ಕ್ರಾಂತಿಪರ ಪ್ರಚೋದನೆ ಇದೆ, ತನ್ನನ್ನು ಮೀರಿ ಹೋಗುವ ಅಭೀಪ್ಸೆ ಅವನೊಳಗೆ ವಿಮೋಚನೆಗೊಂಡಿದೆ, ಸ್ಫುಟವಾಗಿದೆ.

**– ಶ್ರೀ ಅರವಿಂದರು**

ಶಬ್ದಗಳಾಚೆ, ಯೋಚನೆಗಳ ಮೇಲ್ಗಡೆ ಅಭೀಪ್ಸೆಯ ಗಾಢವಾದ ಜ್ವಾಲೆ ಸತತ ಏಕಪ್ರಕಾರವಾಗಿ, ಪ್ರಕಾಶಮಾನವಾಗಿ ಪ್ರಜ್ವಲಿಸಬೇಕು.

**ಪ್ರಶ್ನೆ :** *ನಿಷ್ಕಾಪಟ್ಯವಿರುವ ಅಭೀಪ್ಸೆ ಎಂಬುದರ ನಿಖರವಾದ ಅರ್ಥವೇನು?*

**ಶ್ರೀಮಾತೆ :** ಯಾವುದೇ ಬಗೆಯ ಆಸಕ್ತಿಯ ಮತ್ತು ಅಹಂಕಾರದ ಲೆಕ್ಕಾಚಾರದಿಂದ ಮಿಶ್ರಣಗೊಂಡಿರದ ಅಭೀಪ್ಸೆಯಾಗಿರುತ್ತದೆ.

*

ನೀವು ಪ್ರಜ್ಞಾಪೂರ್ಣ ಅಭೀಪ್ಸೆಯ ಸ್ಥಿತಿಯಲ್ಲಿದ್ದರೆ ಮತ್ತು ಬಹಳ ನಿಷ್ಠಾವಂತರಾಗಿದ್ದರೆ, ನಿಮ್ಮ ಸುತ್ತಲಿರುವ ಪ್ರತಿಯೊಂದನ್ನೂ, ನೇರವಾಗಿ ಇಲ್ಲವೆ ಅಪರೋಕ್ಷವಾಗಿ ನಿಮಗೆ ಸಹಾಯ ನೀಡುವಂತೆ ವ್ಯವಸ್ಥೆ ಮಾಡಲಾಗಿರುತ್ತದೆ, ಎಂದರೆ ನೀವು ಪ್ರಗತಿ ಸಾಧಿಸುವಂತೆ ಮಾಡುವುದಕ್ಕಾಗಿ, ಹೊಸತಾಗಿರುವ ವಿಷಯವೊಂದರ ಸಂಪರ್ಕಕ್ಕೆ ಬರುವಂತೆ ಮಾಡುವುದಕ್ಕಾಗಿ, ಇಲ್ಲವೆ ನಿಮ್ಮ ಸ್ವಭಾವದಿಂದ ಮಾಯವಾಗಬೇಕಾದ ಏನೋ ಒಂದನ್ನು ತೆಗೆದುಹಾಕುವುದಕ್ಕಾಗಿ ಆ ವ್ಯವಸ್ಥೆಯಿರುತ್ತದೆ. ಇದು ಬಹಳ ಅಸಾಧಾರಣವಾದ ಏನೋ ಒಂದು. ನೀವು ನಿಜವಾಗಿ ಅಭೀಪ್ಸೆಯ ಗಾಢತೆಯಿರುವ ಸ್ಥಿತಿಯಲ್ಲಿದ್ದರೆ ಈ ಅಭೀಪ್ಸೆಯನ್ನು ಸಿದ್ಧಿಸಿಕೊಳ್ಳಲು ಸಹಾಯ ನೀಡದೆ ಇರುವ ಯಾವ ಪರಿಸ್ಥಿತಿಯೂ ಇರುವುದಿಲ್ಲ. ಪ್ರತಿಯೊಂದೂ ಬರುತ್ತದೆ, ನಿಮ್ಮ ಸುತ್ತ ಎಲ್ಲ ವಿಷಯಗಳನ್ನು ಸಂಘಟಿಸುವ ಪರಿಪೂರ್ಣ ಸರ್ವಜ್ಞ ಪ್ರಜ್ಞೆಯೊಂದಿದೆಯೇನೋ ಎನ್ನುವಂತೆ ಪ್ರತಿಯೊಂದೂ ಬರುತ್ತದೆ.

**(ನಾಗಿನ್ ದೋಶಿಗೆ ಮಾರ್ಗದರ್ಶನ ಪು. 1/106, 23/567, 20/51, 19/843; CWM:14/75, 72, 6/176)** **– ಶ್ರೀಮಾತೆ**

*

## ಸ್ವೀಕೃತಿ

ಸ್ವೀಕೃತಿ – ದೈವೀ ಶಕ್ತಿಯನ್ನು ಸ್ವೀಕರಿಸಲು ಮತ್ತು ಅದರ ಸಾನ್ನಿಧ್ಯ ಮತ್ತು ಶ್ರೀಮಾತೆಯವರ ಸಾನ್ನಿಧ್ಯ ಅದರಲ್ಲಿರುವುದನ್ನು ಭಾವನೆಗೆ ತಂದುಕೊಳ್ಳಲು ಮತ್ತು ಅದು ಮನುಷ್ಯನ ದೃಷ್ಟಿ, ಸಂಕಲ್ಪ ಹಾಗೂ ಕ್ರಿಯೆ ಇವುಗಳಿಗೆ ಮಾರ್ಗದರ್ಶನ ಮಾಡಲು ಅನುವು ಮಾಡಿಕೊಡುವುದು ಸ್ವೀಕೃತಿಯಾಗಿರುತ್ತದೆ.

*

ಈ ತೆರೆದಿರಿಸಿಕೊಳ್ಳುವಿಕೆಯು ಎಲ್ಲ ಸ್ವಭಾವವನ್ನು ಅದರ ಎಲ್ಲ ಹಂತಗಳಲ್ಲಿ ಹಾಗೂ ಅದರ ಭಾಗಗಳಲ್ಲಿ ವಿಸ್ತಾರವಾಗಿ ಚೆಲ್ಲಿಕೊಡುವುದಾಗಿದೆ, ಅದರಿಂದಾಗಿ ಅದು ಮಿತಿಗಳಿಲ್ಲದ ಶ್ರೇಷ್ಠತರ ದೈವೀಪ್ರಜ್ಞೆಯನ್ನು ಸ್ವೀಕರಿಸುವಂತಾಗುವುದು, ಆ ದೈವೀಪ್ರಜ್ಞೆ ಈಗಾಗಲೇ ಈ ಮರ್ತ್ಯ, ಅರ್ಧಪ್ರಜ್ಞೆಯುಳ್ಳ ಅಸ್ತಿತ್ವದ ಮೇಲ್ಗಡೆಗಿದೆ, ಅದರ ಹಿಂದಿದೆ ಮತ್ತು ಅದನ್ನು ಸುತ್ತುವರಿದಿದೆ.

**(23/695)** **– ಶ್ರೀ ಅರವಿಂದರು**

*

ನನ್ನ ಪ್ರೀತಿ ಯಾವಾಗಲೂ ನಿಮ್ಮ ಜೊತೆಗಿದೆ. ನಿಮಗೆ ಅದರ ಭಾವನೆ ಬರದೆ ಇದ್ದರೆ ಅದಕ್ಕೆ ಕಾರಣ ನೀವು ಅದನ್ನು ಸ್ವೀಕರಿಸಲು ಸಮರ್ಥರಾಗಿರುವುದಿಲ್ಲ. ನಿಮ್ಮ ಸ್ವೀಕೃತಿಯಲ್ಲಿ ಕೊರತೆಯಿದೆ, ನೀವು ಸ್ವೀಕೃತಿಯನ್ನು ಹೆಚ್ಚಿಸಬೇಕು. ಇದಕ್ಕಾಗಿ ನೀವು ನಿಮ್ಮನ್ನು ತೆರೆದಿರಿಸಬೇಕು. ಮನುಷ್ಯ ತನ್ನನ್ನು ಕೊಟ್ಟುಕೊಂಡಾಗ ಮಾತ್ರ ತನ್ನನ್ನು ತೆರೆದಿರಿಸಿರುತ್ತಾನೆ. ನಿಶ್ಚಿತವಾಗಿ ನೀವು ಹೆಚ್ಚುಕಡಿಮೆ ಪ್ರಜ್ಞಾಪೂರ್ವಕವಾಗಿ ಶಕ್ತಿಗಳನ್ನು ಹಾಗೂ ದೈವೀಪ್ರೇಮವನ್ನು ನಿಮ್ಮೆಡೆಗೆ ಎಳೆದುಕೊಳ್ಳಲು ಪ್ರಯತ್ನಿಸುತ್ತಿದ್ದೀರಿ. ಆ ವಿಧಾನ ತಪ್ಪಾದದ್ದು. ಲೆಕ್ಕಾಚಾರ ಮಾಡದೆ, ಪ್ರತಿಯಾಗಿ ಏನನ್ನೂ ನಿರೀಕ್ಷಿಸದೆ ನಿಮ್ಮನ್ನು ಕೊಟ್ಟುಕೊಂಡುಬಿಡಿರಿ, ಆಗ ಸ್ವೀಕರಿಸಲು ಕ್ಷಮತೆಯುಳ್ಳವರಾಗುವಿರಿ.

*

ಅಗ್ನಿ ಪ್ರಜ್ವಲಿಸುವಂತೆ ಮಾಡುವುದು ನಿಮ್ಮ ಕಾರ್ಯವಲ್ಲ. ನಾನು ಹೇಳಿದ ಹಾಗೆ, ಯಾವಾಗಲೂ ನಾನು ಅದು ಪ್ರಜ್ವಲಿಸುವಂತೆ ಮಾಡುತ್ತೇನೆ – ನೀವು



ಕೇವಲ ಅದನ್ನು ಸ್ವೀಕರಿಸಬೇಕು ಮತ್ತು ಸದ್ಭಾವನೆಯೊಂದಿಗೆ ಪೋಷಿಸಿಕೊಂಡು ಬರಬೇಕು.

*

**ಪ್ರಶ್ನೆ :** *ಶ್ರೀಮಾತೆಯವರೆ, ಸ್ವೀಕೃತಿ ಯಾವುದರ ಮೇಲೆ ಅವಲಂಬಿಸಿರುತ್ತದೆ?*

**ಶ್ರೀಮಾತೆ :** ಮೊಟ್ಟಮೊದಲಿಗೆ ಅದು ನಿಷ್ಕಾಪಟ್ಯದ ಮೇಲೆ ಅವಲಂಬಿಸಿರುತ್ತದೆ – ಮನುಷ್ಯ ನಿಜವಾಗಿ ಸ್ವೀಕರಿಸಲು ಬಯಸುತ್ತಾನೆಯೆ ಎಂಬುದರ ಮೇಲೆ – ಮತ್ತು ನಂತರ, ... ಹೌದು, ನಿಷ್ಕಾಪಟ್ಯ ಮತ್ತು ವಿನಮ್ರತೆ ಇವು ಪ್ರಧಾನ ಅಂಶಗಳಾಗಿರುತ್ತವೆ. ನೀವು ನಿಮ್ಮನ್ನು ಮುಚ್ಚಿಹಾಕಿಕೊಳ್ಳುವಂತೆ ಮಾಡಲು ಜಂಬಕ್ಕಿಂತ ಹೆಚ್ಚಿನ ವಿಷಯ ಬೇರೊಂದಿರುವುದಿಲ್ಲ, ನೀವು ಸ್ವ–ಸಂತೃಪ್ತಿ–ಯಿಂದಿದ್ದಾಗ, ನಿಮ್ಮಲ್ಲಿ ಯಾವುದೇ ಒಂದರ ಕೊರತೆಯಿದೆ, ನೀವು ತಪ್ಪುಗಳನ್ನು ಮಾಡುತ್ತೀರಿ, ಅಪೂರ್ಣರೂ, ಅಪರಿಪೂರ್ಣರೂ ಆಗಿದ್ದೀರಿ ... ಎಂಬುದನ್ನು ಒಪ್ಪಿಕೊಳ್ಳಲು ಬಯಸದಂತೆ ಮಾಡುವ ಜಂಬ ನಿಮ್ಮಲ್ಲಿದ್ದಾಗ ಸ್ವೀಕೃತಿ ಇರುವುದಿಲ್ಲ. ಸ್ವಭಾವದಲ್ಲಿ ಏನೋ ಒಂದಿರುತ್ತದೆ, ಅದು ಈ ರೀತಿಯಲ್ಲಿ ಬಿರುಸಾಗಿರುತ್ತದೆ, ಒಪ್ಪಿಕೊಳ್ಳಲು ಬಯಸುವುದಿಲ್ಲ, ಇದೇ ನೀವು ಸ್ವೀಕರಿಸುವುದನ್ನು ತಡೆಹಿಡಿಯುತ್ತದೆ. ಹಾಗಿದ್ದಾಗ್ಯೂ ನೀವು ಕೇವಲ ಅದಕ್ಕಾಗಿ ಪ್ರಯತ್ನ ಮಾಡಬೇಕು ಮತ್ತು ಅನುಭವ ಪಡೆಯಬೇಕು. ಸಂಕಲ್ಪಪೂರ್ವಕ ಪ್ರಯತ್ನ ಮಾಡುವುದರ ಮೂಲಕ ನಿಮ್ಮ ಸತ್ತೆಯ ಅತಿ ಚಿಕ್ಕ ಭಾಗ: "ಅಹಾ, ಸರಿ, ಹೌದು ನನ್ನದು ತಪ್ಪಾಗಿದೆ, ನಾನು ಹಾಗಿರಬಾರದು, ನಾನು ಅದನ್ನು ಮಾಡಬಾರದು, ಆ ರೀತಿಯ ಭಾವನೆ ಹೊಂದಿರಬಾರದು, ಹೌದು, ಅದು ತಪ್ಪಾದದ್ದು" ಎಂದು ಒಪ್ಪಿಕೊಂಡರೆ ಆ ಭಾಗ ಒಪ್ಪಿಕೊಳ್ಳುವಂತೆ ಮಾಡಲು ನೀವು ಶಕ್ತರಾದರೆ, ನಾನು ಇದೀಗ ಹೇಳಿದ ಹಾಗೆ, ಅದು ನಿಮಗೆ ಹೆಚ್ಚಿನ ನೋವು ಕೊಡುತ್ತ ಪ್ರಾರಂಭವಾಗುತ್ತದೆ, ಆದರೆ ಅದು ಒಪ್ಪಿಕೊಳ್ಳುವವರೆಗೆ ಅದನ್ನು ಗಟ್ಟಿಯಾಗಿ ಹಿಡಿದುಕೊಂಡರೆ, ಕೂಡಲೆ ಅದು ತೆರೆದುಕೊಳ್ಳುವುದು – ಅದು ತೆರೆದುಕೊಂಡಿರುತ್ತದೆ ಮತ್ತು ವಿಚಿತ್ರ ರೀತಿಯಲ್ಲಿ ಪ್ರಕಾಶದ ಪ್ರವಾಹ ಪ್ರವೇಶಿಸುತ್ತದೆ, ನಂತರ ನೀವು ಎಷ್ಟೊಂದು ಹರ್ಷಿತರಾಗುತ್ತೀರಿ ಎಂದರೆ ನೀವು "ಇಷ್ಟು ಕಾಲದವರೆಗೆ ಅದನ್ನು ಪ್ರತಿರೋಧಿಸಲು ನಾನದೆಷ್ಟು ಮೂರ್ಖನಾಗಿದ್ದೆ" ಎಂದು ನಿಮಗೆ ಕೇಳುತ್ತೀರಿ.

**(14/155, 17/127–28, 6/117)** **– ಶ್ರೀಮಾತೆ**

*

## ಪ್ರಗತಿ

... ಪ್ರಗತಿ ಮತ್ತು ಚಲಿಸದ ಸ್ಥಾನಮಾನ ಇರದೆ ಇರುವುದು ಮನುಷ್ಯ ಜೀವನದ ಅವಶ್ಯವಾದ ಹಾಗೂ ಅಪೇಕ್ಷಣೀಯವಾದ ನಿಯಮ – ಹೊಸ ವಿಷಯಗಳತ್ತ ಉಸಿರುಗಟ್ಟುವ ರೀತಿಯಲ್ಲಿ ರಭಸದಿಂದ ಓಡುವುದಲ್ಲ, ಆದರೆ ಹೆಚ್ಚು ಶ್ರೇಷ್ಠತರ ಆತ್ಮದ ಸತ್ಯದತ್ತ, ಕೇವಲ ವ್ಯಕ್ತಿಯ ಜೀವನದ ಯೋಚನೆಯಲ್ಲಿ ಅಷ್ಟೇ ಅಲ್ಲ, ಆದರೆ ಜನ ಸಮೂಹದ ಜೀವನದಲ್ಲಿಯ ಸಾಮೂಹಿಕ ಪ್ರಯತ್ನ–ದಲ್ಲಿಯ, ಹೊರಳುವಿಕೆಯಲ್ಲಿಯ, ಆದರ್ಶಗಳಲ್ಲಿಯ, ಮನೋಭಾವದಲ್ಲಿಯ, ಸಮಾಜದ ಅರ್ಥದಲ್ಲಿಯ ಹಾಗೂ ಪರಿಪೂರ್ಣತೆಯತ್ತ ಅದರ ಹೆಣಗುವಿಕೆಗಳಲ್ಲಿಯ ಯೋಚನೆ ಹಾಗೂ ಜೀವನದತ್ತ ಸತತ ಚಲಿಸುವುದಾಗಿದೆ.

*

ಆಂತರಿಕ ಪ್ರಗತಿಯ ಮೊದಲ ಷರತ್ತು ಸ್ವಭಾವದಲ್ಲಿಯ ಯಾವುದೇ ಭಾಗದಲ್ಲಿ ಯಾವುದು ತಪ್ಪಾದ ಚಲನೆಯಾಗಿದೆಯೋ, ಯಾವುದು ತಪ್ಪಾದ ಚಲನೆಯಾಗಿತ್ತೋ ಅದನ್ನು ಗುರುತಿಸುವುದಾಗಿದೆ – ತಪ್ಪಾದ ವಿಚಾರ, ತಪ್ಪಾದ ಭಾವನೆ, ತಪ್ಪಾದ ಮಾತು, ತಪ್ಪಾದ ಕ್ರಿಯೆ ಇಂತಹ ಚಲನೆಗಳನ್ನು ಗುರುತಿಸುವುದಾಗಿದೆ. – ತಪ್ಪಾದದ್ದು ಎಂಬುದರ ಅರ್ಥ ಸತ್ಯದಿಂದ, ಉಚ್ಚತರ ಪ್ರಜ್ಞೆ ಮತ್ತು ಉಚ್ಚತರ ಆತ್ಮಗಳಿಂದ, ದೈವೀ ಮಾರ್ಗದಿಂದ ಬೇರೆಡೆ ಹೊರಳುವುದಾಗಿದೆ. ಒಮ್ಮೆ ಅದನ್ನು ಗುರುತಿಸಿದ ನಂತರ, ಅದನ್ನು ಒಪ್ಪಿಕೊಳ್ಳಲಾಗುತ್ತದೆ, ಮುಚ್ಚಿಹಾಕಲಾಗುವುದಿಲ್ಲ ಇಲ್ಲವೆ ಕಾಪಾಡಿಕೊಂಡು ಬರಲಾಗುವುದಿಲ್ಲ – ದೈವೀ ಪ್ರಕಾಶ ಹಾಗೂ ದೈವೀಕೃಪೆ ಕೆಳಗಿಳಿದು ಬರಲೆಂದು ಮತ್ತು ತಪ್ಪಾದುದರ ಸ್ಥಾನದಲ್ಲಿ ನಿಜವಾದ ದೈವೀಪ್ರಜ್ಞೆಯ ಸರಿಯಾದ ಚಲನೆಯನ್ನಿರಿಸಲೆಂದು ಅದನ್ನು ಭಗವಂತನಿಗೆ ಅರ್ಪಿಸಲಾಗುತ್ತದೆ.

**(15/164, 23/662)** – **ಶ್ರೀ ಅರವಿಂದರು**

*

ಪ್ರಗತಿ ಸೃಷ್ಟಿಯಲ್ಲಿ ದೈವೀ ಪ್ರಭಾವವಿರುವುದರ ಕುರುಹಾಗಿದೆ.

*

ಪೃಥ್ವಿಯ ಮೇಲಿನ ಜೀವನದ ಉದ್ದೇಶ ಪ್ರಗತಿ ಸಾಧಿಸುವುದಾಗಿದೆ. ಪ್ರಗತಿ ಸಾಧಿಸುವುದನ್ನು ನಿಲ್ಲಿಸಿದರೆ ನೀವು ಸಾವನ್ನಪ್ಪುವಿರಿ. ಪ್ರಗತಿ ಸಾಧಿಸದೆ ನೀವು



ಕಳೆದ ಪ್ರತಿ ಕ್ಷಣ ಮೃತ್ಯುವಿನ ಹತ್ತಿರ ಒಂದು ಹೆಜ್ಜೆ ಇರಿಸುವಂತೆ ಮಾಡುತ್ತದೆ.

*

ನೀವು ತೃಪ್ತಿಯಿಂದಿರಲು ಪ್ರಾರಂಭಿಸಿದ ಕ್ಷಣದಿಂದ ಮತ್ತು ಅಭೀಪ್ಸೆ ಪಡುವುದನ್ನು ನಿಲ್ಲಿಸಿದಾಗ ಸಾವನ್ನಪ್ಪಲು ಪ್ರಾರಂಭಿಸುತ್ತೀರಿ. ಜೀವನ ಒಂದು ಚಲನೆಯಾಗಿದೆ, ಪ್ರಯತ್ನಪಡುವುದಾಗಿದೆ, ಹೆಜ್ಜೆ ಮುಂದಿರಿಸುತ್ತ ಹೋಗುವುದಾಗಿದೆ, ಭವಿಷ್ಯತ್ತಿನ ದರ್ಶನಗಳತ್ತ ಹಾಗೂ ಸಿದ್ಧಿಗಳತ್ತ ಏರಿ ಹೋಗುವುದಾಗಿದೆ. ವಿಶ್ರಾಂತಿ ಪಡೆಯಬೇಕೆಂಬ ಬಯಕೆಗಿಂತ ಹೆಚ್ಚು ಅಪಾಯಕಾರಿಯಾದದ್ದು ಬೇರೊಂದಿಲ್ಲ.

*

ಮನುಷ್ಯ ಕಲಿತುಕೊಳ್ಳಬೇಕಾದ ಏನೋ ಒಂದು ಹಾಗೂ ಸಾಧಿಸಬೇಕಾದ ಪ್ರಗತಿ ಸದಾ ಇದ್ದೇ ಇರುತ್ತವೆ ಮತ್ತು ಪ್ರತಿಯೊಂದು ಪರಿಸ್ಥಿತಿಯಲ್ಲಿ ಪಾಠ ಕಲಿತುಕೊಳ್ಳಬಹುದಾದ, ಪ್ರಗತಿ ಸಾಧಿಸಬಹುದಾದ ಸಂದರ್ಭವನ್ನು ನಾವು ಕಂಡುಕೊಳ್ಳಬಹುದು.

*

**ಪ್ರಗತಿ:** ಮಾರ್ಗದಲ್ಲಿ ಮುಂದುವರಿದು ಹೋಗಲು ಮನುಷ್ಯ ತಾನಾಗಿರುವುದನ್ನು, ತನ್ನಲ್ಲಿರುವುದನ್ನು ಬಿಟ್ಟುಕೊಡಲು ಸದಾ ತಯಾರಾಗಿರುವುದಾಗಿದೆ.

*

ನಿಜವಾದ ಪ್ರಗತಿ ಯಾವಾಗಲೂ ಭಗವಂತನ ಹತ್ತಿರ ಹೆಚ್ಚು ಹೆಚ್ಚಾಗಿ ಬರುವುದಾಗಿದೆ.

**(15/75,77)** – **ಶ್ರೀಮಾತೆ**

*

## ಧೈರ್ಯ

ಯಾವುದೇ ರೀತಿಯ ಭಯವಿಲ್ಲದೆ ಇರುವುದು ಧೈರ್ಯ.

*

ಭಯ ಒಂದು ಅಶುದ್ಧತೆ, ಅದು ಅಶುದ್ಧತೆಗಳಲ್ಲಿ ಅತ್ಯಂತ ಹೆಚ್ಚಿನ ಅಶುದ್ಧತೆ,

ಅದು ಹೆಚ್ಚಾಗಿ ದೈವ–ವಿರೋಧೀ ಶಕ್ತಿಗಳಿಂದ ನೇರವಾಗಿ ಬರುತ್ತದೆ, ಅಶುದ್ಧತೆಗಳು ಪೃಥ್ವಿಯ ಮೇಲಿನ ದೈವೀ ಕಾರ್ಯವನ್ನು ಹಾಳುಮಾಡಲು ಬಯಸುತ್ತವೆ. ಯೋಗವನ್ನು ನಿಜವಾಗಿ ಬಯಸುವವರು ಕೈಕೊಳ್ಳಬೇಕಾದ ಮೊದಲ ಕಾರ್ಯವೆಂದರೆ ತಮ್ಮೆಲ್ಲ ಪ್ರಜ್ಞೆಯಿಂದ, ಬಲದಿಂದ, ನಿಷ್ಕಾಪಟ್ಯದಿಂದ, ತಮಗೆ ಸಾಧ್ಯವಿರುವ ಎಲ್ಲ ತಾಳ್ಮೆಯಿಂದ, ಭಯದ ನೆರಳನ್ನೂ ಕೂಡ ತೆಗೆದುಹಾಕಬೇಕು. (ಆಧ್ಯಾತ್ಮಿಕ) ಮಾರ್ಗದ ಮೇಲೆ ನಡೆಯಲು ಮನುಷ್ಯ ನಿರ್ಭೀತನಾಗಿರಬೇಕು, ಆ ಕ್ಷುದ್ರ, ಚಿಕ್ಕ, ದುರ್ಬಲ, ತನ್ನ ಮೇಲೆ ತಾನು ತಿರುಗಿ ಬೀಳುವ ಕುಗ್ಗಿಕೊಳ್ಳುವಿಕೆಯಲ್ಲಿ ಎಂದಿಗೂ ಲೋಲನಾಗಬಾರದು.

ಅದಮ್ಯ ಧೈರ್ಯ, ಪರಿಪೂರ್ಣ ನಿಷ್ಕಾಪಟ್ಯ, ನಿಷ್ಕಪಟದ ಸ್ವ–ಅರ್ಪಣ ಇವುಗಳಿರುವಾಗ ಮನುಷ್ಯ ಲೆಕ್ಕಾಚಾರ ಮಾಡುವುದಿಲ್ಲ ಇಲ್ಲವೆ ಚೌಕಾಶಿ ಮಾಡುವುದಿಲ್ಲ, ಪ್ರತಿಯಾಗಿ ಏನಾದರೂ ದೊರಕಲಿ ಎಂಬ ವಿಚಾರದಿಂದ ಕೊಡುವುದಿಲ್ಲ, ರಕ್ಷಣೆ ಸಿಗುವುದೆಂಬ ವಿಚಾರದಿಂದ ವಿಶ್ವಾಸವನ್ನಿರಿಸುವುದಿಲ್ಲ, ಪ್ರಮಾಣಗಳನ್ನು ಬೇಡುವ ನಂಬಿಕೆಯನ್ನಿರಿಸಿಕೊಂಡಿರುವುದಿಲ್ಲ – ಮಾರ್ಗದ ಮೇಲೆ ನಡೆಯಲು ಇದು ಅತ್ಯಗತ್ಯವಾದದ್ದು, ಇದು ಮಾತ್ರ ನಿಮ್ಮನ್ನು ಎಲ್ಲ ಅಪಾಯಗಳಿಂದ ರಕ್ಷಣೆ ನೀಡಬಲ್ಲದು.

*

**ಸಮಗ್ರ ಧೈರ್ಯ:** ಪ್ರಾಂತ ಯಾವುದೇ ಆಗಿರಲಿ, ಅಪಾಯ ಯಾವುದೇ ಆಗಿರಲಿ, ಮನೋಭಾವ ಒಂದೇ ರೀತಿಯಲ್ಲಿ ಉಳಿಯುತ್ತದೆ – ಸ್ಥಿರತೆ ಮತ್ತು ದೃಢತೆಯಿಂದಿರುತ್ತದೆ.

*

ಧೈರ್ಯವುಳ್ಳ ಮನುಷ್ಯ ಇತರರಿಗೆ ಧೈರ್ಯ ಕೊಡಬಲ್ಲ. ಇದು ಒಂದು ಮೇಣಬತ್ತಿಯ ಜ್ವಾಲೆ ಇನ್ನೊಂದು ಪ್ರಜ್ವಲಿಸುವ ಹಾಗೆ ಮಾಡುವ ರೀತಿಯದಾಗಿರುತ್ತದೆ.

*

ಅತ್ಯಂತ ಉದಾರವಾದ ಧೈರ್ಯವೆಂದರೆ ಮನುಷ್ಯ ತನ್ನ ದೋಷಗಳನ್ನು ಗುರುತಿಸುವುದಾಗಿದೆ.

*

ಧೈರ್ಯ ಪರಿಪೂರ್ಣತೆಗಳಲ್ಲೊಂದು ಎಂದು ನಾನು ಹೇಳಿದ್ದು ನನ್ನ



ನೆನಪಿಗೆ ಬರುತ್ತಿದೆ. ಆದರೆ ಈ ಧೈರ್ಯದ ಅರ್ಥ ಪರಮೋಚ್ಚ ಸಾಹಸಕ್ಕಾಗಿ ಸ್ವಾದವಿರುವುದಾಗಿರುತ್ತದೆ. ಮತ್ತು ಪರಮೋಚ್ಚ ಸಾಹಸಕ್ಕಾಗಿರುವ ಈ ಸ್ವಾದ ನಿಮ್ಮನ್ನು ಸಂಪೂರ್ಣವಾಗಿ ಹಿಡಿದುಕೊಂಡುಬಿಡುತ್ತದೆ ಮತ್ತು ದೈವೀ ಶೋಧದ ಆ ಶ್ರೇಷ್ಠ ಸಾಹಸದಲ್ಲಿ, ದೇವನನ್ನು ಸಂಧಿಸುವ, ಇನ್ನೂ ಹೆಚ್ಚು ಶ್ರೇಷ್ಠತರವಾದ ದೈವೀ ಸಿದ್ಧಿಯನ್ನು ಪಡೆಯುವ ಪರಮೋಚ್ಚ ಸಾಹಸದಲ್ಲಿ ಯಾವುದೇ ಲೆಕ್ಕಾಚಾರವಿಲ್ಲದೆ, ಯಾವುದೇ ಕಾದಿರಿಸಿಕೊಳ್ಳುವಿಕೆಯಿಲ್ಲದೆ ಎಸೆದುಬಿಡುತ್ತದೆ; ಹಿಂತಿರುಗಿ ನೋಡದೆ, ಕ್ಷಣ ಮಾತ್ರಕ್ಕಾದರೂ "ಮುಂದೆ ಏನು ಸಂಭವಿಸಲಿದೆ" ಎಂದು ಕೇಳದೆ ನಿಮ್ಮನ್ನು ಆ ಸಾಹಸದಲ್ಲಿ ಚೆಲ್ಲಿಕೊಡುತ್ತೀರಿ. ಮುಂದೇನು ಸಂಭವಿಸಲಿದೆ ಎಂದು ನೀವು ಕೇಳಿದರೆ, ನೀವು ಕಾರ್ಯವನ್ನು ಪ್ರಾರಂಭಿಸುವುದೇ ಇಲ್ಲ, ನೀವು ಅಲ್ಲಿಯೇ ಯಾವಾಗಲೂ ಸಿಕ್ಕಿಹಾಕಿಕೊಂಡು ಉಳಿದುಕೊಳ್ಳುವಿರಿ, ಆ ಸ್ಥಾನದಲ್ಲಿ ಬೇರು ಬಿಟ್ಟಿರುತ್ತೀರಿ, ಏನನ್ನೋ, ಹೆಚ್ಚಾಗಿ ನಿಮ್ಮ ಸಮತೋಲವನ್ನು ಕಳೆದುಕೊಳ್ಳುವ ಭಯ ನಿಮ್ಮಲ್ಲಿರುತ್ತದೆ.

*

ಪ್ರಗತಿ ನಿಧಾನಗತಿಯದಾಗಬಹುದು, ಮತ್ತೆ ಮತ್ತೆ ಹಿಂದೆ ಬೀಳುವಿಕೆಗಳಿರ–ಬಹುದು, ಆದರೆ ಧೈರ್ಯದಿಂದ ಒಡಗೂಡಿದ ಸಂಕಲ್ಪವನ್ನು ಕಾಪಾಡಿಕೊಂಡು ಬಂದರೆ ಒಂದು ದಿನ ನಿಶ್ಚಿತವಾಗಿ ಜಯ ಸಾಧಿಸುತ್ತೀರಿ, ಎಲ್ಲ ತೊಂದರೆಗಳು ಕರಗಿ ಹೋಗುತ್ತವೆ ಮತ್ತು ಸತ್ಯ–ಪ್ರಜ್ಞೆಯ ತೇಜಸ್ಸಿನ ಮುಂದೆ ಮಾಯವಾಗುತ್ತವೆ.

**(10/284; 8/261–62; 14/181, 182, 181; 8/40; 12/7) – ಶ್ರೀಮಾತೆ**

*

## ಒಳ್ಳೆಯತನ

ಜನರು ಬಹಳಷ್ಟು ಸಲ "ಓಹ್, ಈಗ ನಾನು ಒಳ್ಳೆಯವನಾಗಲು ಪ್ರಯತ್ನಿಸುತ್ತಿದ್ದೇನೆ, ಪ್ರತಿಯೊಬ್ಬನೂ ಕೆಟ್ಟವನಾಗಿದ್ದಾನೆ ಎಂದು ನನಗೆ ತೋರಿಬರುತ್ತದೆ" ಎಂದು ಹೇಳುವುದನ್ನು ನಾನು ಕೇಳಿದ್ದೇನೆ. ಆದರೆ ಇದು ಆಸಕ್ತಿಯುಳ್ಳ ಉದ್ದೇಶವನ್ನಿಟ್ಟುಕೊಂಡು ಒಳ್ಳೆಯವನಾಗಬಾರದು, ಇತರರು ತನಗೆ ಒಳ್ಳೆಯವರಾಗಲಿ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಒಳ್ಳೆಯವನಾಗಬಾರದು ಎಂಬುದನ್ನು ನಿಮಗೆ ನಿಖರವಾಗಿ ಕಲಿಸಿಕೊಡುವುದಕ್ಕಾಗಿದೆ – ಒಳ್ಳೆಯವನಾಗಿರುವುದರ ಸಲುವಾಗಿಯೇ ಮನುಷ್ಯ ಒಳ್ಳೆಯವನಾಗಬೇಕು.

ಪಾತ ಯಾವಾಗಲೂ ಅದೇ ಆಗಿರುತ್ತದೆ: ಮನುಷ್ಯ ತನಗೆ ಸಾಧ್ಯವಿದ್ದಷ್ಟು ಸರಿಯಾಗಿ ಕಾರ್ಯ ಕೈಕೊಳ್ಳಬೇಕು, ಆದರೆ ಪರಿಣಾಮವೊಂದನ್ನು ನಿರೀಕ್ಷಿಸದೆ ಅದನ್ನು ಕೈಕೊಳ್ಳಬೇಕು, ಪರಿಣಾಮವೊಂದರ ಬಗ್ಗೆ ದೃಷ್ಟಿಕೋನವನ್ನಿಟ್ಟು–ಕೊಂಡಿರಬಾರದು. ಒಳ್ಳೆಯ ಕಾರ್ಯಕ್ಕಾಗಿ ಪ್ರತಿಫಲ ನಿರೀಕ್ಷಿಸುವ ಈ ಮನೋಭಾವ – ಒಳ್ಳೆಯ ಕಾರ್ಯ ಜೀವನವನ್ನು ಸುಲಭವಾದದ್ದನ್ನಾಗಿ ಮಾಡುತ್ತದೆ ಎಂಬ ಮನುಷ್ಯನ ಯೋಚನೆ – ಇದು ಎಲ್ಲ ಮೌಲ್ಯವನ್ನು ಒಳ್ಳೆಯ ಕಾರ್ಯದಿಂದ ದೂರ ತೆಗೆದುಕೊಂಡು ಹೋಗುತ್ತದೆ.

ಒಳ್ಳೆಯ ಕಾರ್ಯಕ್ಕೆ ಒಲವನ್ನಿಟ್ಟುಕೊಳ್ಳುವುದಕ್ಕಾಗಿ ನೀವು ಒಳ್ಳೆಯವ–ರಾಗಬೇಕು, ನ್ಯಾಯಪರರಾಗುವುದಕ್ಕಾಗಿ ನೀವು ನ್ಯಾಯವಂತರಾಗಬೇಕು, ಪರಿಶುದ್ಧತೆಯ ಬಗ್ಗೆ ಒಲವನ್ನು ಹೊಂದಿರುವುದಕ್ಕಾಗಿ ನೀವು ಪರಿಶುದ್ಧರಾಗಬೇಕು, ನಿಸ್ವಾರ್ಥಕ್ಕೆ ಒಲವನ್ನಿಟ್ಟುಕೊಳ್ಳುವುದಕ್ಕಾಗಿ ನಿಸ್ವಾರ್ಥರಾಗಬೇಕು, ಆಗ ನಿಶ್ಚಿತವಾಗಿ ನೀವು ಮಾರ್ಗದಲ್ಲಿ ಮುಂದುವರಿಯುವಿರಿ.

*

ಹೆಚ್ಚು ಕಠಿಣವಾದ ಈ ಪರಿವರ್ತನೆಯ ಯೋಗವನ್ನು ಕೈಕೊಳ್ಳುವುದಕ್ಕಾಗಿ ನಾನು ಪೃಥ್ವಿಯ ಮೇಲೆ ಬಂದಿದ್ದೇನೆ, ಬೇರಾವುದಕ್ಕೂ ಅಲ್ಲ ಎಂಬ ಭಾವನೆ ಮನುಷ್ಯನಿಗೆ ಬಂದರೆ, ತಾನು ಅದನ್ನಲ್ಲದೆ ಬೇರೇನನ್ನೂ ಮಾಡುವುದಿಲ್ಲ, ಅದೊಂದೇ ಮನುಷ್ಯನ ಅಸ್ತಿತ್ವಕ್ಕೆ ಕಾರಣ – ಅದಕ್ಕಾಗಿ ಬಹಳ ಶ್ರಮಪಡಬೇಕಾದರೆ, ವೇದನೆಗೊಳಗಾಗಬೇಕಾದರೆ, ಹೋರಾಡಬೇಕಾದರೆ ಅದೇನೂ ಅಷ್ಟು ಮಹತ್ವದ್ದಲ್ಲ – "ನನಗೆ ಇದು ಮಾತ್ರ ಬೇಕು, ಬೇರಾವುದೂ ಅಲ್ಲ" ಎಂಬ ಅನಿಸಿಕೆಯಿದ್ದರೆ ಆಗ ಅದು ಭಿನ್ನ ವಿಷಯವಾಗಿರುತ್ತದೆ. ಹಾಗಿಲ್ಲದೆ ಇದ್ದಾಗ ನಾನು ಹೇಳಬಹುದಾದುದು ಹೀಗಿದೆ: "ಸಂತೋಷದಿಂದಿರಿ, ಒಳ್ಳೆಯವರಾಗಿರಿ, ಅದನ್ನು ಮಾತ್ರ ನಿಮ್ಮಿಂದ ಕೇಳಲಾಗಿದೆ. ನೀವು ಜೀವಿಸುತ್ತ ಬಂದಿರುವ ಪರಿಸ್ಥಿತಿಗಳು ಅಸಾಧಾರಣವಾಗಿದ್ದವು ಎಂಬುದನ್ನು ತಿಳಿದುಕೊಳ್ಳಬೇಕು ಎಂಬ ಅರ್ಥದಲ್ಲಿ ಒಳ್ಳೆಯವರಾಗಿರಿ, ಸಾಮಾನ್ಯ ಜೀವನಕ್ಕಿಂತ ಹೆಚ್ಚು ನಿಜವಾದ, ಉದಾರವಾದ, ಉಚ್ಚತರ ಜೀವನ ಜೀವಿಸಿರಿ, ಅದರಿಂದಾಗಿ ಈ ಪ್ರಜ್ಞೆ, ಪ್ರಕಾಶ ಮತ್ತು ಒಳ್ಳೆಯತನಗಳು ಅಲ್ಪಮಟ್ಟಿಗಾದರೂ ತಮ್ಮನ್ನು ಜಗತ್ತಿನಲ್ಲಿ ಅಭಿವ್ಯಕ್ತಪಡಿಸಲು ಅನುವು ಮಾಡಿಕೊಡಬಹುದು. ಅದು ಬಹಳ ಒಳ್ಳೆಯದಾಗುವುದು."

*



ಒಂದು ಒಳ್ಳೆಯ ಕಾರ್ಯ, ಬಾಯಲ್ಲಿ ಸಿಹಿ ವಸ್ತುವನ್ನಿರಿಸಿಕೊಂಡದ್ದಕ್ಕಿಂತ ಹೃದಯಕ್ಕೆ ಹೆಚ್ಚು ಮಧುರವಾದದ್ದು.

ಕಾರ್ಯವೊಂದನ್ನು ಮಾಡದೆ ಕಳೆದ ದಿನ ಆತ್ಮರಹಿತವಾಗಿದ್ದ ದಿನ.

*

ಮನುಷ್ಯ ತನ್ನ ಹೃದಯದಲ್ಲಿ ಸದ್ಭಾವನೆ ಹಾಗೂ ಪ್ರೇಮ ಇವುಗಳನ್ನು ಸದಾ ಇಟ್ಟುಕೊಂಡಿರಬೇಕು, ಅವು ಪ್ರಶಾಂತತೆಯಿಂದ ಮತ್ತು ಸಮತೆಯಿಂದ ಎಲ್ಲರ ಮೇಲೆ ಸುರಿಯುವಂತಾಗಲಿ.

*

ಸ್ಪಷ್ಟ ನೋಟವಿರುವ, ಎಲ್ಲವನ್ನೂ ಒಳಗೊಳ್ಳುವ, ವೈಯಕ್ತಿಕ ಪ್ರತಿಕ್ರಿಯೆಯಿಂದ ಮುಕ್ತವಾದ, ದಣಿದುಕೊಳ್ಳದ ಪರೋಪಕಾರ ಭಗವಂತನಿಗೆ ಪ್ರೀತಿ ತೋರಿಸುವ ಮತ್ತು ಪೃಥ್ವಿಯ ಮೇಲೆ ಅವನ ಸೇವೆ ಮಾಡುವ ಅತ್ಯಂತ ಒಳ್ಳೆಯ ರೀತಿ.

**(3/264–65; 7/202–03, 15/242; 14/200)** **– ಶ್ರೀಮಾತೆ**

*

## ಔದಾರ್ಯ

"ಹೃದಯ ವೈಶಾಲ್ಯ ಮತ್ತು ಔದಾರ್ಯ ಇವು ಆತ್ಮದ ಆಕಾಶದ್ರವ್ಯದ ಅಂತರಿಕ್ಷ, ಅವುಗಳಿಲ್ಲದೆ ಇದ್ದಾಗ ಮನುಷ್ಯ ಕತ್ತಲು ಗವಿಯಲ್ಲಿ ಕೀಟವೊಂದನ್ನು ನೋಡುತ್ತಿರುತ್ತಾನೆ."

**ಚಿಂತನಗಳು ಹಾಗೂ ಸೂಕ್ತಿಗಳು – ಶ್ರೀ ಅರವಿಂದರು**

ಹೃದಯ ವೈಶಾಲ್ಯ ಎಲ್ಲ ವ್ಯಕ್ತಿಗತ ಲೆಕ್ಕಾಚಾರವನ್ನು ತಿರಸ್ಕರಿಸುವುದಾಗಿದೆ.

ಔದಾರ್ಯ ಇನ್ನಿತರರ ತೃಪ್ತಿಯಲ್ಲಿ ತನ್ನ ತೃಪ್ತಿಯನ್ನು ಕಂಡು–ಕೊಳ್ಳುವುದಾಗಿದೆ.

*

**ಪ್ರಶ್ನೆ :** *ಮಹಾಲಕ್ಷ್ಮಿಯ ಬಗ್ಗೆ ಶ್ರೀ ಅರವಿಂದರು ಹೇಳಿದ್ದು ಹೀಗಿದೆ: "ಬಡವಾದದ್ದೆಲ್ಲ ಅವಳ ಆಗಮನವನ್ನು ದೂರವಿರಿಸುತ್ತದೆ." (ಈ ಸಂಚಿಕೆಯ 17ನೆಯ ಪುಟವನ್ನು ನೋಡಿರಿ.)*

**ಶ್ರೀಮಾತೆ :** ಹೌದು, ಬಡವಾದದ್ದು, ಔದಾರ್ಯವಿಲ್ಲದೆ ಇದ್ದದ್ದು, ಉತ್ಸಾಹವಿಲ್ಲದೆ

ಇದ್ದದ್ದು, ವೈಶಾಲ್ಯವಿಲ್ಲದೆ ಇದ್ದದ್ದು, ಆಂತರಿಕ ಶ್ರೀಮಂತಿಕೆ ಇಲ್ಲದೆ ಇದ್ದದ್ದು, ಶುಷ್ಕವಾದದ್ದು, ಭಾವಶೂನ್ಯವಾದದ್ದು, ಸುತ್ತಿಕೊಂಡದ್ದು ಇಂತಹದೆಲ್ಲ ಮಹಾಲಕ್ಷ್ಮಿಯ ಆಗಮನವನ್ನು ದೂರವಿರಿಸುತ್ತದೆ. ಅದು ಧನದ ದೊಡ್ಡ ಮೊತ್ತವನ್ನು ಹೊಂದಿರುವ ಪ್ರಶ್ನೆಯಲ್ಲ. ಅತ್ಯಂತ ಶ್ರೀಮಂತನಾದ ಮನುಷ್ಯ ಮಹಾಲಕ್ಷ್ಮಿಯ ದೃಷ್ಟಿಕೋನದಲ್ಲಿ ಭಯಾನಕವೆನಿಸುವ ರೀತಿಯಲ್ಲಿ ಬಹಳ ಬಡವನಾಗಿರಬಹುದು. ಹೃದಯ ವೈಶಾಲ್ಯದಿಂದ ಕೂಡಿದ ಬಡವನಾದ ಮನುಷ್ಯ ಅವಳ ದೃಷ್ಟಿಕೋನದಲ್ಲಿ ಬಹಳ ಶ್ರೀಮಂತನಾಗಿರಬಹುದು.

ಒಳ್ಳೆಯ ಗುಣ, ಶಕ್ತಿ, ಬಲ, ಔದಾರ್ಯ ಇವುಗಳಿಲ್ಲದ ಮನುಷ್ಯ ಬಡವನಾಗಿರುತ್ತಾನೆ, ಅವನು ದುಃಖಿತನೂ, ಅಸಂತುಷ್ಟನೂ ಆಗಿರುತ್ತಾನೆ. ಅಲ್ಲದೆ ಮನುಷ್ಯನಲ್ಲಿ ಔದಾರ್ಯವಿಲ್ಲದಿದ್ದಾಗ ಮಾತ್ರ ಅವನು ಅಸಂತುಷ್ಟನಾಗಿರುತ್ತಾನೆ – ತನ್ನದನ್ನು ಲೆಕ್ಕಾಚಾರ ಮಾಡದೆ ಕೊಟ್ಟುಬಿಡುವ ಉದಾರ ಸ್ವಭಾವದ ಮನುಷ್ಯ ಎಂದಿಗೂ ಅಸಂತುಷ್ಟನಾಗಿರುವುದಿಲ್ಲ. ತಮ್ಮ ಮೇಲೆಯೇ ತಮ್ಮನ್ನು ಸುತ್ತಿಕೊಂಡಿರುವ, ವಸ್ತು–ವಿಷಯಗಳನ್ನು ಯಾವಾಗಲೂ ತಮ್ಮತ್ತ ಸೆಳೆದುಕೊಳ್ಳಲು ಬಯಸುವ, ವಸ್ತು–ವಿಷಯಗಳನ್ನು ಹಾಗೂ ಜಗತ್ತನ್ನು ತಮ್ಮ ಮೂಲಕವಷ್ಟೇ ನೋಡುವ ಜನರು ಅಸಂತುಷ್ಟರಾಗಿರುತ್ತಾರೆ. ಆದರೆ ಉದಾರ ಭಾವದಿಂದ, ಯಾವ ಲೆಕ್ಕಾಚಾರ ಮಾಡದೆ ತನ್ನನ್ನು ಕೊಟ್ಟುಕೊಳ್ಳಲು ಬಯಸುವ ಮನುಷ್ಯ ಎಂದೆಂದಿಗೂ ಅಸಂತುಷ್ಟನಾಗಿರುವುದಿಲ್ಲ, ತೆಗೆದುಕೊಳ್ಳಲು ಬಯಸುವವನು ಅಸಂತುಷ್ಟನಾಗಿರುತ್ತಾನೆ, ತನ್ನನ್ನು ಕೊಟ್ಟುಕೊಳ್ಳುವವನು ಎಂದಿಗೂ ಅಸಂತುಷ್ಟನಾಗಿರುವುದಿಲ್ಲ.

*

**ಪ್ರಶ್ನೆ :** *ಔದಾರ್ಯವೆಂದರೆ ಸತ್ಯ ವಿರೂಪಗೊಂಡ ಒಂದು ಸ್ಥಿತಿಯೆ?*

**ಶ್ರೀಮಾತೆ :** ಹೌದು, ಎಲ್ಲ ಮಾನವ ಗುಣಗಳು, ಅವುಗಳ ಹಿಂದಿರುವ ಸತ್ಯವೊಂದರ ವಿರೂಪಗೊಂಡ ಸ್ಥಿತಿಗಳಾಗಿರುತ್ತವೆ. ಒಳ್ಳೆಯ ಗುಣಗಳು, ದೋಷಗಳು ಎಂದು ನೀವು ಕರೆಯುವ ಎಲ್ಲವೂ, ಯಾವಾಗಲೂ, ಅವುಗಳ ಹಿಂದಿರುವ ಏನೋ ಒಂದರ ವಿರೂಪಗೊಂಡ ಸ್ಥಿತಿಗಳಾಗಿರುತ್ತವೆ, ಮತ್ತು ಅದು ಇದಾಗಲಿ, ಅದಾಗಲಿ ಆಗಿರದೆ ಮತ್ತೇನೋ ಆಗಿರುತ್ತದೆ. ಆದರೆ ಔದಾರ್ಯದ ಹಿಂದೆ ಇರುವ ಸತ್ಯ ಯಾವುದು ಎಂಬುದನ್ನು ನಾನು ಹೇಳುತ್ತೇನೆ: ಅದು ಶಕ್ತಿಗಳನ್ನು ಹರಡುವ ಚಲನೆಯಾಗಿರುತ್ತದೆ. ಆದರೆ ಈ ಶಕ್ತಿಗಳು ಹರಡಿಕೊಳ್ಳಲು ಮೊದಲು ಅವು ಒಟ್ಟುಗೂಡಬೇಕು. ಹಾಗಾಗಿ ಒಂದು ಬಗೆಯ ಲಯಬದ್ಧವಾದ, ಹಿಗ್ಗುವ ಹಾಗೂ ಕುಗ್ಗುವ ಚಲನೆಯಿರುತ್ತದೆ: ಶಕ್ತಿಗಳು ಒಟ್ಟುಗೂಡುತ್ತವೆ ನಂತರ ಹರಡಿಕೊಳ್ಳುತ್ತವೆ, ಅವು ಮತ್ತೆ ಒಟ್ಟುಗೂಡುತ್ತವೆ ಹಾಗೂ ಮತ್ತೆ ಹರಡಿಕೊಳ್ಳುತ್ತವೆ. ಆದರೆ ನೀವು ಯಾವಾಗಲೂ ಹರಡಲು ಬಯಸಿದರೆ ಕೆಲ ಸಮಯದ ನಂತರ ಹರಡಲು ನಿಮ್ಮಲ್ಲಿ ಏನೂ ಉಳಿದಿರುವುದಿಲ್ಲ. ಎಲ್ಲ ಶಕ್ತಿಗಳಿಗೂ ವಿಷಯ ಅದೇ ಆಗಿರುತ್ತದೆ.



*

ನಾನು ನೈತಿಕ ಔದಾರ್ಯ ಕುರಿತು ಹೇಳಲು ಬಯಸುತ್ತೇನೆ: ಉದಾಹರಣೆಗೆ ಜೊತೆಗಾರನೊಬ್ಬ ಯಶಸ್ಸು ಗಳಿಸಿದಾಗ ಸಂತೋಷದ ಭಾವನೆ ತಂದುಕೊಳ್ಳುವುದು, ಧೈರ್ಯದಿಂದ ಕೈಕೊಂಡ ಒಂದು ಕಾರ್ಯ, ನಿಸ್ವಾರ್ಥದ ಕಾರ್ಯ, ಉದಾತ್ತ ತ್ಯಾಗ ಇವುಗಳಲ್ಲಿ ನಿಮಗೆ ಸಂತೋಷ ತಂದುಕೊಡುವ ಸೌಂದರ್ಯವಿರುತ್ತದೆ. ಇತರರ ನಿಜವಾದ ಯೋಗ್ಯತೆಯನ್ನು ಮತ್ತು ಉತ್ಕೃಷ್ಟತೆಯನ್ನು ಗುರುತಿಸಲು ಶಕ್ತರಾಗಿರುವುದನ್ನು ನೈತಿಕ ಔದಾರ್ಯ ಒಳಗೊಳ್ಳುತ್ತದೆ ಎಂದು ಹೇಳಬಹುದು.

**(10/284, 4/404–05, 5/357, 4/30)** **– ಶ್ರೀಮಾತೆ**

*

## ಸಮಚಿತ್ತತೆ

ಸಮಚಿತ್ತತೆಯ ಅರ್ಥ ಮನಸ್ಸು ಮತ್ತು ಪ್ರಾಣಿಕ ಅಚಂಚಲ ಹಾಗೂ ಸ್ಥಿರಗೊಂಡ ಸ್ಥಿತಿಯಲ್ಲಿರುವುದಾಗಿದೆ, ಸಂಭವಿಸುವ ವಿಷಯಗಳನ್ನು ಕುರಿತು ಮತ್ತು ನಿಮ್ಮನ್ನು ಕುರಿತು ಹೇಳಲಾದ ಹಾಗೂ ಕೈಕೊಳ್ಳಲಾದ ವಿಷಯಗಳನ್ನು ಕುರಿತು ಅವುಗಳ ಸ್ಪರ್ಶಕ್ಕೆ ಒಳಗಾಗದೆ ಇರುವುದಾಗಿದೆ, ಕ್ಷೋಭೆಗೊಳ–ಗಾಗದಿರುವುದಾಗಿದೆ, ಆದರೆ ವೈಯಕ್ತಿಕ ಭಾವನೆಯಿಂದ ಸೃಷ್ಟಿಯಾದ ವಿಕಾರಗಳಿಂದ ಮುಕ್ತವಾಗಿ ಅವುಗಳತ್ತ ನೇರ ದೃಷ್ಟಿಯಿಂದ ನೋಡುವುದಾಗಿದೆ, ಅವುಗಳ ಹಿಂದಿರುವುದೇನು, ಅವು ಸಂಭವಿಸುವುದೇಕೆ, ಅವುಗಳಿಂದ ಕಲಿತುಕೊಳ್ಳಬೇಕಾದುದೇನು, ಮನುಷ್ಯನಲ್ಲಿರುವ ಯಾವುದರ ವಿರುದ್ಧ ಅವುಗಳನ್ನು ಚೆಲ್ಲಿಕೊಡಲಾಗಿದೆ ಮತ್ತು ಅವುಗಳಿಂದ ಯಾವ ಆಂತರಿಕ ಲಾಭ ಇಲ್ಲವೆ ಪ್ರಗತಿ ಸಾಧಿಸಬಹುದಾಗಿದೆ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡುವುದಾಗಿದೆ. ಅದರರ್ಥ ಕ್ರೋಧ ಮತ್ತು ಸೂಕ್ಷ್ಮ ಸಂವೇದನೆ, ಗರ್ವ ಹಾಗೂ ಆಸೆ, ಹಾಗೂ ಉಳಿದೆಲ್ಲ ಪ್ರಾಣಿಕ ಚಲನೆಗಳ ಮೇಲೆ ಸ್ವ–ಪ್ರಭುತ್ವ ಪಡೆಯುವುದಾಗಿದೆ,

ಭಾವನಾತ್ಮಕ ಸತ್ತೆಯ ಮೇಲೆ ಹಿಡಿತ ಸಾಧಿಸಲು ಹಾಗೂ ಆಂತರಿಕ ಶಾಂತಿಯನ್ನು ಕ್ಷೋಭೆಗೊಳಿಸಲು ಅವುಗಳಿಗೆ ಅನುವು ಮಾಡಿಕೊಡದೆ ಇರುವುದಾಗಿದೆ, ಈ ವಿಷಯಗಳ ಆಕ್ರಮಣ ಮತ್ತು ಪ್ರಚೋದನೆ ಇವುಗಳಡಿಯಲ್ಲಿ ಮಾತನಾಡದೆ, ಕಾರ್ಯ ಕೈಕೊಳ್ಳದೆ ಇರುವುದಾಗಿದೆ, ಯಾವಾಗಲೂ ಆತ್ಮದ ಆಂತರಿಕ ಸ್ಥಿರತೆ ಹಾಗೂ ಸಮಸ್ಥಾಯಿತ್ವಗಳ ಆಧಾರದ ಮೇಲೆ ಕ್ರಿಯೆ ಕೈಕೊಳ್ಳುವುದಾಗಿದೆ, ಮಾತನಾಡುವುದಾಗಿದೆ. ಈ ಸಮಚಿತ್ತತೆಯನ್ನು ಯಾವುದೇ ಪೂರ್ತಿ ಪ್ರಮಾಣದಲ್ಲಿ ಪಡೆಯುವುದು ಸುಲಭವಲ್ಲ, ಆದರೆ ಮನುಷ್ಯ, ಯಾವಾಗಲೂ, ಹೆಚ್ಚು ಹೆಚ್ಚಾಗಿ ಅದನ್ನು ತನ್ನ ಆಂತರಿಕ ಸ್ಥಿತಿಯ ಹಾಗೂ ಬಾಹ್ಯ ಚಲನೆಗಳ ಆಧಾರವನ್ನಾಗಿ ಮಾಡಬೇಕು.

ಸಮಚಿತ್ತತೆ ಇನ್ನೊಂದು ಅರ್ಥವನ್ನು ಹೊಂದಿದೆ – ಜನರು, ಅವರ ಸ್ವಭಾವ ಮತ್ತು ಕ್ರಿಯೆಗಳು, ಅವರು ಚಲಿಸುವಂತೆ ಮಾಡುವ ಶಕ್ತಿಗಳು ಇವುಗಳನ್ನೆಲ್ಲ ಸಮ ದೃಷ್ಟಿಯಿಂದ ನೋಡುವುದಾಗಿದೆ. ಮನುಷ್ಯ ತನ್ನ ವೈಯಕ್ತಿಕ ನೋಡುವಿಕೆ, ತೀರ್ಮಾನ, ಮನಸ್ಸಿನ ಪಕ್ಷಪಾತ ಇವುಗಳನ್ನು ಮನಸ್ಸಿನಿಂದ ದೂಡಿಬಿಟ್ಟು ಸತ್ಯವನ್ನು ನೋಡಲು ಸಮಚಿತ್ತತೆ ಸಹಾಯ ಮಾಡುತ್ತದೆ. ವೈಯಕ್ತಿಕ ಭಾವನೆ ಯಾವಾಗಲೂ ವಿಕಾರವನ್ನುಂಟು ಮಾಡುತ್ತದೆ ಮತ್ತು ಮನುಷ್ಯ ಜನರ ಕ್ರಿಯೆಗಳಲ್ಲಿ ಆ ಕ್ರಿಯೆಗಳನ್ನಷ್ಟೇ ಅಲ್ಲ, ಆದರೆ ಅವುಗಳ ಹಿಂದಿರುವ, ಬಹಳಷ್ಟು ಸಲ ಅಲ್ಲಿ ಇರದೇ ಇರುವ ವಿಷಯಗಳನ್ನು ನೋಡುವಂತೆ ಮಾಡುತ್ತದೆ. ಪರಿಣಾಮವಾಗಿ ತಪ್ಪಿಸಬಹುದಾಗಿದ್ದ ತಪ್ಪು ತಿಳಿವಳಿಕೆ ಹಾಗೂ ತಪ್ಪು ತೀರ್ಮಾನಗಳಿರುತ್ತವೆ. ಚಿಕ್ಕ ಪರಿಣಾಮಗಳಿರಬಹುದಾಗಿದ್ದ ವಿಷಯಗಳು ಹೆಚ್ಚು ದೊಡ್ಡ ಪ್ರಮಾಣಗಳನ್ನು ತಾಳುತ್ತವೆ. ಜೀವನದಲ್ಲಿ ಈ ಬಗೆಯ ಅರ್ಧಕ್ಕಿಂತ ಹೆಚ್ಚು ದುರದೃಷ್ಟ ಘಟನೆಗಳಿಗೆ ಇದೇ ಕಾರಣವಾಗಿದ್ದನ್ನು ನಾನು ನೋಡಿದ್ದೇನೆ. ಆದರೆ ಸಾಮಾನ್ಯ ಜೀವನದಲ್ಲಿ ವೈಯಕ್ತಿಕ ಭಾವನೆ ಹಾಗೂ ಸೂಕ್ಷ್ಮ ಸಂವೇದನೆ ಇವು ಮಾನವ ಸ್ವಭಾವದಲ್ಲಿ ಸತತ ಕಂಡುಬರುವ ಭಾಗದಲ್ಲಿರುತ್ತವೆ ಮತ್ತು ಅಲ್ಲಿ ಆತ್ಮ ಸಂರಕ್ಷಣೆಗಾಗಿ ಆವುಗಳ ಆವಶ್ಯಕತೆ ಇರಬಹುದು, ಆದಾಗ್ಯೂ ಅಲ್ಲಿಯೂ ಕೂಡ ಜನರು ಹಾಗೂ ವಿಷಯಗಳನ್ನು ಕುರಿತು ದೃಢತೆ, ವೈಶಾಲ್ಯ ಹಾಗೂ ಸಮಚಿತ್ತತೆಗಳುಳ್ಳ ಮನೋಭಾವ ಸುರಕ್ಷಿತತೆಗೆ ಹೆಚ್ಚು ಒಳ್ಳೆಯ ಸಾಧನವಾಗಿರುತ್ತದೆಂದು ನನಗನಿಸುತ್ತದೆ. ಆದರೆ ಸಾಧಕನಿಗೆ ಅವುಗಳ ಮೇಲೆ ಜಯ ಸಾಧಿಸುವುದು ಮತ್ತು ಹೆಚ್ಚಾಗಿ ಆತ್ಮದ ಸ್ಥಿರತೆಯ ಬಲದಲ್ಲಿ ಜೀವಿಸುವುದು ಅವನ ಪ್ರಗತಿಗೆ ಅವಶ್ಯವಾದ ಭಾಗವಾಗಿರುತ್ತದೆ.

*



ಸಮಚಿತ್ತತೆಯ ಅರ್ಥ ಹೊಸ ಅಜ್ಞಾನ ಇಲ್ಲವೆ ವಿವೇಚನಾರಾಹಿತ್ಯವಲ್ಲ, ಅದು ದೃಷ್ಟಿ ಮಬ್ಬಾಗುವುದಕ್ಕೆ ಮತ್ತು ಎಲ್ಲ ವರ್ಣಗಳನ್ನು ತೆಗೆದು ಹಾಕುವುದಕ್ಕೆ ಕರೆಕೊಡುವುದಿಲ್ಲ ಮತ್ತು ಅವುಗಳನ್ನು ಪ್ರಾರಂಭಿಸುವುದಿಲ್ಲ. ಅಲ್ಲಿ ಭಿನ್ನತೆಯಿರುತ್ತದೆ, ಅಭಿವ್ಯಕ್ತಿಯ ವ್ಯತ್ಯಾಸವಲ್ಲಿರುತ್ತದೆ, ಈ ವ್ಯತ್ಯಾಸಕ್ಕೆ ನಾವು ಮೆಚ್ಚುಗೆ ವ್ಯಕ್ತಪಡಿಸುತ್ತೇವೆ. ಈ ಮೆಚ್ಚುಗೆ ನಮ್ಮ ಕಣ್ಣು ಭೇದಭಾವದ ಮತ್ತು ತಪ್ಪು ಮಾಡುವ ಪ್ರೇಮ ಮತ್ತು ದ್ವೇಷ, ಪ್ರಶಂಸೆ ಮತ್ತು ಉಪೇಕ್ಷೆ, ಸಹಾನುಭೂತಿ ಮತ್ತು ಜುಗುಪ್ಸೆ, ಆಕರ್ಷಣೆ ಮತ್ತು ವಿಕರ್ಷಣೆ ಇವುಗಳಿಂದ ಮಬ್ಬಾದಾಗಿನಕಿಂತ ಹೆಚ್ಚು ನ್ಯಾಯಯುತವಾಗಿರುತ್ತದೆ. ಆದರೆ ಆ ವ್ಯತ್ಯಾಸದ ಹಿಂದೆ ನಾವು ದೈವೀ ಸಂಪೂರ್ಣನಾದವನನ್ನು, ದೈವೀ ಬದಲಾಗದವನನ್ನು ನೋಡುತ್ತೇವೆ, ಅವನು ಅದರಲ್ಲಿ ವಾಸಿಸುತ್ತಾನೆ. ಮತ್ತು ನಾವು ಆ ವಿಶಿಷ್ಟ ಪ್ರಕಟಣೆಯ ವಿವೇಕಯುತ ಉದ್ದೇಶ ಹಾಗೂ ದೈವೀ ಆವಶ್ಯಕತೆ ಇವುಗಳನ್ನು ಭಾವನೆಗೆ ತಂದುಕೊಳ್ಳುತ್ತೇವೆ, ತಿಳಿದುಕೊಳ್ಳುತ್ತೇವೆ ಇಲ್ಲವೆ ಕನಿಷ್ಠ ಪಕ್ಷ, ಅದು ನಮ್ಮಿಂದ ಅಡಗಿದ್ದರೆ, ಅದರಲ್ಲಿ ವಿಶ್ವಾಸವನ್ನಿರಿಸುತ್ತೇವೆ. ಆ ಪ್ರಕಟಣೆ ನಮ್ಮ ಮಾನವ ಮಾನದಂಡಗಳಿಗೆ ಸಾಮರಸ್ಯವುಳ್ಳದ್ದು ಮತ್ತು ಪರಿಪೂರ್ಣವಾದದ್ದು ಎಂದಾಗಲಿ ಇಲ್ಲವೆ ಒರಟಾದದ್ದು ಮತ್ತು ಅಪೂರ್ಣವಾದದ್ದು ಎಂದಾಗಲಿ, ಇಲ್ಲವೆ ಮಿಥ್ಯೆಯದು ಮತ್ತು ದುಷ್ಟವಾದದ್ದು ಎಂದು ಕೂಡ ತೋರಿಬರಬಹುದು.

**(23/661–62, 20/212)** **– ಶ್ರೀ ಅರವಿಂದರು**

*

## ಶಾಂತಿ

ಶಾಂತಿ ಸತ್ತೆಯಲ್ಲಿ ದೈವೀ ಸಾನ್ನಿಧ್ಯವಿರುವುದರ ಮೊದಲ ಕುರುಹು.

*

ನಿಮ್ಮ ಸತ್ತೆಯ ಆಳಗಳಲ್ಲಿಯೇ, ನಿಮ್ಮ ಎದೆಯಾಳದಲ್ಲಿ ದೈವೀ ಸಾನ್ನಿಧ್ಯ ಯಾವಾಗಲೂ ಪ್ರಕಾಶಮಯವಾಗಿ, ಶಾಂತಿಯುತವಾಗಿ, ಪ್ರೇಮ ಹಾಗೂ ವಿವೇಕಗಳಿಂದ ಕೂಡಿಕೊಂಡು ಇರುತ್ತದೆ. ಅದು ಅಲ್ಲಿರುವುದರಿಂದಾಗಿ ನೀವು ಅದರೊಡನೆ ಏಕತೆ ಪಡೆಯಬಹುದು ಮತ್ತು ಅದು ನಿಮ್ಮನ್ನು ಪ್ರಕಾಶಮಯ ಹಾಗೂ ತೇಜಸ್ಸುಳ್ಳ ಪ್ರಜ್ಞೆಯುಳ್ಳವರಾಗುವಂತೆ ಪರಿವರ್ತಿಸಬಹುದು.

ನೀವು ಹಾಗೂ ನಾನು ಕೂಡಿಕೊಂಡು ನಿಮ್ಮ ಸತ್ತೆಯ ಮೇಲ್ಮೈಯಲ್ಲಿರುವ

ಬಾಹ್ಯ ಸದ್ದನ್ನು ಅಡಗಿಸಲು ಪ್ರಯತ್ನಿಸೋಣ, ಅದರಿಂದಾಗಿ ಆ ನಿಶ್ಚಲನೀರವತೆಯಲ್ಲಿ ಮತ್ತು ಶಾಂತಿಯಲ್ಲಿ ನೀವು ಈ ಆಂತರಿಕ ವೈಭವದೊಡನೆ ಏಕತೆ ಪಡೆಯಬಹುದು.

ಆಗ ಆ ದಿನ ನೀವು ಹೊಸ ಜನ್ಮತಾಳಿದ ದಿನವಾಗುವುದು.

*

**ಪ್ರಶ್ನೆ :** *ಶ್ರೀಮಾತೆಯವರೆ ನಾನು ಹೆಚ್ಚು ಶಾಂತಿಯುತನಾಗುವಂತೆ ಮಾಡಿರಿ.*

**ಶ್ರೀಮಾತೆ :** ನೀನು ತಳಮಳಗೊಂಡ ಪ್ರತಿಸಲ, ನಿನ್ನೊಳಗೆ, ಬಾಹ್ಯದಲ್ಲಿ ಶಬ್ದ ಮಾಡದೆ ನನ್ನನ್ನು ಕುರಿತು ಯೋಚಿಸುತ್ತ "ಶಾಂತಿ, ಶಾಂತಿ, ಈ ನನ್ನ ಹೃದಯವೆ" ಎಂದು ಅದೇ ವೇಳೆಗೆ ಪುನರುಚ್ಚರಿಸುತ್ತಿರು. ಇದನ್ನು ಏಕಪ್ರಕಾರವಾಗಿ ಕೈಕೊಳ್ಳುತ್ತಿರು, ಅದರ ಪರಿಣಾಮ ನಿನಗೆ ಸಂತೋಷವನ್ನುಂಟು ಮಾಡುವುದು.

*

ದಿನಾಲು, ಕನಿಷ್ಠ ಪಕ್ಷ, ಎರಡು ಸಲ ಕೆಲನಿಮಿಷಗಳ ಕಾಲ ನಿಶ್ಚಲನೀರವತೆಯಲ್ಲಿರುವುದನ್ನು ಆಚರಣೆಯಲ್ಲಿ ತರಬೇಕು, ಅದು ಬಹಳ ಒಳ್ಳೆಯದು. ಆದರೆ ಅದು ನಿಜವಾದ ನಿಶ್ಚಲನೀರವತೆಯಾಗಿರಬೇಕು, ಕೇವಲ ಮಾತನಾಡದೆ ಉಳಿದುಕೊಳ್ಳುವುದಾಗಿರುವುದಿಲ್ಲ.

*

ನಿಶ್ಚಲನೀರವತೆ ಮತ್ತು ಪ್ರಶಾಂತತೆ ಇವು ರೋಗಕ್ಕೆ ಬಹಳ ಶ್ರೇಷ್ಠ ಉಪಾಯವಾಗಿರುತ್ತವೆ.

ನಮ್ಮ ಜೀವಕೋಶಗಳಲ್ಲಿ ಶಾಂತಿಯನ್ನು ತಂದುಕೊಳ್ಳಬಲ್ಲೆವಾದರೆ ಆಗ ನಾವು ರೋಗಮುಕ್ತರಾಗುತ್ತೇವೆ.

**(12/114, 17/365–66, 16/150, 3/196, 15/151) – ಶ್ರೀಮಾತೆ**

*

ಶಾಂತಿ ಏನೋ ಒಂದರಲ್ಲಿ ಆಳವಾಗಿರಿಸಿಕೊಂಡ ಸ್ಥಿರತೆ, ಅದು ಬಹುಮಟ್ಟಿಗೆ ಪ್ರಶಾಂತ, ತರಂಗರಹಿತ ಆನಂದದ ಮೊತ್ತದಂತಿರುತ್ತದೆ.

*



ಒಂದರ್ಥದಲ್ಲಿ ಈ ಜಡತ್ವ ಮತ್ತು ಶಾಂತಿ ಇವು ಕಪ್ಪು ಹಾಗೂ ಉಜ್ವಲ: 'ತಮಸ್ ಮತ್ತು ಶಮ' ಎಂಬ ರೀತಿಯಲ್ಲಿ ಒಂದು ಇನ್ನೊಂದರ ಪ್ರತಿರೂಪದ ಹಾಗಿರುತ್ತವೆ. ಉಚ್ಚತರ ಪ್ರಕೃತಿ ಶಾಂತಿಯಲ್ಲಿ ವಿಶ್ರಾಂತಿ ಕಂಡುಕೊಳ್ಳುತ್ತದೆ, ನಿಮ್ನತರ ಪ್ರಕೃತಿ ಆ ಶಾಂತಿಯನ್ನು ಚೈತನ್ಯದ ಸಡಲಿಕೆಯಲ್ಲಿ ಮತ್ತು ಅವಚೇತನದ ತಮಸ್ಸಿನತ್ತ ಮರಳುವುದರಲ್ಲಿ ಕಂಡುಕೊಳ್ಳುತ್ತದೆ.

*

ಉಚ್ಚತರ ಆಧ್ಯಾತ್ಮಿಕ ಪ್ರಜ್ಞೆಯವಾದ ದೈವೀ ಶಾಂತಿ, ಸಾಮರ್ಥ್ಯ, ಪ್ರಕಾಶ, ಆನಂದ ಇವೆಲ್ಲ ಎಲ್ಲರ ಮೇಲ್ಗಡೆ ಅರೆಮರೆಯಲ್ಲಿರುತ್ತವೆ. ಆ ಪ್ರಜ್ಞೆ ಕೆಳಗಿಳಿದು ಬರುವುದಕ್ಕಾಗಿ ಮೇಲ್ಮುಖವಾದ ಒಂದು ಬಗೆಯ ತೆರೆದಿರಿಸುವಿಕೆಯ ಆವಶ್ಯಕತೆ ಇದೆ – ಕೆಳಗಿಳಿದು ಬರುವ ದೈವೀ ಪ್ರಭಾವಕ್ಕೆ ಮನಸ್ಸಿನ ಅಚಂಚಲತೆ ಮತ್ತು ಒಂದು ಬಗೆಯ ವಿಸ್ತಾರವಾಗಿ ಏಕಾಗ್ರಗೊಂಡ ಜಡತ್ವ ಇವು ಅತ್ಯಂತ ಒಳ್ಳೆಯ ಸ್ಥಿತಿಗಳಾಗಿರುತ್ತವೆ.

**(23/642, 24/1199, 1184/85) – ಶ್ರೀ ಅರವಿಂದರು**

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 01/01/2014 ರಂದು ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ ಮತ್ತು ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಸಹಯೋಗದಲ್ಲಿ ನೂತನ ವರ್ಷ ಮತ್ತು ಸಂಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು. ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್‌ನ ಸಂಸ್ಥಾಪಕರಾದ ಶ್ರೀಜಿಯವರನ್ನು ಸನ್ಮಾನಿಸಲಾಯಿತು. ಶ್ರೀಜಿಯವರು ನಂತರ ಸಂಸ್ಥೆಯ ಸಿಬ್ಬಂದಿ ವರ್ಗದವರನ್ನು ಕುರಿತು ಮಾತನಾಡಿ ಶ್ರೀಮಾತಾರವಿಂದರ ವಿಚಾರಧಾರೆಗಳ ಬಗ್ಗೆ ಬೆಳಕು ಚೆಲ್ಲಿದರು.



*Be always ready to receive the Divine,*
*for He may visit you at any moment.*

- The Mother

**RNI No. 22511/1971**
No. of Pages **52 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459268

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.